19. ವೀರ ಯುವಜನರ ಬಗ್ಗೆ ಕವಿ ಯಾವ ಭಾವನೆ ವ್ಯಕ್ತಪಡಿಸಿದ್ದಾರೆ? (ಗ್ರಹಿಕೆ – ಸಾಧಾರಣ) (ಕ.ಫ 15)

20. ಹೊಸ ನಾಡನ್ನು ಕಟ್ಟುವಾಗ ಎದುರಾಗುವ ತೊಂದರೆಗಳನ್ನು ಕವಿ ಹೇಗೆ ಎದುರಿಸಲು ಹೇಳುತ್ತಾರೆ? (ಗ್ರಹಿಕೆ – ಸಾಧಾರಣ) (ಕ.ಫ 15)
21. ನಮ್ಮೆದೆಯ ಕನಸುಗಳ ಬಗ್ಗೆ ಕವಿ ಏನು ಹೇಳಿದ್ದಾರೆ? (ಗ್ರಹಿಕೆ – ಸಾಧಾರಣ) (ಕ.ಫ 15)
22. ಹೊಸ ನಾಡಿನ ಗುಡಿಯು ಯಾವುದರಿಂದ ನಿರ್ಮಾಣವಾಗುತ್ತದೆ? (ಗ್ರಹಿಕೆ – ಸಾಧಾರಣ) (ಕ.ಫ 15)
23. ಈ ಕವನದ ಮುಖ್ಯ ಸಂದೇಶವೇನು? (ಗ್ರಹಿಕೆ – ಸಾಧಾರಣ) (ಕ.ಫ 15)
24. ನಿಮ್ಮ ಕಲ್ಪನೆಯಲ್ಲಿ ನವ ಭಾರತ ಹೇಗಿದೆ ಎಂದು ಪುಟ್ಟ ಪ್ರಬಂಧ ಬರೆಯಿರಿ. (ಗ್ರಹಿಕೆ – ಸಾಧಾರಣ) (ಕ.ಫ 15)

# 5. ಆಟೋರಿಕ್ಷಾದ ರಸಪ್ರಸಂಗಗಳು

**1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ |
|---|---|---|---|---|
| ಪ್ರಶ್ನೆಗಳು | 10 | 11 | 01 | - |
| ಅಂಕಗಳು | 10 | 22 | 02 | - |

**2. ಪ್ರಶ್ನಾನುಸಾರ ಪ್ರಾಮುಖ್ಯತೆ :**

| ಕ್ರ.ಸಂ | ಪ್ರಶ್ನೆಯ ಸ್ವರೂಪ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಕಿರು ಉತ್ತರ -1 (1 ಅಂಕದ ಪ್ರಶ್ನೆ) | 10 | 10 |
| 2 | ಕಿರು ಉತ್ತರ -2 (2 ಅಂಕಗಳ ಪ್ರಶ್ನೆ) | 24 | 12 |

*****

**ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : (1 ಅಂಕ)**

1. ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದವರು ಯಾರು ? (ಸ್ಮರಣೆ – ಸುಲಭ) (ಕ.ಫ 8)
2. ಜಯನಗರದಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಕಾರ್ಯಕ್ರಮ ಮುಗಿಯುವುದು ರಾತ್ರಿ ಎಷ್ಟು ಘಂಟೆಯಾಯಿತು**?** (ಸ್ಮರಣೆ – ಸುಲಭ) (ಕ.ಫ 8)
3. ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದು ಲೇಖಕರಿಗೆ ಹೇಗಿತ್ತು? (ಸ್ಮರಣೆ – ಸುಲಭ) (ಕ.ಫ 8)
4. ಲೇಖಕರು ಸಾಮಾನ್ಯವಾಗಿ ಸಮೀಪದ ಸ್ಥಳಗಳಿಗೆ ಹೇಗೆ ಹೋಗುತ್ತಿದ್ದರು? (ಸ್ಮರಣೆ – ಸುಲಭ) (ಕ.ಫ 8)
5. ಲೇಖಕರಿಗೆ ಆಟೋರಿಕ್ಷಾ ಕಂಡರೆ ಏಕೆ ಭಯವಾಗುತ್ತಿತ್ತು? (ಸ್ಮರಣೆ – ಸುಲಭ) (ಕ.ಫ 8)
6. ಆಟೋರಿಕ್ಷಾ ಪ್ರಯಾಣದಿಂದ ಯಾವ ಎರಡು ಅಪಾಯಗಳಾಗಬಹುದು ಎಂದು ಲೇಖಕರು ಹೇಳಿದ್ದಾರೆ? (ಸ್ಮರಣೆ – ಸುಲಭ) (ಕ.ಫ 8)
7. ಮೊದಲ ಆಟೋ ಚಾಲಕನು ಲೇಖಕರಿಗೆ ಏನೆಂದು ಹೇಳಿದನು? (ಸ್ಮರಣೆ – ಸುಲಭ) (ಕ.ಫ 8)
8. ವಿಮಾನ ಪ್ರಯಾಣದ ಬಗ್ಗೆ ಲೇಖಕರು ಏನು ಹೇಳಿದರು? (ಸ್ಮರಣೆ – ಸುಲಭ) (ಕ.ಫ 8)
9. ವಿಧಾನಸೌಧದ ಬಳಿ ಆಟೋ ಚಾಲಕನು ಲೇಖಕರನ್ನು ಹೇಗೆ ಗುರುತಿಸಿದನು? (ಸ್ಮರಣೆ – ಸುಲಭ) (ಕ.ಫ 8)
10. ವಯಸ್ಸಾದ ಆಟೋ ಚಾಲಕನು ಲೇಖಕರಿಗೆ ಯಾವ ಸಹಾಯ ಮಾಡಲು ಮುಂದಾದನು? (ಸ್ಮರಣೆ – ಸುಲಭ) (ಕ.ಫ 8)

**ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : (2 ಅಂಕ)**

11. ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರ ಅಭಿಪ್ರಾಯವೇನು **?** **(**ಗ್ರಹಿಕೆ–ಸಾಧಾರಣ) (ಕ.ಫ 15)
12. ದೇಹಕ್ಕೆಲ್ಲ ನಟ್ಟು ಬೋಲ್ಟ್ ಹಾಕಿಸಿಕೊಳ್ಳುವುದಕ್ಕಿಂತ ಯಾವುದು ಲೇಸು **?** **(**ಗ್ರಹಿಕೆ – ಸಾಧಾರಣ) (ಕ.ಫ 15)
13. ಸಿಡುಕಿನಿಂದ ಆಟೋ ಸ್ಟಾರ್ಟ್ ಮಾಡಿದ ಆಟೋ ಚಾಲಕ ಏನೆಂದು ಹೇಳಿದನು **?** **(**ಗ್ರಹಿಕೆ – ಸಾಧಾರಣ) (ಕ.ಫ 15)
14. ಲೇಖಕರಿಗೆ ವಿಮಾನಯಾನದ ಬಗ್ಗೆ ಭಯವಿಲ್ಲವೇಕೆ **? (**ಗ್ರಹಿಕೆ – ಸಾಧಾರಣ) (ಕ.ಫ 15)

15. ಲೇಖಕರಿಗೆ ಆಟೋರಿಕ್ಷಾ ಪ್ರಯಾಣದ ಬಗ್ಗೆ ಏಕೆ ಭಯವಿತ್ತು**? (**ಗ್ರಹಿಕೆ – ಸಾಧಾರಣ) (ಕ.ಫ 15)
16. ಆಟೋರಿಕ್ಷಾ ಪ್ರಯಾಣದಿಂದ ಉಂಟಾಗಬಹುದಾದ ಎರಡು ಅಪಾಯಗಳು ಯಾವುವು**? (**ಗ್ರಹಿಕೆ – ಸಾಧಾರಣ) (ಕ.ಫ 15)
17. ಒಬ್ಬ ಆಟೋ ಚಾಲಕನು ಅಪಘಾತಗಳ ಬಗ್ಗೆ ಯಾವ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿದನು**? (**ಗ್ರಹಿಕೆ – ಸಾಧಾರಣ) (ಕ.ಫ 15)
18. ವಿಮಾನ ಪ್ರಯಾಣದ ಬಗ್ಗೆ ಲೇಖಕರು ಆಟೋ ಚಾಲಕನಿಗೆ ಏನು ಉತ್ತರಿಸಿದರು**? (**ಗ್ರಹಿಕೆ – ಸಾಧಾರಣ) (ಕ.ಫ 15)
19. ವಿಧಾನಸೌಧದ ಬಳಿ ಸಿಕ್ಕ ಆಟೋ ಚಾಲಕನು ಲೇಖಕರೊಂದಿಗೆ ಹೇಗೆ ವರ್ತಿಸಿದನು**? (**ಗ್ರಹಿಕೆ – ಸಾಧಾರಣ) (ಕ.ಫ 15)
20. ರಾತ್ರಿ ಸಮಯದಲ್ಲಿ ವಯಸ್ಸಾದ ಆಟೋ ಚಾಲಕನು ಲೇಖಕರಿಗೆ ಯಾವ ಸಹಾಯ ಮಾಡಲು ಮುಂದಾದನು**?** **(**ಗ್ರಹಿಕೆ – ಸಾಧಾರಣ) (ಕ.ಫ 15)
21. ಈ ಪಾಠದಿಂದ ಆಟೋ ಚಾಲಕರ ಬಗ್ಗೆ ಯಾವ ಸಂದೇಶ ಸಿಗುತ್ತದೆ**?** **(**ಗ್ರಹಿಕೆ – ಸಾಧಾರಣ) (ಕ.ಫ **15)**
22. ನಿಮ್ಮ ಜೀವನದ ಆಶ್ರುಮಯ ಸನ್ನಿವೇಶಗಳನ್ನು ಬರೆಯಿರಿ**(**ಅಭಿವ್ಯಕ್ತಿ – ಸಾಧಾರಣ) (ಕ.ಫ 15)

## 6. ಸೀಮೆ

**1. ಉದ್ದಿಷ್ಟಾನುಸಾರ ಪ್ರಾಮುಖ್ಯತೆ :**

| | ಸ್ಮರಣೆ | ಗ್ರಹಿಕೆ | ಅಭಿವ್ಯಕ್ತಿ | ಪ್ರಶಂಸೆ |
|---|---|---|---|---|
| ಪ್ರಶ್ನೆಗಳು | 09 | 12 | - | - |
| ಅಂಕಗಳು | 09 | 24 | - | - |

**2. ಪ್ರಶ್ನಾನುಸಾರ ಪ್ರಾಮುಖ್ಯತೆ :**

| ಕ್ರ.ಸಂ | ಪ್ರಶ್ನೆಯ ಸ್ವರೂಪ | ಅಂಕಗಳು | ಪ್ರಶ್ನೆಗಳು |
|---|---|---|---|
| 1 | ಕಿರು ಉತ್ತರ -1 (1 ಅಂಕದ ಪ್ರಶ್ನೆ) | 09 | 09 |
| 2 | ಕಿರು ಉತ್ತರ -2 (2 ಅಂಕಗಳ ಪ್ರಶ್ನೆ) | 24 | 12 |

*****

**ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : (1 ಅಂಕ)**

1. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು**?** (ಸ್ಮರಣೆ – ಸುಲಭ) (ಕ.ಫ 8)
2. ತಿಮ್ಮರಾಯ ಮರಕ್ಕೆ ನೂರೇಟು ಹಾಕಿದಾಗ ಹಾಲಿನ ಬದಲು ಏನು ಚಿಮ್ಮತೊಡಗಿತು? (ಸ್ಮರಣೆ – ಸುಲಭ) (ಕ.ಫ 8)
3. ಪ್ರಶ್ನೆ: ಶಿವಾಪುರದ ಅಂಚಿನಲ್ಲಿ ಕೂತಿದ್ದ ಮುದುಕನ ವಿಶೇಷತೆ ಏನಾಗಿತ್ತು? (ಸ್ಮರಣೆ – ಸುಲಭ) (ಕ.ಫ 8)
4. ತಿಮ್ಮರಾಯನು ಪಟ್ಟಣಕ್ಕೆ ಹೋಗಲು ಏಕೆ ಹೊರಟನು? (ಸ್ಮರಣೆ – ಸುಲಭ) (ಕ.ಫ 8)
5. ಮುದುಕಿಯು ತಿಮ್ಮರಾಯನ ಹಸಿವು ನೀಗಿಸಲು ಏನು ತೋರಿಸಿದಳು? (ಸ್ಮರಣೆ–ಸುಲಭ) (ಕ.ಫ 8)
6. ನೀರಿನ ಮರದಿಂದ ನೀರು ಪಡೆಯಲು ತಿಮ್ಮರಾಯನು ಏನು ಮಾಡಬೇಕಾಗಿತ್ತು? (ಸ್ಮರಣೆ – ಸುಲಭ) (ಕ.ಫ 8)
7. ಮುದುಕಿಯು ತಿಮ್ಮರಾಯನಿಗೆ ಯಾವ ಎಚ್ಚರಿಕೆಯನ್ನು ನೀಡಿದಳು? (ಸ್ಮರಣೆ–ಸುಲಭ) (ಕ.ಫ 8)
8. ಮುದುಕನು ಕಥೆಯ ಮೂಲಕ ಯಾವ ಸಂದೇಶ ನೀಡಿದ್ದಾನೆ? (ಸ್ಮರಣೆ – ಸುಲಭ) (ಕ.ಫ 8)
9. "ಹಾಲಿನ ಮರಕ್ಕೆ ಏಟು ಹಾಕುವುದನ್ನು ನಿಲ್ಲಿಸಿ" ಎಂಬುದರ ಅರ್ಥವೇನು? (ಸ್ಮರಣೆ – ಸುಲಭ) (ಕ.ಫ 8)

**ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : (2 ಅಂಕ)**

10. ತಿಮ್ಮರಾಯನಿಗೆ ಮುದುಕಿಯು ವಿಧಿಸಿದ ಸೀಮೆಗಳನ್ನು ತಿಳಿಸಿ**?** (ಗ್ರಹಿಕೆ- ಸಾಧಾರಣ) (ಕ.ಫ 15)
11. ಶಿವಪುರದಲ್ಲಿ ಮುದುಕ ಏಕೆ ಚಿಂತಿಸುತ್ತಿದ್ದರು**?** (ಗ್ರಹಿಕೆ- ಸಾಧಾರಣ) (ಕ.ಫ 15)
12. ಮುದುಕನು ಹೇಳುವಂತ ಕಥೆಯ ನಿಜ ಸಂಗತಿ ಯಾವುದು**?** (ಗ್ರಹಿಕೆ- ಸಾಧಾರಣ) (ಕ.ಫ 15)
13. ಆಸೆ ಮಿತಿಮೀರಿ ತಿಮ್ಮರಾಯ ಮಾಡಿದ್ದೇನು**?** (ಗ್ರಹಿಕೆ- ಸಾಧಾರಣ) (ಕ.ಫ 15)
14. ಶಿವಪುರದ ಅಂಚಿನಲ್ಲಿ ಕೂತಿದ್ದ ಮುದುಕನ ವಿಶೇಷತೆ ಏನಾಗಿತ್ತು**?** (ಗ್ರಹಿಕೆ- ಸಾಧಾರಣ) (ಕ.ಫ 15)
15. ತಿಮ್ಮರಾಯನು ಪಟ್ಟಣಕ್ಕೆ ಹೋಗಲು ಏಕೆ ನಿರ್ಧರಿಸಿದನು**?** (ಗ್ರಹಿಕೆ- ಸಾಧಾರಣ) (ಕ.ಫ 15)

16. ಮುದುಕಿಯು ತಿಮ್ಮರಾಯನಿಗೆ ಯಾವ ರೀತಿಯಲ್ಲಿ ಸಹಾಯ ಮಾಡಿದಳು**?** (ಗ್ರಹಿಕೆ- ಸಾಧಾರಣ) (ಕ.ಫ 15)
17. ಮುದುಕಿಯು ತಿಮ್ಮರಾಯನಿಗೆ ಯಾವ ಸೀಮೆಗಳನ್ನು ತಿಳಿಸಿದಳು**? (**ಗ್ರಹಿಕೆ**-** ಸಾಧಾರಣ**)** (ಕ.ಫ 15)
18. ತಿಮ್ಮರಾಯನು ಮುದುಕಿಯ ಮಾತನ್ನು ಏಕೆ ಮರೆತನು**? (**ಗ್ರಹಿಕೆ**-** ಸಾಧಾರಣ**)** (ಕ.ಫ 15)
19. ಹಾಲಿನ ಮರಕ್ಕೆ ನೂರೇಟು ಹಾಕಿದಾಗ ಏನಾಯಿತು**? (**ಗ್ರಹಿಕೆ**-** ಸಾಧಾರಣ**)** (ಕ.ಫ 15)
20. ಮುದುಕನು ಕಥೆಯ ಮೂಲಕ ಯಾವ ಎಚ್ಚರಿಕೆಯನ್ನು ನೀಡಿದ್ದಾನೆ**? (**ಗ್ರಹಿಕೆ**-** ಸಾಧಾರಣ**)** (ಕ.ಫ 15)
21. **"**ಹಾಲಿನ ಮರಕ್ಕೆ ಏಟು ಹಾಕುವುದನ್ನು ನಿಲ್ಲಿಸಿ" ಎಂಬ ಮಾತಿನ ಅರ್ಥವೇನು**?** (ಗ್ರಹಿಕೆ- ಸಾಧಾರಣ) (ಕ.ಫ 15)

# ಮಾದರಿ ಉತ್ತರಗಳು

## ಗದ್ಯ ಭಾಗ

### 1. ಮಗ್ಗದ ಸಾಹೇಬ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :**

1. (ಸಿ) 49
2. (ಎ) ಸ್ವರಗಳು
3. (ಡಿ) ಙ ಞ ಣ ನ ಮ
4. ಬಿ) ಕುಶಲ
5. (ಡಿ) ಪ್ಲುತ ಸ್ವರ
6. (ಬಿ) ವ್ಯಂಜನಗಳು
7. (ಎ) ಅಲ್ಪಪ್ರಾಣ
8. (ಸಿ) ಯೋಗವಾಹಗಳು
9. (ಎ) ಔದ್ಯೋಗಿಕ ಶಿಕ್ಷಣ
10. (ಎ) ಮಣ್ಣಿನ ಮಡಿಕೆ
11. (ಎ) ಸೃಜನಶೀಲತೆ ಮತ್ತು ಕೈಚಳಕ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :**

12. ಗುಟ್ಟು/ರಹಸ್ಯ
13. 09
14. ಓಷ್ಠ್ಯ ಅಕ್ಷರಗಳು
15. 07

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ) :**

16. ರಹೀಮನು ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಗಳಾಗಿತ್ತು.
17. ಹುಸೇನ್ ಸಾಹೇಬರ ಮನೆತನದವರಿಗೆ ಎಲ್ಲರಿಗಿಂತ ಮೊದಲು ಪ್ರಸಾದವನ್ನು ಸ್ವೀಕರಿಸುವ ಹಕ್ಕು ಇತ್ತು.
18. ತನ್ನ ಮೂವರು ಗಂಡು ಮಕ್ಕಳಿಗೆ ಒಂದಿಷ್ಟಾದರು ವಿದ್ಯಾಭ್ಯಾಸವನ್ನು ಕೊಡಿಸಿ ಸರ್ಕಾರಿ ನೌಕರರನ್ನಾಗಿಸುವುದು ರಹೀಮನ ಹಠವಾಗಿತ್ತು.
19. ಒಬ್ಬ ಸರಕಾರಿ ಕಛೇರಿಯಲ್ಲಿ ಗುಮಾಸ್ತನಾಗಿ, ಇನ್ನೊಬ್ಬ ಪೋಸ್ಟ್ ಮಾಸ್ತರನಾಗಿ ತಂದೆಯ ಆಸೆಯನ್ನು ನೆರವೇರಿಸಿದರು.
20. ಕರೀಮನಿಗಿದ್ದ ಮಗ್ಗದ ಹುಚ್ಚನ್ನು ಬಿಡಿಸಬೇಕೆಂದು ರಹೀಮ ಮಗನನ್ನು ಶಾಲೆಯಿಂದ ಬಿಡಿಸಿದನು.
21. ಕಲೆ, ವಿಜ್ಞಾನ, ಸಮಾಜಸೇವೆ, ಕ್ರೀಡೆ ಮುಂತಾದ ಕ್ಷೇತ್ರದಲ್ಲಿ ವಿಶೇಷ ಸಾಧನೆಯನ್ನು ಮಾಡಿದ ಸಾಧಕರಿಗೆ ಭಾರತ ಸರಕಾರ ನೀಡುವ ಮೌಲಿಕ ಪ್ರಶಸ್ತಿ.
22. ಶಾಲೆಗಳಲ್ಲಿ ಮಹಾತ್ಮ ಗಾಂಧೀಜಿಯವರ ಪ್ರೇರಣೆಯಿಂದ ನವೀನ ಶಿಕ್ಷಣ ಆರಂಭವಾಯಿತು.

23. ಕರೀಮನು ರಾಷ್ಟ್ರಪತಿಯವರಿಂದ ಪಡೆದ ಬಿರುದು ಪದ್ಮಭೂಷಣ'.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

24. ಹುಸೇನ್ ಸಾಹೇಬರು ಜನಪ್ರಿಯ ಹಾಗೂ ಧನವಂತ ವ್ಯಕ್ತಿಯಾಗಿದ್ದರು, ಅವರು ಮಸೀದಿ ಮಾತ್ರವಲ್ಲ, ದೇವಸ್ಥಾನವನ್ನು ಕಟ್ಟಿಸಿದ್ದರು.

25. ಲೇಖಕರ ಹುಟ್ಟೂರಿನಲ್ಲಿ ಒಂದು ಪವಿತ್ರ ಸ್ಥಾನವಿದೆ ಅಲ್ಲಿ 'ಉರ್ಸ್' ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ಲೇಖಕರ ಮನೆತನದ ಒಬ್ಬ ಪ್ರತಿನಿಧಿ ಇರಬೇಕೆಂಬ ಸಂಪ್ರದಾಯವಿತ್ತು.

26. ಮಿಠಾಯಿ ಕೊಟ್ಟಿದ್ದಕ್ಕೆ ಅತಿಥಿಗಳು 'ರಾಯರೇ, ಅಂಗಡಿಯಲ್ಲಿ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೆ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲವನ್ನೋ ಕಲ್ಲು ಸಕ್ಕರೆ ಹರಳನ್ನೋ ಕೊಡಿ. ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ತಲತಲಾಂತರದಿಂದ ಬಂದ ಹಳೆಯ ಸಂಪ್ರದಾಯ. ಅಂಗಡಿಯಿಂದ ತಂದ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ? ಎಂದು ಆಕ್ಷೇಪಿಸಿದರು.

27. ಕರೀಮನು ಸ್ವಂತ ಶ್ರಮದಿಂದ ಹಣ ಸಂಪಾದಿಸಿದ್ದನು ಅಲ್ಲದೆ ಕೀರ್ತಿವಂತನೂ ಆಗಿದ್ದನು. ಮತ್ತು ಅವನಿಗೆ ತಂದೆ ತಾಯಿಯ ಮೇಲೆ ಅಪಾರ ಗೌರವವಿತ್ತು, ತಂದೆ ಕೋಪಿಸಿಕೊಂಡರೂ ಬೇಸರಗೊಳ್ಳದೆ ತಮ್ಮ ಗುರುಗಳಾದ ಶಂಕರಪ್ಪನವರ ಬಳಿಗೆ ಹೋಗಿ ಕೇಳಿಕೊಂಡನು.

28. ಶಾಲೆಯ ವಾರ್ಷಿಕೋತ್ಸವದ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ಒಂದು ನಾಟಕವಿತ್ತು. ಅದರಲ್ಲಿ ಕರೀಮನು ಸ್ತ್ರೀಪಾತ್ರ ಮಾಡಿದ್ದನು. ಅದಕ್ಕೆಂದು ತಾಯಿಯಿಂದ ಗೌಪ್ಯವಾಗಿ ಹಳೆ ಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡು ಬಂದಿದ್ದನು. ನಾಟಕ ಮುಗಿದ ನಂತರ ಮನೆಗೆ ಹೋಗದೆ ಎಲ್ಲೋ ಮಾಯವಾಗಿ ಹೋದನು.

29. ನವೀನ ಶಿಕ್ಷಣ ಮಹಾತ್ಮ ಗಾಂಧೀಜಿಯವರ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ ಪ್ರಾರಂಭವಾಯಿತು. ಈ ಶಿಕ್ಷಣ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು, ಅದರಲ್ಲಿ ಹಸ್ತ ಕೌಶಲ್ಯವನ್ನು ದೇಹ ಶ್ರಮದಲ್ಲಿ ಗೌರವ ಭಾವವನ್ನು ಉಂಟು ಮಾಡುವುದು ಒಂದು ಭಾಗವಾಗಿತ್ತು. ಕೆಲವರಿಗೆ ಬಡಗಿಯ ಕೆಲಸ, ಕೆಲವರಿಗೆ ಬೆತ್ತದ ಕುರ್ಚಿ ಕೆಲಸ, ಕೆಲವರಿಗೆ ಸಾಮಗ್ರಿಗಳನ್ನು ಮಾಡುವ, ಕೆಲವರಿಗೆ ಕೃಷಿ, ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸಲಾಗುತ್ತಿತ್ತು.

30. ಕರೀಮನು ಶಂಕರಪ್ಪ ಅವರ ಮನೆಗೆ ಹೋಗಿ ತನ್ನ ತಂದೆಯೊಡನೆ ಸಂಧಾನ ಮಾಡಿಸಿರಿ ಎಂದು ಕೇಳಿಕೊಂಡನು. ಆಗ ಅಲ್ಲಿಗೆ ಶಂಕರಪ್ಪ ಹೋಗಿ ರಹೀಮನೊಡನೆ ಒಂದು ಗಂಟೆ ಗೋಗರೆದರು, ನಿವೇಧಿಸಿದರು, ತರ್ಕಿಸಿದರು, ಚರ್ಚಿಸಿದರು. ಆದರೆ ರಹೀಮ್ ಒಂದು ಪದವನ್ನು ತಾಳ್ಮೆಯಿಂದ ಕೇಳದೆ, ' ಸಾಹೇಬ್ ಬಹದ್ದೂರ್ ಹುಸೇನ್ ಸಾಹೇಬರ ಕೀರ್ತಿಗೆ ಮಸಿ ಹಚ್ಚಿದ್ದಾನೆ. ನೀವು ಕಲಿಸಿದ ಪಾಠದಿಂದಲೇ ಈ ಹಠಮಾರಿ ನಮ್ಮ ವಂಶದ ಕೀರ್ತಿಯನ್ನು ಮಣ್ಣು ಪಾಲು ಮಾಡಿದ, ಹಣ ತಂದಿದ್ದಾನಂತೆ, ಕಳವಿನ ಹಣವೋ ದರೋಡೆಯ ಹಣವೋ?' ಒಂದು ರಹೀಮ ಸಿಡುಕಿದ, ಆಗ ಶಂಕರಪ್ಪಅವರು ಮುಖ ಬಾಡಿಸಿಕೊಂಡು ಹಿಂತೆರಳಿದರು.

31. ಬ್ರಿಟಿಷರು ಅಗ್ಗದ ವಿಲಾಯಿತಿ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿಬಿಟ್ಟರು. ಅವೇನೋ ನಿಜಕ್ಕೂ ನಿಕೃಷ್ಟ ವಸ್ತುಗಳು ಒಂದು ವರ್ಷದೊಳಗೇ ಕಳೆಬರಗಳಾಗಿ ಹರುಕು ಚಿಂದಿಯಾಗುವುವು. ಬಣ್ಣವೋ ಒಂದೇ ತಿಂಗಳಲ್ಲಿ ವಿವರ್ಣವಾಗಿ ಎರಡೇ ತಿಂಗಳಲ್ಲಿ ಮಾಯವಾಗುವು ಎಂಬ ಕಾರಣದಿಂದ.

32.

| **ಕಂಠ್ಯ** | **ತಾಲವ್ಯ** | **ದಂತ್ಯ** |
|---|---|---|
| ಕ | ಚ | ಟ |
| ಖ | ಛ | ಠ |
| ಗ | ಜ | ಡ |
| ಘ | ಝ | ಢ |

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

33. ಬಾಗಲೋಡಿ ದೇವರಾಯರವರು 1927 ರಲ್ಲಿ ದಕ್ಷಿಣ ಕನ್ನಡಜಿ ಲ್ಲೆಯ ಬಾಗಲೋಡಿಯಲ್ಲಿ ಜನಿಸಿದರು. ಶ್ರೀಯುತರು ಹುಚ್ಚು ಮನಸ್ಸಿನ ಮುನಸೀಫ ಮತ್ತು ಇತರ ಕಥೆಗಳು, ಆರಾಧನಾ, ರುದ್ರಪ್ಪನ ರೌದ್ರ ಮತ್ತು ಇತರ ಕತೆಗಳು ಕೃತಿಗಳನ್ನು ರಚಿಸಿದ್ದಾರೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

34. **ಆಯ್ಕೆ:** ಈ ವಾಕ್ಯವನ್ನು ಬಾಗಲೋಡಿ ದೇವರಾಯ ಅವರು ಬರೆದಿರುವ 'ಸಮಗ್ರ ಕತೆಗಳು' ಕೃತಿಯಿಂದ ಆಯ್ದ 'ಮಗ್ಗದ ಸಾಹೇಬ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
**ಸಂದರ್ಭ:** ರಹೀಮನಿಗೆ ಮಗ್ಗದ ಸಾಹೇಬ ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ. ರಹೀಮನಿಗೆ ಮಗ್ಗವೆಂದರೆ ದ್ವೇಷ. ಅವನನ್ನು ಮಗ್ಗದ ಸಾಹೇಬ ಎಂದು ಕರೆದರೆ ಅವನು ಕೋಪದಿಂದ "ಅನಿಷ್ಟ ಮಗ್ಗದ ಹೆಸರೆತ್ತಬೇಡಿ – ಮಗ್ಗವಲ್ಲ ಕೊರಳಿಗೆ ಹಗ್ಗ!" ಎಂದು ರೋಷದಿಂದ ಹೇಳುತ್ತಿದ್ದನು.
**ಸ್ವಾರಸ್ಯ:** ಬ್ರಿಟಿಷರ ವಿಲಾಯಿತಿ ಮಿಲ್ಲಿನ ಬಟ್ಟೆಗಳಿಂದಾಗಿ ಕೈಮಗ್ಗದ ಬಟ್ಟೆಗಳು ಬೆಲೆ ಕಳೆದುಕೊಂಡಿದ್ದರಿಂದ ಅವನು ಮಗ್ಗದ ಬಗ್ಗೆ ಸಿಟ್ಟಾಗಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

35. **ಆಯ್ಕೆ:** ಈ ವಾಕ್ಯವನ್ನು ಬಾಗಲೋಡಿ ದೇವರಾಯ ಅವರು ಬರೆದಿರುವ 'ಸಮಗ್ರ ಕತೆಗಳು' ಕೃತಿಯಿಂದ ಆಯ್ದ 'ಮಗ್ಗದ ಸಾಹೇಬ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಕರೀಮನು ನಾಟಕದಲ್ಲಿ ಅಲಂಕಾರ ಮಾಡಿಕೊಳ್ಳಲೆಂದು ತಾಯಿಯಿಂದ ಹಳೆ ಕಾಲದ ಒಂದು ಚಿನ್ನದ ಸರವನ್ನು ತೆಗೆದುಕೊಂಡಿದ್ದನು. ಆದರೆ ನಾಟಕ ಮುಗಿದ ನಂತರ ಮನೆಗೆ ಬರಲಿಲ್ಲ. ಎಲ್ಲೋ ಮಾಯವಾಗಿ ಹೋದ. ಆ ಸಂದರ್ಭದಲ್ಲಿ ಕೋಪಗೊಂಡ ಆತನ ತಂದೆ ರಹೀಮನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ರಹೀಮನ ಹಠ, ಮಗನ ನಡವಳಿಕೆಯ ಬಗ್ಗೆ ಆತನಿಗಿದ್ದ ಕೋಪ ಈ ಮಾತಿನಲ್ಲಿ ಸ್ವಾರಸ್ಯವಾಗಿ ಮೂಡಿ ಬಂದಿದೆ.

36. **ಆಯ್ಕೆ:** ಈ ವಾಕ್ಯವನ್ನು ಬಾಗಲೋಡಿ ದೇವರಾಯ ಅವರು ಬರೆದಿರುವ 'ಸಮಗ್ರ ಕತೆಗಳು' ಕೃತಿಯಿಂದ ' ಆಯ್ದ ಮಗ್ಗದ ಸಾಹೇಬ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** ಕರೀಮನು ಹತ್ತು ಸಾವಿರ ರೂಪಾಯಿ ಮತ್ತು ತಾಯಿಯ ಸರದೊಂದಿಗೆ ಮನೆಗೆ ಬಂದಾಗ ಆತನ ತಂದೆ ಅವನನ್ನು ಮನೆಗೆ ಸೇರಿಸದೆ ಬಾಗಿಲು ಮುಚ್ಚಿದನು. ಆಗ ಕರೀಮನು ಶಂಕರಪ್ಪ ಮಾಸ್ತರರ ಬಳಿ ಹೋಗಿ ತನ್ನ ತಂದೆಯೊಡನೆ ಸಂಧಾನ ಮಾಡಿಸಿ ಎಂದು ಕೇಳಿಕೊಳ್ಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ಇಲ್ಲಿ ಕರೀಮನ ಸಾಧನೆ, ತಂದೆ-ತಾಯಿಯ ಮೇಲೆ ಇಟ್ಟಿದ್ದ ಪ್ರೀತಿ, ಮುಖ್ಯೋಪಾಧ್ಯಾಯರಲ್ಲಿ ಆತನು ವಿನಂತಿಸಿಕೊಳ್ಳುವ ರೀತಿ ಈ ಮಾತಿನಲ್ಲಿ ಸ್ವಾರಸ್ಯವಾಗಿ ಮೂಡಿ ಬಂದಿದೆ.

37. **ಆಯ್ಕೆ:** ಈ ವಾಕ್ಯವನ್ನು ಬಾಗಲೋಡಿ ದೇವರಾಯ ಅವರು ಬರೆದಿರುವ 'ಸಮಗ್ರ ಕತೆಗಳು' ಕೃತಿಯಿಂದ ಆಯ್ದ 'ಮಗ್ಗದ ಸಾಹೇಬ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:** 'ನಿಮ್ಮ ಮಗ ಕರೀಮನಿಗೆ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಟ್ಟಿದ್ದಾರೆ'. ಆ ವಿಷಯ ಪತ್ರಿಕೆಯಲ್ಲಿ ಬಂದಿದೆ ಎಂದು ಶಂಕರಪ್ಪ ಅವರು ಮುದುಕನಾಗಿದ್ದ ರಹೀಮನಿಗೆ ಹೇಳಿದಾಗ ರಹೀಮನು ಸಂತೋಷದಿಂದ ಹೆಮ್ಮೆ ಪಡುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** ತನ್ನ ಮಗ ಕರೀಮನ ಬಗ್ಗೆ ಕೆಟ್ಟ ಅಭಿಪ್ರಾಯ ಹೊಂದಿದ್ದ ರಹೀಮನಿಗೆ ತನ್ನ ಮಗನ ಸಾಧನೆಯನ್ನು ಕೇಳಿ ಅವನ ಬಗ್ಗೆ ಹೆಮ್ಮೆಯ ಭಾವನೆ ಮೂಡಿದ್ದು ಭಾವನೆ ಮೂಡಿದ್ದು,ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

38. ಮಹಾತ್ಮ ಗಾಂಧಿಯವರ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ ನವೀನ ಶಿಕ್ಷಣ ಆರಂಭವಾಯಿತು . ಆ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು, ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸತೊಡಗಿದ್ದರು. ಹುಡುಗ ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾಗಿ ಬಿಟ್ಟ. ಕರೀಮ್ ಶಾಲೆಯ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲ್ಯದಿಂದ ಮಾಡಿ ಬಿಟ್ಟಿದ್ದ, ಅದರ ಫಲ ಸ್ವರೂಪವಾಗಿ ಸರ್ಕಾರದಿಂದ ಅವನಿಗೆ ಒಂದು ಬೆಳ್ಳಿಯ ಪದಕವೂ ಒಂದು

ನೂರು ರೂಪಾಯಿಯ ಬಹುಮಾನವೂ ಬಂದವು. ಸಣ್ಣ ಪ್ರಾಯದಲ್ಲೇ ಮಗ್ಗದ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅವನೀಗ ಅದರ ಅಧ್ಯಕ್ಷನಾಗಿದ್ದ. ಸಾಕಷ್ಟು ಯಶಸ್ವಿ ಯೂಧನವಂತನೂ ಆದನು. ಅದೂ ಅಲ್ಲದೆ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ ಹೊಸ ಸುಧಾರಣೆಗಳನ್ನೂ ಪರಿವರ್ತನೆಗಳನ್ನೂ ತಂದು ಹೆಸರು ಮಾಡಿದನು. ಕರೀಮನ ಸಾಧನೆ ಗುರುತಿಸಿ ರಾಷ್ಟ್ರಪತಿಯವರು ಪದ್ಮಭೂಷಣ ಬಿರುದನ್ನು ಕೊಟ್ಟರು. ಹೀಗೆ ಕರೀಮ್ ಮಗ್ಗದ ಹುಸೇನ್ ಸಾಹೇಬರ ಹೆಸರಿಗೆ ಕೀರ್ತಿಯನ್ನು ತಂದನು.

**39.** ಅಬ್ದುಲ್ ರಹೀಮನಿಗೆ 'ಮಗ್ಗದ ಸಾಹೇಬ' ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು. "ಅನಿಷ್ಟ ಮಗ್ಗದ ಹೆಸರೆತ್ತಬೇಡಿ"-"ಮಗ್ಗವಲ್ಲ ಕೊರಳಿಗೆ ಹಗ್ಗ"ಎಂದು ರೋಷದಿಂದ ಹೇಳುತ್ತಿದ್ದನು. ಏಕೆಂದರೆ, ಅವನ ಅಜ್ಜನ ಕಾಲದಲ್ಲಿ ಬ್ರಿಟೀಷರು, ಅಗ್ಗದ ವಿಲಾಯಿತಿಯ ಮಿಲ್ಲಿನ ಬಟ್ಟೆಗಳನ್ನು ನಮ್ಮ ದೇಶದಲ್ಲಿ ಹೇರಿ ಬಿಟ್ಟರು, ಅವೇನೋ ನಿಜಕ್ಕೂ ನಿಕೃಷ್ಟ ವಸ್ತುಗಳು, ಒಂದು ವರ್ಷದೊಳಗೆ ಕಳೇಬರಗಳಾಗಿ ಹರಕು ಚಿಂದಿಯಾಗುತ್ತಿದ್ದವು. ಒಂದೇ ತಿಂಗಳಲ್ಲಿ ಬಣ್ಣ ವಿವರ್ಣವಾಗಿ ಎರಡೇ ತಿಂಗಳಲ್ಲಿ ಮಾಯವಾಗುತ್ತಿತ್ತು. ಆದರೆ ಜನರಿಗೆ ಬೇಕಾದುದು ಅಗ್ಗದ ವಸ್ತು ಆದ್ದರಿಂದ ಅಗ್ಗದ ಮಾಲಿನದೆ ಅಧಿಪತ್ಯವಾಯಿತು. ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು. ಇದರಿಂದ ಅಬ್ದುಲ್ ರಹೀಮನಿಗೆ ಬಹಳಕಷ್ಟವಾಯಿತು. ಅವನ ಮಗ್ಗಗಳೆಲ್ಲಾ ಧೂಳು ತುಂಬಿ ಜೇಡರ ಬಲೆಗಳಿಂದ ಹಾಳು ಬಿದ್ದವು. ಮನೆಯಲ್ಲಿಊಟಕ್ಕೆಇದೆಯೋ ಇಲ್ಲವೋ ಎಂಬಂತಾಯಿತು. ಆದ್ದರಿಂದ ಅವನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಯಿತು.

---

## 2. ಸಾರ್ಥಕ ಬದುಕಿನ ಸಾಧಕ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :**

1. (ಎ) ವಸ್ತುವಾಚಕ
2. (ಡಿ) ಸರ್ವನಾಮ
3. (ಸಿ) ಒಳ್ಳೆಯ
4. (ಬಿ) ವಿದ್ಯಾರ್ಥಿ
5. (ಬಿ) ಮಂಕುತಿಮ್ಮನ ಕಗ್ಗ
6. (ಬಿ) ಬುದ್ಧಿವಂತ
7. ಸಿ) ದಕ್ಷಿಣ
8. (ಎ) ನೀನು
9. ಡಿ) ನಾಡಹಬ್ಬ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ) :**

10. ಅಂಕಿತನಾಮ
11. ಪ್ರಕಾರವಾಚಕ
12. ಪ್ರಥಮ ಪುರುಷ
13. ಆತ್ಮಾರ್ಥಕ ಸರ್ವನಾಮ
14. ಸಂಖ್ಯೇಯ ವಾಚಕ
15. ಆಟ
16. ಕಾಡು

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ) :**

17. ಡಿವಿಜಿಯವರ ಹುಟ್ಟೂರು ಕೋಲಾರ ಜಿಲ್ಲೆಯ ಮುಳಬಾಗಿಲು.
18. ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು : ಅವರ ಅಜ್ಜಿ ಸಾಕಮ್ಮ ಮತ್ತು ಅವರ ಸೋದರ ಮಾವ ತಿಮ್ಮಪ್ಪ.
19. ಡಿವಿಜಿಯವರನ್ನು ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಕಳುಹಿಸಿದವರು ರಸೂಲ್ ಖಾನ್.
20. ವಿಶ್ವೇಶ್ವರಯ್ಯ ಅವರು ಮೈಸೂರು ಸರ್ಕಾರದಲ್ಲಿ ದಿವಾನರ ಹುದ್ದೆಯನ್ನುಅಲಂಕರಿಸಿದ್ದರು.
21. ಡಿವಿಜಿಯವರು ಸ್ಥಾಪಿಸಿದ ಸಂಸ್ಥೆ ಗೋಖಲೆ ಸಾರ್ವಜನಿಕ ಸಂಸ್ಥೆ.
22. ಡಿವಿಜಿಯವರ ತಂದೆ ವೆಂಕಟರಮಣಯ್ಯ. ತಾಯಿ ಅಲಮೇಲಮ್ಮ.
23. ಡಿ.ವಿ.ಜಿಯವರು ಲೋಯರ್ ಸೆಕೆಂಡರಿಯನ್ನು ಮುಳಬಾಗಿಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಪೂರ್ಣಗೊಳಿಸಿದರು.
24. ಡಿವಿಜಿಯವರು ತಮ್ಮ ಸೋದರ ಮಾವನನ್ನು ಮಂಕುತಿಮ್ಮನ ಕಗ್ಗ ಕೃತಿಯಲ್ಲಿ ವರ್ಣಿಸಿದ್ದಾರೆ.
25. ಡಿವಿಜಿಯವರಿಗೆ ವಿಶ್ವೇಶ್ವರಯ್ಯನವರ ಜೊತೆ ಕೆಲಸ ಮಾಡಿದ್ದು ಹೆಮ್ಮೆ ಎನಿಸುತ್ತಿತ್ತು.
26. ಕನ್ನಡ ಸಾರಸ್ವತ ಲೋಕದ ಭೀಷ್ಮ ಎಂದು ಡಿವಿಜಿಯವರನ್ನು ಕರೆಯುವರು.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

27. ರಸೂಲ್ ಖಾನನು ಡಿವಿಜಿಯವರನ್ನು ತನ್ನ ಜಟಕಾ ಬಂಡಿಯಲ್ಲಿ ಕೂರಿಸಿಕೊಂಡು ಬೌರಿಂಗ್ ಪೇಟೆಗೆ ಕರೆದುಕೊಂಡು ಹೋದನು. ಅಲ್ಲಿ ಬೆಂಗಳೂರಿಗೆ ಟಿಕೆಟ್ ಕೊಡಿಸಿ ರೈಲಿನಲ್ಲಿ ಕೂರಿಸಿದನು. ಕೈ ಕರ್ಚಿಗೆ ಒಂದು ರೂಪಾಯಿಯನ್ನು ಕೊಟ್ಟನು. ಹೀಗೆ ರಸೂಲ್ ಖಾನನು ಡಿವಿಜಿಯವರ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಿದನು.

28. ವಿಶ್ವೇಶ್ವರಯ್ಯ ಅವರು ತಮ್ಮ ಕಾರ್ಯದರ್ಶಿಗೆ "ಈ ಮನುಷ್ಯನ ರೀತಿಯೇ ಬೇರೆ. ಇವರಿಗೆ ನಾವು ಹಣವನ್ನು ಕೊಡಲು ಬರುವುದಿಲ್ಲ. ಅದನ್ನು ಹಿಂದಕ್ಕೆ ತೆಗೆದುಕೊಂಡು ಬಿಡಿ." ಎಂದು ಹೇಳಿದರು.

29. ಪತ್ರಕರ್ತರಿಗೆ ಓಡಾಟದ ಖರ್ಚನ್ನು ಪತ್ರಿಕೆಯವರು ಕೊಡಬೇಕು. ದಸರಾ ವರದಿ ಮಾಡಿದ್ದುರಾಜ್ಯದ ಕೆಲಸ. ಅಲ್ಲದೆ ವಿಶ್ವೇಶ್ವರಯ್ಯನವರ ಜೊತೆ ವ್ಯವಹರಿಸಿದ್ದೇ ತಮಗೊಂದು ಹೆಮ್ಮೆ. ಹಾಗಿರುವಾಗ ಅದಕ್ಕೆ ಸಂಭಾವನೆ ತೆಗೆದುಕೊಳ್ಳುವುದು ಸರಿಯೇ? ಎಂಬುದು ಡಿವಿಜಿಯವರ ವಾದ. ಆದ್ದರಿಂದ ಅವರು ಸಂಭಾವನೆಯನ್ನು ತೆಗೆದುಕೊಳ್ಳಲಿಲ್ಲ.

30. ಡಿವಿಜಿಯವರ ಶ್ರೀಮತಿಯವರ ಬಳಿ ಇದ್ದುದ್ದು ಒಂದೇ ಸೀರೆ. ಅದೂ ಒಂದೆರಡು ಕಡೆ ಹರಿದು ಹೋಗಿತ್ತು. ಆದ್ದರಿಂದ ಅನ್ಯರ ಮುಂದೆ ತನ್ನ ಗಂಡನ ಗೌರವಕ್ಕೆ ಧಕ್ಕೆ ಆಗಬಾರದೆಂದು ಅವರು ಬಂಧುಗಳ ಮನೆಯ ಉತ್ಸವಕ್ಕೆ ಹೋಗಲಿಲ್ಲ.

31. ಮಾನವ ಬೆಟ್ಟದ ಬುಡದಲ್ಲಿರುವ ಹುಲ್ಲಿನಂತೆ ನಮ್ರತೆಯಿಂದಿರಬೇಕು. ಮಲ್ಲಿಗೆಯಂತೆ ಮನೆಯ ಕೀರ್ತಿಯನ್ನು ಪಸರಿಸಬೇಕು. ವಿಧಿ ನೀಡುವ ಎಲ್ಲಾ ಕಷ್ಟಗಳನ್ನೂ ಕಲ್ಲಿನಂತೆ ತಾಳ್ಮೆಯಿಂದ ಸಹಿಸಿಕೊಳ್ಳಬೇಕು. ದೀನ ದುರ್ಬಲರಿಗೆ ಸಹಾಯ ಮಾಡುತ್ತಾ ಬೆಲ್ಲ ಸಕ್ಕರೆಯಾಗಬೇಕು. ಅಹಂಕಾರವನ್ನು ತೊರೆದು ಎಲ್ಲರೊಳಗೆ ಒಂದಾಗಬೇಕು ಎಂದು ಕವಿ ಹೇಳಿದ್ದಾರೆ.

32. ಡಿವಿಜಿಯವರು ಮಾತು ಬಿಟ್ಟಾಗ ಮಿರ್ಜಾ ರವರು ಕಳವಳಗೊಂಡರು. ತಮ್ಮ ಆಪ್ತರೆದರು ಅದನ್ನು ತೋಡಿಕೊಂಡರು. ತಮ್ಮದು ಏನೂ ತಪ್ಪಿಲ್ಲ ಎಂದರು. ಸ್ನೇಹಕ್ಕಾಗಿ ಅವರಿವರ ಮೂಲಕ ಪ್ರಯತ್ನ ಕೂಡ ಮಾಡಿದರು.

33. ವಿಶೇಷಣ ನಾಮಪದದ (ವಸ್ತು, ಸ್ಥಳ, ಅಥವಾ ವ್ಯಕ್ತಿ) ಗುಣ, ಸ್ವಭಾವ, ಬಣ್ಣ, ಆಕಾರ ಅಥವಾ ಸಂಖ್ಯೆಯನ್ನು ವರ್ಣಿಸುವ (ವಿವರಿಸುವ) ಪದಕ್ಕೆ ವಿಶೇಷಣ ಎನ್ನುತ್ತಾರೆ.

ವಿಶೇಷ್ಯ ಯಾವ ನಾಮಪದದ ಬಗ್ಗೆ ವಿಶೇಷಣವು ಹೇಳುತ್ತದೆಯೋ (ಅಂದರೆ ವರ್ಣಿಸಲ್ಪಡುವ ನಾಮಪದಕ್ಕೆ) ವಿಶೇಷ್ಯ ಎಂದು ಕರೆಯುತ್ತಾರೆ.

| ಉದಾಹರಣೆ : | ವಿಶೇಷಣ | ವಿಶೇಷ್ಯ |
|---|---|---|
| | ಸಿಹಿ | ಹಣ್ಣು |
| | ದೊಡ್ಡ | ನದಿ |

34. **ದಿಗ್ವಾಚಕ** ಪೂರ್ವ ನೈರುತ್ಯ ಉತ್ತರ ಪಡುವಣ
**ಸಂಖ್ಯಾವಾಚಕ** ಆರು ಒಂದು ನೂರು ಐದು
**ಸರ್ವನಾಮ** ಆದು ಅವಳಿಂದ ಇವರು ಆವಳು

35.

| ಅಂಕಿತನಾಮ | ರೂಢನಾಮ | ಅನ್ವರ್ಥಕನಾಮ |
|---|---|---|
| ಶಾಲಿನಿ | ಬೆಟ್ಟ | ವಿಜ್ಞಾನಿ |
| ರಾಮು | ಕಾಡು | ಶಿಕ್ಷಕ |
| ಕವಿತ | ಪುಸ್ತಕ | ವೈದ್ಯೆ |

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

36. ಡಾ. ಎನ್ ಎಸ್ ಲಕ್ಷ್ಮೀನಾರಾಯಣ ಭಟ್ಟ
ಡಾ. ಎನ್ ಎಸ್ ಲಕ್ಷ್ಮಿ ನಾರಾಯಣ ಭಟ್ಟ ಅವರು 29 -10 -1936 ರಲ್ಲಿ ಶಿವಮೊಗ್ಗದಲ್ಲಿ ಜನಿಸಿದರು. ಇವರು ದೀಪಿಕಾ, ಭಾವ ಸಂಗಮ, ಬಂದೇ ಬರುತಾವ ಕಾಲ ,ಬಾರೋ ವಸಂತ, ಅಭಿನಂದನ, ಭಾವೋತ್ಸವ, ಪ್ರೇಮಧಾರೆ, ನಂದನ, ಕಿನ್ನರಿ, ನವಿಲುಗರಿ, ಕಿಶೋರಿ, ಸಾಹಿತ್ಯ ರತ್ನ ಸಂಪುಟ ಮುಂತಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿವರಾಮ ಕಾರಂತ ಪ್ರಶಸ್ತಿ, ರಾಜ್ಯೋತ್ಸವ ಪ್ರಶಸ್ತಿ, ಮಾಸ್ತಿ ಪ್ರಶಸ್ತಿ, ಆಳ್ವಾಸ್ ನುಡಿಸಿರಿ ಪ್ರಶಸ್ತಿ, ಆರ್ಯಭಟ ಪ್ರಶಸ್ತಿ ಸಂದಿವೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

37. ಆಯ್ಕೆ : ಈ ವಾಕ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿರುವ ಸಾಹಿತ್ಯ ರತ್ನಸಂಪುಟ ಎಂಬ ಕೃತಿಯಿಂದ ಆರಿಸಿ ನಿಗದಿಪಡಿಸಿರುವ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ
ಸಂದರ್ಭ : ಡಿವಿಜಿಯವರು ದಸರಾ ಸಂಭಾವನೆಯನ್ನು ಹಿಂದಿರುಗಿಸಲು ವಿಶ್ವೇಶ್ವರಯ್ಯನವರ ಬಳಿ ಬಂದಾಗ ವಿಶ್ವೇಶ್ವರಯ್ಯನವರು ಡಿವಿಜಿಯವರಿಗೆ ಈ ಮಾತನ್ನು ಕೇಳುತ್ತಾರೆ.
ಸ್ವಾರಸ್ಯ : ವಿಶ್ವೇಶ್ವರಯ್ಯನವರು ರಾಜ್ಯದ ಅತಿ ದೊಡ್ಡ ಹುದ್ದೆಯಲ್ಲಿದ್ದರೂ ಸಹಾ ತಮ್ಮನ್ನು ನೋಡಲು ಬಂದ ಕಿರಿಯರನ್ನು ಪ್ರೀತಿ ಗೌರವದಿಂದ ಮಾತನಾಡಿಸುವ ರೀತಿ ಇಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತಗೊಂಡಿದೆ

38. ಆಯ್ಕೆ : ಈ ವಾಕ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿರುವ ಸಾಹಿತ್ಯ ರತ್ನಸಂಪುಟ ಎಂಬ ಕೃತಿಯಿಂದ ಆರಿಸಿ ನಿಗದಿಪಡಿಸಿರುವ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ
ಸಂದರ್ಭ : ಬಂಧುಗಳ ಮನೆಯ ಉತ್ಸವಕ್ಕೆ ತಮ್ಮ ಪತ್ನಿ ಹೋಗದಿರುವುದನ್ನು ಕಂಡು ಡಿವಿಜಿಯವರು ಅಸಮಾಧಾನದಿಂದ ಹೀಗೆ ಕೇಳುತ್ತಾರೆ.
ಸ್ವಾರಸ್ಯ ಡಿವಿಜಿಯವರು ಸಂಬಂಧಗಳಿಗೆ, ಬಾಂಧವ್ಯಕ್ಕೆ ಹೆಚ್ಚಿನ ಮಹತ್ವ ನೀಡುತ್ತಿದ್ದರು. ಎಂಬ ವಿಚಾರ ಸ್ವಾರಸ್ಯ ಪೂರ್ಣವಾಗಿ ಮೂಡಿಬಂದಿದೆ.

39. ಆಯ್ಕೆ : ಈ ವಾಕ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿರುವ ಸಾಹಿತ್ಯ ರತ್ನಸಂಪುಟ ಎಂಬ ಕೃತಿಯಿಂದ ಆರಿಸಿ ನಿಗದಿಪಡಿಸಿರುವ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ
ಸಂದರ್ಭ : ಡಿವಿಜಿ ಅವರು ನೀನು ಉತ್ಸವಕ್ಕೆ ಬಂಧುಗಳ ಮನೆಗೆ ಹೋಗಲೇಬೇಕು ಎಂದು ಪತ್ನಿಯನ್ನು ಒತ್ತಾಯ ಪಡಿಸಿದಾಗ, ಪತ್ನಿ ತಾವು ಹೋಗದಿರುವುದಕ್ಕೆ ಕಾರಣವನ್ನು ತಿಳಿಸುತ್ತಾ ಈ ಮಾತನ್ನು ಹೇಳುತ್ತಾರೆ.
ಸ್ವಾರಸ್ಯ ಡಿವಿಜಿಯವರ ಆರ್ಥಿಕ ಪರಿಸ್ಥಿತಿ, ಬಡತನ ಹಾಗೂ ಅವರ ಶ್ರೀಮತಿಯವರ ದೊಡ್ಡ ಗುಣ, ಗಂಡನ ಗೌರವವನ್ನು ಕಾಪಾಡುವ ಸಂಸ್ಕಾರ ಇಲ್ಲಿ ವ್ಯಕ್ತವಾಗಿದೆ.

40. ಆಯ್ಕೆ : ಈ ವಾಕ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿರುವ ಸಾಹಿತ್ಯ ರತ್ನಸಂಪುಟ ಎಂಬ ಕೃತಿಯಿಂದ ಆರಿಸಿ ನಿಗದಿಪಡಿಸಿರುವ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ
ಸಂದರ್ಭ : ಮನುಷ್ಯ ತಾನು ಮಾಡಿದ ಸಣ್ಣಪುಟ್ಟ ಉಪಕಾರಗಳನ್ನು ದೊಡ್ಡದಾಗಿ ಎಲ್ಲರಿಗೂ ಹೇಳಿಕೊಳ್ಳುತ್ತಾ ಆತ್ಮ ಪ್ರಶಂಸೆ ಮಾಡಿಕೊಳ್ಳುವುದು ಒಳ್ಳೆಯದಲ್ಲ ಎಂದು ತಿಳಿಸುವಾಗ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ನಮಗೆ ಆಹಾರ ನೀಡುವ ಸಸ್ಯಗಳು ತಮ್ಮ ಉಪಕಾರದ ಬಗ್ಗೆ ಎಂದೂ ಹೇಳುವುದಿಲ್ಲ. ಜಗತ್ತಿಗೆ ಬೆಳಕನ್ನು ಕೊಡುವ ಸೂರ್ಯ ಚಂದ್ರರು ನಾವು ಬೆಳಕು ಕೊಡುತ್ತಿದ್ದೇವೆ ಎಂದು ಹೇಳುವುದಿಲ್ಲ ಆದ್ದರಿಂದ ನಾವು ಮಾಡಿದ ಉಪಕಾರವನ್ನು ಹೇಳಿಕೊಳ್ಳಬಾರದು. ಜಂಬ ಕೊಚ್ಚಿಕೊಳ್ಳಬಾರದು.

41. ಆಯ್ಕೆ : ಈ ವಾಕ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿರುವ ಸಾಹಿತ್ಯ ರತ್ನಸಂಪುಟ ಎಂಬ ಕೃತಿಯಿಂದ ಆರಿಸಿ ನಿಗದಿಪಡಿಸಿರುವ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ

ಸಂದರ್ಭ : ಮನುಷ್ಯ ಹೇಗೆ ಬದುಕಿ ಬಾಳಬೇಕೆಂಬುದನ್ನು ತಿಳಿಸುವಾಗ ಕವಿ ಈ ಮಾತನ್ನು ಹೇಳಿದ್ದಾರೆ.

ಸ್ವಾರಸ್ಯ : ನಾವು ನಿರಹಂಕಾರಿಗಳಾಗಿರಬೇಕು. ನಮ್ಮ ಮನೆಯ ಕೀರ್ತಿಯನ್ನು ಬೆಳಗುವಂತಿರಬೇಕು. ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳಬೇಕು ಬಡವರಿಗೆ, ದೀನ ದುರ್ಬಲರಿಗೆ ಆಸರೆಯಾಗಬೇಕು ಎಂಬ ಮಾನವಿಯ ಮೌಲ್ಯಗಳುಇಲ್ಲಿ ಸ್ವಾರಸ್ಯ ಪೂರ್ಣವಾಗಿ ವ್ಯಕ್ತಗೊಂಡಿದೆ

42. ಆಯ್ಕೆ : ಈ ವಾಕ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿರುವ ಸಾಹಿತ್ಯ ರತ್ನಸಂಪುಟ ಎಂಬ ಕೃತಿಯಿಂದ ಆರಿಸಿ ನಿಗದಿಪಡಿಸಿರುವ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ

ಸಂದರ್ಭ: ಡಿವಿಜಿಯವರು ಮುಳಬಾಗಿಲಿನ ಆಂಗ್ಲೋ ವರ್ನಾಕ್ಯುಲರ್ ಶಾಲೆಯಲ್ಲಿ ಲೋಯರ್ ಸೆಕೆಂಡರಿ ಶಿಕ್ಷಣವನ್ನು ಮುಗಿಸಿದಾಗ ಡಿವಿಜಿಯವರ ತಂದೆ ಮತ್ತು ಅವರ ಅಜ್ಜಿ ಈ ನಿರ್ಧಾರವನ್ನು ಕೈಗೊಂಡರು.

ಸ್ವಾರಸ್ಯ : ಅಂದಿನ ಕಾಲದಲ್ಲಿದ್ದ ಸಾಮಾಜಿಕ ಪರಿಸ್ಥಿತಿ, ಡಿವಿಜಿಯವರ ಮನೆಯಲ್ಲಿದ್ದ ಬಡತನ, ಹಾಗೂ ವಿದ್ಯೆಯ ಮಹತ್ವ ಇಲ್ಲಿ ವ್ಯಕ್ತವಾಗಿದೆ.

43. ಆಯ್ಕೆ : ಈ ವಾಕ್ಯವನ್ನು ಡಾ. ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟ ಅವರು ರಚಿಸಿರುವ ಸಾಹಿತ್ಯ ರತ್ನಸಂಪುಟ ಎಂಬ ಕೃತಿಯಿಂದ ಆರಿಸಿ ನಿಗದಿಪಡಿಸಿರುವ "ಸಾರ್ಥಕ ಬದುಕಿನ ಸಾಧಕ" ಎಂಬ ಗದ್ಯಭಾಗದಿಂದ ಆರಿಸಲಾಗಿದೆ

ಸಂದರ್ಭ: ವಿಶ್ವೇಶ್ವರಯ್ಯ ನವರು ತಮ್ಮ ರಾಜ್ಯ ಕಾರ್ಯದಲ್ಲಿ ಸಹಾಯ ಮಾಡಿದ ಡಿವಿಜಿಯವರಿಗೆ ಸಂಭಾವನೆಗಾಗಿ ಚೆಕ್ ಗಳನ್ನು ಕೊಡುತ್ತಿದ್ದರು. ಆ ಚೆಕ್ಕುಗಳು ಏನಾದವೆಂದು ತಿಳಿಸುವಾಗ ಲೇಖಕರು ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಡಿವಿಜಿಯವರು ವಿಶ್ವೇಶ್ವರಯ್ಯನವರು ನೀಡಿದ ಚೆಕ್ಕುಗಳನ್ನು ಬ್ಯಾಂಕಿಗೆ ಹಾಕಿ ಹಣ ಪಡೆಯಲಿಲ್ಲ. ರಾಜ್ಯಕ್ಕೆ ಉಚಿತ ಸೇವೆ ಮಾಡಿ ಪ್ರಾಮಾಣಿಕತೆ ಮೆರೆದರು. ಡಿವಿಜಿಯವರ ನಿಸ್ವಾರ್ಥ ಸೇವೆ ಇಲ್ಲಿವ್ಯಕ್ತಗೊಂಡಿದೆ

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

44. ಡಿವಿಜಿಯವರ ಮನೆಯಲ್ಲಿ ಕಿತ್ತು ತಿನ್ನುವ ಬಡತನವಿತ್ತು. ಆದರೂ ತಾವು ಮಾಡಿದ ಸೇವೆಗೆ ಸರ್ಕಾರದಿಂದ ಕೊಡುವ ಸಂಭಾವನೆಯನ್ನು ನಿರಾಕರಿಸುತ್ತಿದ್ದರು. ಅಂತಹ ನಿಸ್ವಾರ್ಥಿಗಳಾಗಿದ್ದರು ಶೀಲ, ವಿವೇಕ, ನಿಸ್ಪೃಹತೆ ಹಾಗೂ ಸ್ವಯಂ ಆರ್ಜಿತ ಪಾಂಡಿತ್ಯದಿಂದ. ಜೊತೆಗೆ ಅವರಿಗಿದ್ದ ಸಾರ್ವಜನಿಕ ಹಿತಾಸಕ್ತಿಗಳ ಬಲದಿಂದ. ಸತ್ವಶಾಲಿ ವ್ಯಕ್ತಿತ್ವವನ್ನು ರೂಪಿಸಿಕೊಡಿದ್ದರು. ಕನ್ನಡ ಸಾಹಿತ್ಯಲೋಕದಲ್ಲಿ ಅವರದು ಹೋಲಿಕೆ ಇಲ್ಲದ ಅಪೂರ್ವ ವ್ಯಕ್ತಿತ್ವ ಇತರ ಸಾಹಿತಿಗಳಂತೆ ಅವರು ಸಾಹಿತಿ ಮಾತ್ರವಾಗಿರಲಿಲ್ಲ. ಹೆಸರಾಂತ ಪತ್ರಕರ್ತರಾಗಿದ್ದರು. ಹಿರಿಯ ವೇದಾಂತಿಯಾಗಿದ್ದರು. ರಾಜ್ಯಶಾಸ್ತ್ರದಲ್ಲಿ ಆಳವಾದ ತಿಳುವಳಿಕೆ ಉಳ್ಳವರಾಗಿದ್ದರು. ಸಾರ್ವಜನಿಕ ಜೀವನಕ್ಕೆ ಸಂಬಂಧಿಸಿದ ಎಲ್ಲ ವಿಚಾರಗಳ ಮಂಥನಕ್ಕಾಗಿ ಗೋಖಲೆ ಸಾರ್ವಜನಿಕ ಸಂಸ್ಥೆಯಂಥ ಪ್ರಸಿದ್ಧ ಸಂಸ್ಥೆಯನ್ನು ಕಟ್ಟಿದರು. ಒಟ್ಟಾರೆಯಾಗಿ ಅವರೊಬ್ಬ ಮಹಾ ಧೀಮಂತರ ವ್ಯಕ್ತಿಯಾಗಿದ್ದರು.

45. ಒಮ್ಮೆ ಡಿವಿಜಿ ಅವರ ಬಂಧುಗಳ ಮನೆಯಲ್ಲಿ ಒಂದು ಉತ್ಸವ ನಡೆಯಿತು. ಡಿವಿಜಿಯವರು ಹೋಗಲು ಆಗಲಿಲ್ಲ. ಮಕ್ಕಳನ್ನು ಕಳಿಸಿದ್ದರು. ಹೆಂಡತಿ ಮನೆಯಲ್ಲಿ ಇದ್ದಾರೆ. ಡಿವಿಜಿ ಅಸಮಾಧಾನದಿಂದ "ನೀನು ಉತ್ಸವಕ್ಕೆ ಹೋಗುವುದಿಲ್ಲವೇ?" ಎಂದು ಕೇಳಿದರು. ಪತ್ನಿ "ಇಲ್ಲ" ಎಂದರು. ಡಿವಿಜಿ "ಯಾಕೆ?" ಎಂದು ಕೇಳಿದರು. ಪತ್ನಿ "ಮಕ್ಕಳನ್ನು ಕಳಿಸಿದ್ದೇನಲ್ಲ" ಎಂದರು. ಡಿವಿಜಿ "ಅವರು ನಮಗೆ ಬಹಳ ಬೇಕಾದವರು. ನೀನು ಹೋಗದಿದ್ದರೆ ಬೇಸರಪಡುವುದಿಲ್ಲವೇ?" ಎಂದರು. ಅವರ ಪತ್ನಿ "ಮನೆಯಲ್ಲಿ ಯಾರಾದರೂ ಇರಬೇಕಲ್ಲ" ಎಂದರು. ಡಿವಿಜಿ "ನಾನು ಇರುತ್ತೇನೆ. ನೀನು ಹೋಗಿ ಬಾ" ಎಂದರು. ಅವರ ಹೆಂಡತಿ ಏನೇನೋ ಕಾರಣ ಹೇಳಿದರು. ಕೊನೆಗೆ ನಿಜವಾದ ಕಾರಣ ಹೇಳಲೇ ಬೇಕಾಯಿತು. ಡಿವಿಜಿಯವರ ಪತ್ನಿ "ನಾನು ಹೇಳಬಾರದೆಂದಿದ್ದೆ. ನೀವು ಪಟ್ಟು ಹಿಡಿದು ನನ್ನ ಬಾಯಿ ಬಿಡಿಸುತ್ತಿದ್ದೀರಿ. ನನ್ನ ಹತ್ತಿರ ಇರುವುದು ಇದೊಂದೇ ಸೀರೆ. ಇದು ಒಂದೆರಡು ಕಡೆ ಹರಿದಿದೆ. ನಾನು ಈ ಬಟ್ಟೆಯಲ್ಲಿ ಹೊರಗೆ ಕಾಣಿಸಿಕೊಂಡರೆ ಜನ ನಿಮ್ಮನ್ನು ಕುರಿತು ಆಡಿಕೊಳ್ಳುವುದಿಲ್ಲವೇ? ಬಂಧುಗಳ ಮನೆಗೆ ಹೋಗಿ ಬರುವುದು ನನಗೆ ಹೇಗೆ ಕರ್ತವ್ಯವೋ ಹಾಗೆ ನಿಮ್ಮ ಮರ್ಯಾದೆಗೆ ಊನಬಾರದೆಂದು ನಡೆದುಕೊಳ್ಳುವುದು ನನಗೆ ಕರ್ತವ್ಯ ಅಲ್ಲವೇ? ಎಂದು ಹೇಳಿದರು.

46. ಡಿವಿಜಿಯವರು ಯುವ ಪತ್ರಕರ್ತರಾಗಿದ್ದಾಗ ಒಮ್ಮೆ ದಸರಾ ಉತ್ಸವ ನಡೆಯಿತು. ದಸರಾ ಉತ್ಸವದ ವರದಿಯನ್ನು ಮಾಡಿದ ಎಲ್ಲಾ ಪತ್ರಕರ್ತರಿಗೂ ಸರ್ಕಾರದಿಂದ ಸಂಭಾವನೆ ಹೋಯಿತು. ಡಿವಿಜಿಯವರು ಹಣವನ್ನು ತೆಗೆದುಕೊಂಡು ವಿಶ್ವೇಶ್ವರಯ್ಯನವರ ಬಳಿಗೆ ಬಂದರು. ವಿಶ್ವೇಶ್ವರಯ್ಯನವರು "ಏನು ಬಂದಿರಿ ಗುಂಡಪ್ಪ?" ಎಂದು ಕೇಳಿದರು. ಡಿವಿಜಿಯವರು "ನನಗೆ ಈ ಹಣ ಯಾಕೆ ಕಳಿಸಿದ್ದಾರೆ?" ಎಂದು ಕೇಳಿದರು. ವಿಶ್ವೇಶ್ವರಯ್ಯನವರು "ದಸರಾ ಉತ್ಸವವನ್ನು ಚೆನ್ನಾಗಿ ವರದಿ ಮಾಡಿದ್ದೀರಿ ಅದಕ್ಕೆ" ಎಂದರು. ಡಿವಿಜಿಯವರು "ಅದಕ್ಕೆ ಹಣ ಯಾಕೆ ಕಳಿಸಬೇಕು?" ಎಂದು ಕೇಳಿದರು. ವಿಶ್ವೇಶ್ವರಯ್ಯನವರು "ಪತ್ರಕರ್ತರಿಗೆ ಓಡಾಟ ಖರ್ಚು ಇರುತ್ತದೆ. ಅಲ್ಲದೆ ಹಿಂದಿನಿಂದ ಬಂದ ಪದ್ಧತಿ" ಎಂದರು. ಆಗ ಡಿವಿಜಿ "ವರದಿ ಮಾಡುವುದು ಪತ್ರಕರ್ತರ ಕರ್ತವ್ಯ. ಅದಕ್ಕೆ ಖರ್ಚಾದರೆ ಪತ್ರಿಕೆಯವರು ಕೊಡಬೇಕು. ಸರ್ಕಾರವಲ್ಲ. ನನಗೆ ಈ ಹಣ ಖಂಡಿತ ಬೇಡವೇ ಬೇಡ" ಎಂದು ಬಿಟ್ಟರು.

# 3. ನೀರು ಕೊಡದ ನಾಡಿನಲ್ಲಿ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಎ) ಬ್ಯಾಂಕ್
2. ಡಿ) ವರುಷ
3. (ಸಿ) ಹುನ್ನಾರ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

4. ಪಸರಿಸು
5. ಹರಣ
6. ಪೋರ್ಚುಗೀಸ್
7. ವಿಜಾತೀಯ ಸಂಯುಕ್ತಾಕ್ಷರ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ) :**

8. ಯುರೋಪ್, ಅಮೇರಿಕಗಳಲ್ಲಿ ನೀರು ಕೊಡುವ ಸಂಪ್ರದಾಯವಿಲ್ಲ.
9. ಮನೆಗೆ ಬಂದವರನ್ನು ತಣ್ಣನೆಯ ನೀರು ತಂದು ಕೊಟ್ಟು ಸತ್ಕರಿಸುವ ಸಂಪ್ರದಾಯ ನಮ್ಮಲ್ಲಿದೆ.
10. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು ಕೋಲಾ.
11. ಭಾರತದಲ್ಲಿ ಇತ್ತೀಚೆಗೆ ನೀರನ್ನು ಕೊಂಡು ಕುಡಿಯುವ ಹುನ್ನಾರ ನಡೆದಿದೆ.
12. ಮದರ್ಸ್ ಡೇ, ಫಾದರ್ಸ್ ಡೇ, ವ್ಯಾಲೆಂಟೈನ್ ಡೇ ಆಚರಣೆಯಲ್ಲಿ ಗಿಫ್ಟ್, ಗ್ರೀಟಿಂಗ್ ಕಾರ್ಡ್ ಮಾರಾಟ ಮಾಡುವ ಹೊಸ ಹುನ್ನಾರಗಳು ಸರ್ವರಿಗೂ ವೇದ್ಯವಾಗಿದೆ.
13. ಲೇಖಕಿಗೆ ಹೋಟೆಲಿನಲ್ಲಿ ನಾಲ್ಕು ಲೋಟ ನೀರು ತಂದಿಟ್ಟಾಗ ಬರೀ ಬಾಯಲ್ಲ, ಮನಸ್ಸೂ ತಂಪಾಯಿತು.
14. ಕೊಳ್ಳುಬಾಕತನ, ಲಾಭಕೋರತನ ಎಂಬ ರೋಗಗಳು ಸಾಂಕ್ರಾಮಿಕವಾಗಿ ಭಾರತಕ್ಕೂ ಲಗ್ಗೆ ಇಟ್ಟಿವೆ.
15. ಭಾರತೀಯ ಸಂಸ್ಕೃತಿಯ ಬುನಾದಿಯನ್ನು ಅಲುಗಿಸುತ್ತಿರುವುದು ಕೊಳ್ಳುಬಾಕತನ.
16. ಮಾಲತಿ ಆರ್ಡರ್ ಮಾಡಿದ ಐಸ್‌ಕ್ರೀಂನ ಬೆಲೆ ನೂರು ರೂಪಾಯಿ
17. ಹಾ ಮಾ ನಾಯಕ, ತಿತಾ ಶರ್ಮ, ಜಿ ವೆಂಕಟಸುಬ್ಬಯ್ಯ, ನೇಮಿಚಂದ್ರ.
18. ದಾರಿಯಲ್ಲಿ ಹೋಗುವ ಪ್ರಯಾಣಿಕರಿಗೆ ನೀರು ಮಜ್ಜಿಗೆ ಪಾನಕವನ್ನು ಉಚಿತವಾಗಿ ಒದಗಿಸುವ ಸ್ಥಳ
19. ಭಾರತದಿಂದ ಹೊರಗೆ ಕಾಲಿಟ್ಟರೆ ಉಳಿದೆಲ್ಲವೂ ನೀರು ಕೊಡದ ನಾಡುಗಳ**.**
20. ನೀರು ಕೊಡುವ ಸಂಪ್ರದಾಯವಿಲ್ಲ**.**
21. ಬೇರೆ ದೇಶಗಳಲ್ಲಿ ಧಾರಾಳವಾಗಿ ಕೋಲಗಳು**,** ಪ್ರೆಂಚ್**,** ವೈನ್**,**ಬೀಯರ್ ಬಟಾಲಿನಲ್ಲಿ ಹಣ್ಣಿನ ರಸ ಧಾರಾಳವಾಗಿ ದೊರೆಯುತ್ತವೆ **.**

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು** (**ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ** 2 **ಅಂಕಗಳು**) :

22. ನಮ್ಮ ದೇಶದಲ್ಲಿ ಸಿಗುವಂತೆ ಬಾಯಾರಿಕೆಯಾದಾಗ ನೀರು ಸಿಗುವುದಿಲ್ಲ. ಮತ್ತು ನೀರು ಕೊಡುವ ಸಂಪ್ರದಾಯವಿಲ್ಲ. ವಿದೇಶಗಳಲ್ಲಿ ಬಾಯಾರಿಕೆಗೆ ಕೋಲಾಗಳು, ಫ್ರೆಂಚ್ ಪ್ರೈಸ್ ಬಿಯರ್, ಬಾಟಲಿಯಲ್ಲಿ ಹಣ್ಣಿನ ರಸ ಧಾರಾಳವಾಗಿ ದೊರೆಯುತ್ತವೆ.

23. ಲೇಖಕಿಯವರು ವಿದೇಶಕ್ಕೆ ಹೋಗಲು ದೆಹಲಿಗೆ ಬಂದಿದ್ದರು. ರೋತಕ್ರಸ್ತೆಯ ಅವರ ಅತ್ತೆಯ ಮನೆಗೆ ಹೋಗುವಾಗ ಗುರುದ್ವಾರಗಳ ಬಳಿ ನೀರಿನ ದೊಡ್ಡ ಕೊಳಾಯಿ ಹಿಡಿದು ನಿಲ್ಲಿಸಿದ ಆಟೋ, ಬಸ್ ಹಾಗೂ ದಾರಿ ಹೋಕರಿಗೆಲ್ಲ ನೀರು ತುಂಬಿ ತುಂಬಿ ಕುಡಿಸುತ್ತಿದ್ದರು.

24. ಕೋಲಾಗಳ ಆಸೆಯಿಂದ ನಾವು ಮುಖ್ಯವಾಗಿ ನೀರು ಕುಡಿಯುವುದನ್ನೇ ತೊರೆಯುತ್ತಿದ್ದೇವೆ. ಏಕೆಂದರೆ ಕೋಲಾಗಿಂತ ನೀರಿಗೆ ಹೆಚ್ಚು ಬೆಲೆ ಕೊಡಬೇಕು. ಅದರೊಂದಿಗೆ ರುಚಿಯಾದ ಮಜ್ಜಿಗೆ ಪಾನಕ, ಎಳನೀರು, ಪಾನಕ, ಕಬ್ಬಿನಹಾಲು, ತಾಜಾ ಹಣ್ಣಿನ ರಸ ಎಲ್ಲವನ್ನು ತೊರೆದು ಕೋಲಾಗಳಿಗೆ ಮುಗಿ ಬೀಳುತ್ತಿದ್ದಾರೆ.

25. ಕೊಳ್ಳುಬಾಕತನ, ಲಾಭ ಕೋರತನದ ರೋಗಗಳು ಸಾಂಕ್ರಾಮಿಕವಾಗಿ ಎಲ್ಲ ಕಡೆಯೂ ಹರಡಿ, ಭಾರತಕ್ಕೂ ಲಗ್ಗೆ ಇಟ್ಟು 'ಸಂಸ್ಕೃತಿಯ ಮೇಲೆ ದಾಳಿ' ಮಾಡುತ್ತಿವೆ. ನಾಗರಿಕತೆ ಸಂಸ್ಕೃತಿಯ ದಾಳಿಯಿಂದ ಮದರ್ಸ್ ಡೇ, ಫಾದರ್ಸ್ ಡೇ, ವ್ಯಾಲೆಂಟೈನ್ ಡೇ ಆಚರಿಸುವುದು ಪ್ರೀತಿಯ ದ್ಯೋತಕದಿಂದ ಅಲ್ಲ. ಗಿಫ್ಟ್, ಗ್ರೀಟಿಂಗ್ ಕಾರ್ಡ್ ಮಾರುವ ಹೊಸ ಹುನ್ನಾರಕ್ಕಾಗಿ ಈ ಆಚರಣೆ ಲಾಭ ಕೋರತನ ಇದರ ಮುಖ್ಯ ಉದ್ದೇಶವಾಗಿದೆ.

26. ಜನಪ್ರಿಯ ಹೋಟಲಿನ ಮಾಲೀಕನಿಗೆ ತಂಪು ಪಾನೀಯದ ಕಂಪನಿಯೊಂದು ಆತನನ್ನು ಸಂಪರ್ಕಿಸಿ' ನೀವು ಗ್ರಾಹಕರಿಗೆ ಬಂದೊಡನೆ ನೀರು ಕೊಡುವುದನ್ನು ನಿಲ್ಲಿಸಿದರೆ, ಇಷ್ಟು ಹಣ ಕೊಡುವುದಾಗಿ' ಹೇಳಿತ್ತು

27.

| ಆಂಗ್ಲ ಭಾಷೆ | ಪೋರ್ಚುಗೀಸ್ ಭಾಷೆ | ಹಿಂದೂಸ್ಥಾನಿ ಭಾಷೆ |
|---|---|---|
| ರೋಡ್ | ಅಲಮಾರು | ಅರ್ಜಿ |
| ಪೆನ್ನು | ಸಾಬೂನು | ಕಛೇರಿ |
| ಬ್ಯಾಂಕ್ | ಮೇಜು | ಕಾರ್ಖಾನೆ |
| ಹೋಟಲ್ | ಬಟಾಟೆ | ದವಾಖಾನೆ |

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

ಜನ್ಮಸ್ಥಳ, ಕಾಲ 1 ಅಂಕ

ಕೃತಿ, ಬಿರುದು / ಪ್ರಶಸ್ತಿ 1 ಅಂಕ

ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ 1 ಅಂಕ

**ಒಟ್ಟು 3 ಅಂಕಗಳು**

28. ನೇಮಿಚಂದ್ರ

ಶ್ರೀಮತಿ ನೇಮಿಚಂದ್ರ ಅವರು 1959 ರಲ್ಲಿ ಚಿತ್ರದುರ್ಗದಲ್ಲಿ ಜನಿಸಿದರು. ಇವರು ಮತ್ತೆ ಬರೆದ ಕಥೆಗಳು,ನೇಮಿಚಂದ್ರರ ಕಥೆಗಳು, ಒಂದು ಕನಸಿನ ಪಯಣ, ಪೆರುವಿನ ಪವಿತ್ರ ಕಣಿವೆಯಲ್ಲಿ, ಬದುಕು ಬದಲಿಸಬಹುದು ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಅತ್ತಿಮಬ್ಬೆ ಪ್ರಶಸ್ತಿಗಳು ಲಭಿಸಿವೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

29. ನಮ್ಮ ನಾಡಿನಲ್ಲಿ ರೈಲು ನಿಲ್ದಾಣಗಳಲ್ಲಿ, ಬಸ್ಸು ನಿಲ್ದಾಣಗಳಲ್ಲಿ, ವಿಮಾನ ನಿಲ್ದಾಣಗಳಲ್ಲೂ 'ದುಡ್ಡಿಲ್ಲದೆ ಕುಡಿಯಬಲ್ಲ' ನೀರನ್ನು ಇರಿಸುತ್ತಿದ್ದರು. ಬಾಯಾರಿದಾಗ ಈಗಲೂ ಹೋಟೆಲು ಒಂದಕ್ಕೆ ಹೋಗಿ ನೀರು ಕುಡಿದು ಬರಬಹುದು. ಮನೆಯ ಹೊರಗೆ ಕಾಂಪೌಂಡ್ ಗೋಡೆಗೆ ಸಣ್ಣ ತೊಟ್ಟಿ ಕಟ್ಟಿ "ದನಕರಗಳು ನೀರು ಕುಡಿದುಹೋಗಲಿ" ಎಂದು ನೀರು ತುಂಬಿಡುತ್ತಿದ್ದರು. ಅಲ್ಲಲ್ಲಿ ಅಂಗಡಿಗಳಲ್ಲಿಯೂ ಸಹ ಮಣ್ಣಿನ ಮಡಿಕೆಯಲ್ಲಿ ನೀರು ತುಂಬಿಡುತ್ತಿದ್ದರು. ಅನೇಕ ಗುರುದ್ವಾರದ ಬಳಿ ಸ್ವಯಂ ಸೇವಕರು ನೀರಿನ ದೊಡ್ಡ ಕೊಳಾಯಿ ಹಿಡಿದು, ನಿಲ್ಲಿಸಿದ ಆಟೋ, ಬಸ್, ಹಾಗೂ ದಾರಿಹೋಕರಿಗೆಲ್ಲ ಉಚಿತವಾಗಿ ನೀರು ತುಂಬಿ ಕುಡಿಸುತ್ತಿದ್ದರು. ಇವೆಲ್ಲವನ್ನು ನಾವು ಕೇವಲ ಭಾರತದಲ್ಲಿ ಕಾಣುತ್ತೇವೆ. ಆದರೆ ವಿದೇಶಗಳಲ್ಲಿ ದುಡ್ಡು ಕೊಟ್ಟರೂ ಸಹ ನೀರು ಸಿಗುವುದಿಲ್ಲ.

30. ನಮ್ಮ ಭಾರತೀಯ ಸಂಸ್ಕೃತಿಯ ಬುನಾದಿಯನ್ನು ಜೀವನಶೈಲಿಯನ್ನು, ನಂಬಿಕೆಗಳನ್ನು, ಮೌಲ್ಯಗಳನ್ನು, ಸಂಸ್ಕೃತಿಯ ಬುನಾದಿಯನ್ನು ಅಲುಗಿಸುವ 'ಕೊಳ್ಳುಬಾಕತನ'. ಅಗತ್ಯಗಳಲ್ಲಿ ನಡೆದು ಹೋಗುತ್ತಿದ್ದ ಬದುಕು, ಇಂದು 'ಬೇಕು'ಗಳ ಬಲೆಗೆ ಬಿದ್ದಿದೆ. ಮಾರುಕಟ್ಟೆಗೆ ಬಂದದ್ದೆಲ್ಲವು ಬೇಕು. ಬೇಕುಗಳನ್ನು 'ಅಗತ್ಯ'ಗಳಾಗಿ, ಜಾಹೀರಾತಿನಲ್ಲಿ ಕೊಳ್ಳುವಂತೆ ಬಿಂಬಿಸುತ್ತವೆ. ಆರಾಮ, ಐಷಾರಾಮದ, ಅಪ್ಪಟ ಅನಗತ್ಯದ ವಸ್ತುಗಳನ್ನು 'ಇವಿಲ್ಲದೆ ಬದುಕಿಲ್ಲ' ಎಂಬಂತೆ ಬಿಂಬಿಸುತ್ತಾರೆ. 'ಡಿಓಡರೆಂಟ್' ಹಾಕಿಕೊಳ್ಳದೆ ಇದ್ದರೆ 'ತಾನು ನಾತ ಬಡಿಯುತ್ತೇನೆ' ಎಂಬಷ್ಟು ಕೀಳಿರುಮೆಯನ್ನು ಹುಟ್ಟಿಸಬಲ್ಲರು . ಕೊನೆಗೆ ಎಲ್ಲವೂ ನಿಮ್ಮನ್ನು ಕೊಳ್ಳುವಂತೆ ಪ್ರೇರೇಪಿಸುತ್ತವೆ.

31. ಲೇಖಕಿ ಮತ್ತು ಅವರ ಮಗಳು ಮಹಾತ್ಮಗಾಂಧಿ ರಸ್ತೆಯ 'ಬಾಂಬೆ ಬಜಾರ್' ಎದುರಿನ ಪುಟ್ಟ ಜಾಯಿಂಟ್‌ನಲ್ಲಿ ಹೋಗಿ ಕುಳಿತರು . ಇಲ್ಲಿ ನೀರು ತಂದಿಡಲಿಲ್ಲ. ಐಸ್‌ಕ್ರೀಂ ತಿಂದ ಇವರು 'ನೀರು ಬೇಕು'ಎಂದು ಕೇಳಿದರು. 'ಮಿನಿರಲ್ ವಾಟರ್?' ವೇಟರ್ ಪ್ರಶ್ನಿಸಿದನು. 'ಇಲ್ಲಪ್ಪ ಸಾಮಾನ್ಯ ನೀರು' ಎಂದರು.ಮಾಯವಾದ ವೇಟರ್ ಹದಿನೈದು ನಿಮಿಷ ಕಾದರೂ ಬರಲೇ ಇಲ್ಲ. ಕಾದು ಕಾದು ಸುಸ್ತಾಗಿ ಕೊನೆಗೆ ಕೌಂಟರಿಗೇ ಹೋಗಿ, ಬಿಲ್ಲು ಕೊಟ್ಟು ಹೊರಬಿದ್ದರು. ಅದೇ ವೇಟರ್, ಪುಟ್ಟ ಪುಟ್ಟ ಬಾಟಲಿಗಳಲ್ಲಿ ಮಿನರಲ್ವಾಟರುಗಳನ್ನು ಬೇರೆ ಬೇರೆ ಮೇಜಿಗೆ ಸರಬರಾಜು ಮಾಡುವುದು ಕಂಡಿತು. 'ಮಿನಿರಲ್ ವಾಟರ್?'ಎಂದಅವರು ಕೇಳುವ ಭಂಗಿ ಭಾವ

ಹೇಗಿರುತ್ತದೆ ಎಂದರೆ ನಿಮಗೆ 'ಆರ್ಡಿನರಿ ವಾಟರ್' ಎಂದು ಹೇಳಲೂ ಹಿಂಜರಿಕೆಯಾಗಬೇಕು. ಮತ್ತೊಂದು ದಿನ ಮಾಲತಿಯೊಡನೆ ಇಂದಿರಾನಗರದ ಪುಟ್ಟ ಜಾಯಿಂಟ್‌ಗೆ ಹೋಗಿ 'ಮಿಸಿಸಿಪಿ ಮಡ್ ಪೀ' ಆರ್ಡರ್ ಮಾಡಿದರು. ದೊಡ್ಡ ಬಿಳಿ ಪಿಂಗಾಣಿ ತಟ್ಟೆಯಲ್ಲಿ ಕೇಕ್ ಮತ್ತು ಐಸ್‌ಕ್ರೀಂ ಇರಿಸಿ, ಮೇಲೆ ಕೋಕೋ ಪುಡಿ ಉದುರಿಸಿ ಆಕರ್ಷಕವಾಗಿ ತಂದಿಟ್ಟರು. ಇಲ್ಲೂ ನೀರು ಕೊಟ್ಟಿರಲಿಲ್ಲ. 'ನೀರು ಕೊಡಿ' ಎಂದರು 'ಮಿನಿರಲ್ ವಾಟರ್?' ಎಂದಳು ಸರ್ವ್ ಮಾಡುತ್ತಿದ್ದ ಹುಡುಗಿ. 'ಇಲ್ಲ ಸಾಧಾರಣ ನೀರು' ಎಂದರೆ, ನಮ್ಮಲ್ಲಿ ಸಾಧಾರಣ ನೀರು ಇಲ್ಲ ಎಂದಳು. ಮತ್ತೇ ಲೇಖಕಿಯವರು 'ಬನ್ನಿ ಮಾಲತಿ ಸಾಗರ್‌ಗೆ, ಪಾನಿಪುರಿ ತಿನ್ನೋಣ' ಎಂದೆ. ಎದುರಿಗೊಂದು 'ಸಾಗರ್' ಹೋಟೆಲಿತ್ತು. ನುಗ್ಗಿದರು. ಕುಳಿತೊಡನೆ ವೇಟರ್ ಬಂದು ನಾಲ್ಕು ಲೋಟ ನೀರು ತಂದಿಟ್ಟ. ಬರೀ ಬಾಯಲ್ಲ ಮನಸ್ಸೂ ತಂಪಾಯಿತು.

---

## 4. ಯಶೋಧರೆ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. ಬಿ) ಯಶೋಧರೆ
2. ಡಿ) ನೀನು
3. (ಎ) ಸಾಮಾನ್ಯ ವಾಕ್ಯ
4. (ಸಿ) ಕಜ್ಜ
5. (ಬಿ) ಚಕ್ರಾಧಿಪತಿ
6. (ಎ) ಸಿದ್ಧಾರ್ಥನು

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

7. ನಪುಂಸಕಲಿಂಗ
8. ಮಕ್ಕಳು
9. ರಾಯ
10. ಆಗಮಸಂಧಿ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ**

11. ಯಶೋಧರೆಯು ಮತ್ತೊಮ್ಮೆ ತನ್ನ ಪತಿಯನ್ನು ನೀಡಬೇಕಾಗಿ ರಾಜನಲ್ಲಿ ಬೇಡುತ್ತಾಳೆ
12. ತಂದೆಯನ್ನುಕರೆತರಲು ಹೋಗುವೆನೆಂದು ರಾಹುಲನು ಹೇಳಿದನು.
13. ರಾಜನಿಗೆ ಅಂಬಿಕೆಯು ಕನಸಿನ ವಿಚಾರವನ್ನು ತಿಳಿಸಿದಳು
14. ಸನ್ಯಾಸಿಯಾದವನು ಸತಿಯನ್ನು ನೋಡುವುದು ಸಂಪ್ರದಾಯಕ್ಕೆ ವಿರುದ್ಧವಾದುದು
15. ಈಗ ನೀನಿರುವುದು ಸನ್ಯಾಸಿಯ ಸ್ಥಿತಿಯೇ ಎಂದು ರಾಜನು ಹೇಳುತ್ತಾನೆ
16. ಸಿದ್ಧಾರ್ಥನ ಹೆಂಡತಿಯ ಹೆಸರು ಯಶೋಧರೆ
17. ಕಪಿಲವಸ್ತುವಿನ ರಾಜಕುಮಾರ ಸಿದ್ಧಾರ್ಥ
18. ಯಶೋಧರೆಯು ತನ್ನ ಪತಿಯಾದ ಸಿದ್ಧಾರ್ಥನ ಪಾದದ ಅಡಿಗೆ ತಲೆಯಿಟ್ಟು ದುಃಖಿಸುವಳು.

19. ರಾಹುಲನು ತನ್ನ ತಾಯಿಯ ಬಳಿ ತನ್ನ ತಂದೆಯಾದ ಸಿದ್ಧಾರ್ಥನನ್ನು ನೋಡುವ ಆಸೆಯನ್ನು ವ್ಯಕ್ತಪಡಿಸುವನು.
20. ರಾಹುಲನು ತನ್ನ ತಂದೆಯನ್ನು ನೋಡಲು ಅಂಬಿಕೆಯ ಜೊತೆ ತೆರಳಿದನು.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

21. ಸೋದರಿಯ ಸುತಳೆದಂದು ಎಳೆತನದಿಂದಲೇ ನನ್ನನ್ನು ಕರೆತಂದು ಸಾಕಿ ಸಲುಹಿ ಸೊಸೆಯಾಗಿ ಸ್ವೀಕರಿಸಿ ನನ್ನ ಬಾಳ್ವೆಯನ್ನುದ್ಧರಿಸಿದಿರಿ. ನಿಮ್ಮ ಅರಮನೆಯಲ್ಲಿ ನಾನು ಕನಸಿನಲ್ಲೂ ಎಣಿಸಲಾಗದ ಸುಖವನ್ನು ಅನುಭವಿಸಿದೆನು. ಪತಿಯನ್ನು ನನಗೆ ಇನ್ನೊಮ್ಮೆ ನೀಡಿ ರಕ್ಷಿಸಿರಿ. ನಾನು ನನ್ನ ಪತಿಯೆಡೆಗೆ ಹೋಗುವೆನು. ರಾಹುಲನನ್ನು ಇಲ್ಲಿಯೇ ಇರಿಸಿಕೊಳ್ಳಿರಿ. ನನಗೆ ಪತಿಯೆಡೆಗೆ ಹೋಗಲು ಅನುಮತಿ ಕೊಡಿ ಎಂದು ರಾಜನನ್ನು ಪೀಠದಲ್ಲಿ ಯಶೋದರೆಯು ವಿನಂತಿಸಿದಳು.

22. ರಾಹುಲನು ತನ್ನ ತಂದೆಯನ್ನು ಕರೆತರಲು ಹೋಗುವೆನೆಂದು ಹಠ ಮಾಡಲು ಯಶೋಧರೆಗೆ ಚಿಂತೆಯಾಯಿತು. ಹಿಂದೊಮ್ಮೆ ಕನಸು ಬಿದ್ದು ಎಚ್ಚರವಾಗಿ ನೋಡಿದಾಗ ಪಕ್ಕದಲ್ಲಿ ಮಲಗಿದ್ದ ಸಿದ್ಧಾರ್ಥನು ಮನೆ ಬಿಟ್ಟು ಹೊರಟು ಹೋಗಿದ್ದನು. ಈಗಲೂ ಅಂತದ್ದೇ ಒಂದು ಕನಸು ಬಿದ್ದಿತ್ತು. ಇಂದು ಇರುಳಾದ ಮೇಲೆ ಮತ್ತೆ ಏನು ಮಾಡುವುದು? ನಿದ್ದೆಯಲ್ಲಿ ಮುಳುಗಿದಾಗ ಮತ್ತೆ ಇನ್ನಾವ ಕನಸಿನ ಮೊಸಳೆ ಹಿಡಿಯುವುದೋ ಇನ್ನೆಷ್ಟು ತೊಳಲಬೇಕೋ ಎಂದು ನನಗೆ ಭಯವಾಗುತ್ತಿದೆ ಎಂದು ಯಶೋಧರೆ ರಾಜನಿಗೆ ಮಂಡಿಯೂರಿ ನಮಸ್ಕರಿಸುತ್ತಾ ಹೇಳುತ್ತಾಳೆ

23. ಯಶೋಧರೆಯು ಸಿದ್ಧಾರ್ಥನನ್ನು ನೋಡಲು ತಾನೇ ಹೋಗುವೆನೆಂದಾಗ ರಾಜನು ನಿನಗೆ ಗೊತ್ತಲ್ಲವೇ ಅವನು ಸನ್ಯಾಸವನ್ನು ಸ್ವೀಕರಿಸಿಹನು ಎಂದು. ನೀನು ಹೋಗಿ ನೋಡುವುದು ಸರಿಯೇ ಎಂದು ಕೇಳುವನು. ಹೋಗಿ ಕೇಳುವೆನು ಎಂದು ಯಶೋಧರೆಯು ಹೇಳಿದಾಗ ಸನ್ಯಾಸಿಯಾದವನು ಸತಿಯ ನೋಡುವ ಮಾತು ಸಂಪ್ರದಾಯಕ್ಕೆ ವಿರೋಧವಾದುದು ಎಂದು ರಾಜನು ಉತ್ತರಿಸುವನು. ಆಗ ಯಶೋಧರೆಯು ಪುನಃ ಹಿಂದೊಮ್ಮೆ ಗಾರ್ಗಿಯು ಸನ್ಯಾಸದಲಿ ತನ್ನ ಪತಿಯೊಡನೆ ಕಾನನಕ್ಕೆ ತೆರಳಿದ್ದಳು ಎಂದು ಕೇಳಿದ್ದೇನೆ. ನಾನೂ ಅಂತೆಯೇ ಸನ್ಯಾಸ ಪಡೆದು ಸಿದ್ಧಾರ್ಥನೆಡೆಗೆ ಹೋಗಲೇ ಎಂದು ಕೇಳಿದಾಗ ಈ ಹತ್ತು ವರ್ಷಗಳಿಂದಲೂ ನೀನಿರುವ ರೀತಿ ಸನ್ಯಾಸವೇ ಅಲ್ಲವೇ? ಎಂದು ಪ್ರಶ್ನಿಸುವನು

24. ತಂದೆಯನ್ನು ಕರೆತರಲು ರಾಹುಲನು ಹೋದವನು ಬರುವನೋ ಇಲ್ಲವೋ ಎಂದು ಯಶೋಧರೆಗೆ ಭಯವಾಗುವುದು. ನಾನು ಬರುವುದು ಸಂದೇಹವಾದರೆ ನಮ್ಮ ಜೊತೆಯಲ್ಲಿ ಅಂಬಿಕೆಯನ್ನು ಕಳಿಸು ಎಂದು ರಾಹುಲನು ಹೇಳುವನು. ರಾಜನು ಯಶೋಧರೆಯನ್ನು ಈ ಕುರಿತು ವಿಚಾರಿಸಲಾಗಿ ತನಗೆ ಯಾವುದೂ ತೋಚದು. ಅವರನ್ನು (ಬುದ್ಧ) ನೋಡುವ ಪುಣ್ಯ ತನ್ನ ಕಣ್ಣುಗಳಿಗೆ ಇದೆಯೋ ಇಲ್ಲವೋ ನಾನರಿಯೆ. ಬಾಲಕನು (ರಾಹುಲನು) ತನ್ನ ತಂದೆಯನ್ನು ನೋಡ ಬೇಕೆಂದು ಆಶಿಸಲು ಬೇಡವೆನ್ನುವುದು ಸರಿಯೇ ಎಂಬ ಸಂದೇಹ ತನ್ನ ಆಂತರ್ಯದೊಳಿರುವುದು ಎಂದು ಯಶೋಧರೆಯು ಹೇಳುವಳು.

25. ಈ ಕೆಳಗಿನ ಚಿತ್ರವನ್ನು ಗಮನಿಸಿ ಸಂಭಾಷಣೆಯನ್ನು ಬರೆಯಿರಿ. (ಗ್ರಹಿಕೆ - ಸಾಧಾರಣ)

**ರಾಜ :** ಕುವರನಿಗೆ ಹೇಳಿ ಕಳುಹಿಸುವ, ಅವನಿಷ್ಟವನು ತಿಳಿದು ಅದರಂತೆ ನಡೆಯುವ.

**ಯಶೋಧರೆ :** ಆಗಬಹುದು, ಇಂದೆ ಬೇಹನು ಕಳುಹಿ.

**ರಾಜ :** ಕಳುಹುವೆನು, ಯಾರಲ್ಲಿ ?

**ರಾಹುಲ :** ತಾತ ಅಣ್ಣನ ನೋಡೆ ಯಾರನೋ ಕಳುಹುವಿರ ? ನಾ ಹೋಗಿಬರುವೆ. ನನ್ನನು ಕಳುಹಿ.

**ಯಶೋಧರೆ :** ಅಣ್ಣಯ್ಯ ಮೊದಲು ಬೇಹಿನ ಜನರು ಹೋಗಿ ಅವರಿಚ್ಛೆಯನು ತಿಳಿದು ಮರಳಲಿ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

26. ಮಾಸ್ತಿ ವೆಂಕಟೇಶ್ ಅಯ್ಯಂಗಾರ್

ಕನ್ನಡ ಸಾಹಿತ್ಯ ಲೋಕದಲ್ಲಿ ಸಣ್ಣಕಥೆಗಳ ಜನಕ ಎಂದು ಖ್ಯಾತರಾದ ಶ್ರೀನಿವಾಸ ಎಂದ ಕಾವ್ಯನಾಮದಿಂದ ಪ್ರಸಿದ್ಧರಾದ ಮಾಸ್ತಿ ವೆಂಕಟೇಶ ಅಯ್ಯಂಗಾರರು ಕೋಲಾರ ಜಿಲ್ಲೆಯ ಮಾಲೂರು ತಾಲ್ಲೂಕಿನ ಮಾಸ್ತಿ ಎಂಬ ಗ್ರಾಮದಲ್ಲಿ ಸಾ.ಶ. 1891 ರಲ್ಲಿ ಜನಿಸಿದರು. ಗೌತಮಿ ಹೇಳಿದ ಕಥೆ, ಸಾರಿಪುತ್ರನ ಕೊನೆಯ ದಿನಗಳು, ಕುಚೇಲನ ಭಾಗ್ಯ ಹೇಮಕೂಟದಿಂದ ಬಂದ ಮೇಲೆ ಚಿಕವೀರರಾಜೇಂದ್ರ ಮೊದಲಾದವು. ಇವರು ಬರೆದ ಪ್ರಮುಖ ಕೃತಿಗಳು. ಇವರ ಚಿಕವೀರರಾಜೇಂದ್ರ ಕೃತಿಗೆ 1983 ರಲ್ಲಿ ಜ್ಞಾನಪೀಠ ಪ್ರಶಸ್ತಿ ದೊರೆತಿದೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

27. ಆಯ್ಕೆ : ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭ: ಸಿದ್ಧಾರ್ಥನು ಅರಮನೆ ತ್ಯಜಿಸಿ ಹತ್ತು ವರ್ಷಗಳು ಕಳೆದಿವೆ. ಮಗ ರಾಹುಲನಿಗೂ ಹತ್ತು ವರ್ಷಗಳಾಗಿವೆ. ಮಗ ರಾಹುಲನು ತನ್ನ ತಂದೆಯನ್ನು ಕರೆತರುವುದಕ್ಕಾಗಿ ಹೇಳುತ್ತಿದ್ದಾನೆ. ಆತನನ್ನು ಕರೆತರಲು ತಾನೇ ಹೋಗಬೇಕೆಂಬುದು ಯಶೋಧರೆಯ ಅಬಿಮತ. ಮಗನೂ ಹೋದವನು ಬಾರದಿದ್ದರೆ ಎಂಬ ಆತಂಕ ಅವಳನ್ನು ಕಾಡುತ್ತಿದೆ. ಅವಳನ್ನು ಕಾಣಲು ಬಂದ ರಾಜನಲ್ಲಿ ಈ ಅರಮನೆಯಲ್ಲಿ ಎಲ್ಲಾ ಸುಖಗಳನ್ನೂ ತಾನು ಅನುಭವಿಸಿರುವೆ. ಕನಸಲ್ಲೂ

ಎಣಿಸದ ಸುಖ ತನಗೆ ದೊರೆತಿದೆ. ಆದರೆ ಪತಿಯೆಡೆಗೆ ಹೋಗಲು ತನಗೆ ಅನುಮತಿ ನೀಡಿ ಎಂದು ಕೇಳುವಾಗ ಮೇಲಿನ ಮಾತು ಬಂದಿದೆ

ಸ್ವಾರಸ್ಯ: ಅರಮನೆಯಲ್ಲಿ ಸುಖದಲ್ಲಿ ತಾನಿದ್ದ ಗಳಿಗೆಯನ್ನು ನೆನಪಿಸಿಕೊಳ್ಳುವಾಗ ಯಶೋಧರೆ ಮೇಲಿನಂತೆ ಹೇಳಿದ್ದಾಳೆ.

28. ಆಯ್ಕೆ : ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ: ತಂದೆಯನ್ನು ಕರೆತರಲು ರಾಹುಲನು ಹೋದವನು ಬರುವನೋ ಇಲ್ಲವೋ ಎಂದು ಯಶೋಧರೆಗೆ ಭಯವಾಗುವುದು. ನಾನು ಬರುವುದು ಸಂದೇಹವಾದರೆ ನಮ್ಮ ಜೊತೆಯಲ್ಲಿ ಅಂಬಿಕೆಯನ್ನು ಕಳುಹಿಸು ಎಂದು ರಾಹುಲನು ಹೇಳುವಾಗ ಮೇಲಿನಮಾತು ಬಂದಿದೆ.

ಸ್ವಾರಸ್ಯ: ರಾಹುಲನು ತನ್ನ ತಾಯಿಗೆ ಮರಳಿ ಬರುವ ಭರವಸೆ ನೀಡುವ ಸನ್ನಿವೇಶ ಇದಾಗಿದೆ.

29. ಆಯ್ಕೆ : ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ: ತನ್ನ ತಂದೆಯನ್ನು ಕರೆತರಲು ರಾಹುಲನು ಅಂಬಿಕೆಯೊಡನೆ ಹೊರಟಾಗ ಯಶೋದರೆಯು ದುಃಖಿಸುವಳು. ತನಗೆ ಒದಗಿ ಬಂದ ವಿಧಿಯನ್ನು ನೆನೆದು ದುಃಖಿಸುತ್ತಿರುವಾಗ ರಾಜನು ಮೇಲಿನಂತೆ ಸಮಾಧಾನಿಸುವನು.

ಸ್ವಾರಸ್ಯ: ವಿಧಿಯು ಕೆಟ್ಟದು ಮಾಡಿದೆ ಎಂದು ಶೋಕಿಸಬೇಡ. ನಿನ್ನ ತೊರೆದ ನಿನ್ನ ಪತಿಯು ಈಗ ಲೋಕಪೂಜ್ಯನಾಗಿರುವನು ಎಂದು ಯಶೋಧರೆಯನ್ನು ಸಮಾಧಾನಿಸುವ ರಾಜನು ವಿಧಿಯ ಬಗ್ಗೆ ಆಡಿದ ಒಳ್ಳೆಯ ಮಾತುಗಳು ಇಲ್ಲಿ ವ್ಯಕ್ತವಾಗಿದೆ

30. ಆಯ್ಕೆ : ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.

ಸಂದರ್ಭಯಶೋಧರೆಯು ತನಗೆ ಬಿದ್ದ ಕನಸಿನ ಕುರಿತು ತನ್ನಸಖಿ ಅಂಬಕೆಗೆ ವಿವರಿಸುವಳು. ಈ ಕನಸಿನಿಂದ ಇನ್ನೆಷ್ಟು ತೊಳಲಬೇಕೋ ಎಂದು ಭೀತಿಯಾಗುತ್ತಿದೆ ಎಂದು ವಿವರಿಸುವಾಗ ಮೇಲಿನಂತೆ ಹೇಳಿದ್ದಾಳೆ.

ಸ್ವಾರಸ್ಯ: ಹಿಂದೊಮ್ಮೆ ಕನಸು ಕಂಡು ಎಚ್ಚರವಾದಾಗ ಬಳಿ ಮಲಗಿದ್ದ ಸಿದ್ದಾರ್ಥ ರಾಜ್ಯ ತೊರೆದು ಹೋಗಿದ್ದರಿಂದ ಈ ಕನಸಿನಿಂದ ಇನ್ನಾವ ಅಪತ್ತು ಕಾದಿದೆಯೋ ಎಂಬ ಆತಂಕ ಯಶೋಧರೆಯ ಮಾತಿನಲ್ಲಿ ವ್ಯಕ್ತವಾಗಿದೆ

31. ಆಯ್ಕೆ :ಮೇಲಿನ ವಾಕ್ಯವನ್ನು ಮಾಸ್ತಿ ವೆಂಕಟೇಶ ಅಯ್ಯಂಗಾರರು ಬರೆದ ಯಶೋಧರೆ ಎನ್ನುವ ಗದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ: ತನ್ನ ತಂದೆಯನ್ನು ಕರೆತರಲು ರಾಹುಲನು ಅಂಬಿಕೆಯ ಜೊತೆ ಹೊರಡುವಾಗ ಹೋದವನು ಮತ್ತೆ ಮರಳಿ ಬರುವನೋ ಇಲ್ಲವೋ ಎಂದು ಯಶೋಧರೆಗೆ ಭಯ ಉಂಟಾಗಿ ಈ ಮಾತನ್ನು ತನ್ನ ಮಗನಿಗೆ ಹೇಳುವ ಸಂದರ್ಭ ಇದಾಗಿದೆ.

ಸ್ವಾರಸ್ಯ: ತನ್ನ ಮಗನ ಮೇಲಿನ ಪ್ರೀತಿ, ಮಮತೆ ಹಾಗೂ ಮುಂದಿನ ದಿನಗಳಲ್ಲಿ ನಾನು ಒಬ್ಬಳೇ ಒಂಟಿಯಾಗಿ ಬಿಡುತ್ತೀನ್ನೇನೋ ಎನ್ನುವ ಆತಂಕ ಈ ವಾಕ್ಯದಲ್ಲಿ ಬಹು ಸ್ವಾರಂಸ್ಯ ಪೂರ್ಣವಾಗಿ ಮೂಡಿ ಬಂದಿದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

32. ರಾಜುನು ರಾಹುಲನನ್ನು ಕುರಿತು "ಮೊದಲು ಬೇಹಿನವರು ಹೋಗಿ ನಿನ್ನ ತಂದೆಯನ್ನು ಕಂಡು ಅವನಿಷ್ಟವನ್ನು ತಿಳಿದು ಬರಲಿ" ಎಂದು ಹೇಳುತ್ತಾನೆ. ಆಗ ರಾಹುಲನು " ದೇಹಿನವರು ಹೋಗಿ ಬಂದ ನಂತರ ನಾನು ನನ್ನ ತಂದೆಯೆಡೆಗೆ ಹೋಗಬೇಕೆ? ನಾನೊಲ್ಲೆ, ನಾನೀಗಲೇ ಹೋಗಬೇಕು. ನೀವು ನನ್ನ ತಂದೆಯನ್ನು ನೋಡಿರುವಿರಿ. ಆದ್ದರಿಂದ ನಿಮಗೆ ಅವರನ್ನು ನೋಡಬೇಕೆಂಬ ಆಸೆ ಅಷ್ಟೊಂದು ಬಲವಾಗಿಲ್ಲ. ಆದರೆ ನಾನು ಹುಟ್ಟಿದಾಗಿನಿಂದಲೂ ಅವರನ್ನು ನೋಡಿಯೇ ಇಲ್ಲ. ಅವರನ್ನು ನೋಡಲು ನಾನೆಷ್ಟು ದಿನ ಕಾಯಬೇಕು. ತಂದೆಯನ್ನು ನೋಡಬೇಕು.ಅವರೊಡನಿದ್ದು ಮಾತನಾಡಬೇಕೆಂದು ನನಗೆ ಬಹಳ ಆಸೆ ಇದೆ.
ನೀವು ಭಯ ಪಡುವುದು ಬೇಡ. ನಾನು ಹೋಗಿ ತಂದೆಯನ್ನು ಕರೆದುಕೊಂಡು ಮತ್ತೆ ಬರುವೆನು" ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದನು.

33. ಯಶೋಧರೆಯ ವಿಧಿಯ ಬಗ್ಗೆ ರಾಜನು "ನಿನ್ನ ವಿಧಿ ಕೆಟ್ಟದ್ದು ಎಂದು ಎಣಿಸದಿರು. ನಿನ್ನ ಅರಸನು ಲೋಕಕ್ಕೆ ಪೂಜ್ಯನು ಎನಿಸಿರುವನು. ರಾಜ್ಯವನ್ನು ಆಳುವ ಕಿರಿಯ ಹಿರಿಮೆಯನ್ನು ತೊರೆದು; ಜಗದ ಜೀವಗಳನ್ನು ಉದ್ಧರಿಸುವ ಹಿರಿಯ ಹಿರಿಮೆಯನ್ನು ತನ್ನಾಗಿಸಿಕೊಂಡಿರುವನು. ನಿನ್ನ ಹತ್ತು ವರ್ಷದ ತಪದ ಮಹಿಮೆಯಿಂದ ಬೆಳೆದು ನಿಂತ ಮಗನು ನಿನ್ನ ಪತಿಯನ್ನು ಕರೆತರಲು ಹೊರಟು ನಿಂತಿರುವನು. ವಿಧಿಬದ್ಧವಾಗಿ ನಡೆಯುವ ಹವನದಲ್ಲಿ ಉದ್ಗಾತೃಗಳು ಸ್ವರ ಹಿಡಿದು ಸೊಗಸಾಗಿ ನುಡಿದ ಶಕ್ತಿಯ ಮಂತ್ರವು ದೇವರನ್ನು ಕರೆತರುವಂತೆ ನಿನ್ನ ಮಗನು ಖಂಡಿತ ಅವನ ತಂದೆಯನ್ನು ಕರೆದುಕೊಂಡು ಬರುವನು.

---

## ಪದ್ಯ ಭಾಗ

## 1. ಕನ್ನಡಿಗರ ತಾಯಿ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಡಿ) ಗುಣಿತಾಕ್ಷರ
2. (ಸಿ) ಸಂಯುಕ್ತಾಕ್ಷರ
3. (ಬಿ) ಸಜಾತಿಯ ಸಂಯುಕ್ತಾಕ್ಷರ
4. (ಎ) ವಿಜಾತಿಯ ಸಂಯುಕ್ತಾಕ್ಷರ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

5. ವಿಜಾತಿಯ ಸಂಯುಕ್ತಾಕ್ಷರ
6. ಬೇಲೂರು
7. ಪಕ್ಷಿ
8. ಪರ್ವತ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು 1 ಅಂಕ**

9. ನಮ್ಮನ್ನು ಆಳುವವಳು ಕನ್ನಡಾಂಬೆ.
10. ಲತೆ ಪತ್ರ-ಪುಷ್ಪಗಳನ್ನು ನೀಡುತ್ತದೆ.
11. ಕನ್ನಡ ತಾಯಿಯ ಬಸಿರ ಹೊನ್ನಗನಿ ವಿದ್ಯಾರಣ್ಯರು.
12. ಕನ್ನಡ ತಾಯಿಯ ಹಾಡನ್ನು ಹೊಸತು ಕಿನ್ನರಿಯಲಿ ಉಕ್ಕಿಸಬೇಕು.
13. ಕನ್ನಡಿಗರ ಪಾಡು ಮೃಗದ ಸೇಡಿನಂತಾಗಿದೆ.
14. ಕನ್ನಡ ನಾಡಿನಲ್ಲಿರುವ ಮರಗಳು ತರತರದ ಹಣ್ಣು - ಕಾಯಿ ನೀಡುತ್ತವೆ.
15. ಕನ್ನಡಿಗರು ಒಂದಾಗಿ ಶ್ರಮಿಸಿದಾಗ

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

16. ಕನ್ನಡ ನಾಡಿನ ಪ್ರಕೃತಿ ಸಂಪದ್ಭರಿತವಾಗಿದ್ದು ಹಣ್ಣು-ಕಾಯಿಗಳನ್ನು ನೀಡುವ ವಿವಿಧ ರೀತಿಯ ಮರಗಳು, ಪತ್ರ-ಪುಷ್ಪಗಳನ್ನು ನೀಡುವ ಬಗೆಬಗೆಯ ಬಳ್ಳಿಗಳಿಂದ ಕೂಡಿದೆ. ಅಲ್ಲದೆ ಕೆನೆಭರಿತವಾದ ಹಾಲ್ದೆನೆಗಳಿಂದ ಕೂಡಿದ ಬೆಳೆಗಳ ಮೇಲಿಂದ ಬೀಸಿ ಬರುವ ತಂಗಾಳಿ, ಪಾಣಿ-ಪಕ್ಷಿಗಳ ಸಮೂಹ, ನದಿಗಳು, ನಗರಗಳು, ಪರ್ವತಗಳು ಹೀಗೆ ಇಲ್ಲಿ ಇಲ್ಲದಿರುವುದೇ ಇಲ್ಲ. ಸ್ವರ್ಗವೇ ಭೂಮಿಗಿಳಿದಂತೆ ಮನೋಹರವಾಗಿದೆ.

17. ಕನ್ನಡನಾಡು ಹಲವಾರು ಕವಿಶ್ರೇಷ್ಠರ ಉದಯಕ್ಕೆ ಕಾರಣವಾಗಿದೆ. ಕೊಂಡಕುಂದಾಚಾರ್ಯರು, ಮಧ್ವಾಚಾರ್ಯ, ಬಸವಣ್ಣನವರಂತಹ ಆಚಾರ್ಯರು, ನೃಪತುಂಗ, ಪಂಪ, ರನ್ನ, ಲಕ್ಷ್ಮೀಶ, ಜನ್ನ, ಷಡಕ್ಷರಿ, ಮುದ್ದಣ ಮೊದಲಾದ ಶ್ರೇಷ್ಠ ಕವಿಗಳು ಇಲ್ಲಿ ಜನಿಸಿದ್ದಾರೆ. ಹಾಗೆಯೇ ಪುರಂದರದಾಸರಂತಹ ದಾಸ ಶ್ರೇಷ್ಠರು, ವಿದ್ಯಾರಣ್ಯರಂತಹ ಮಹಿಮರು ಈ ಕನ್ನಡತಾಯಿಯ ಹೊನ್ನಿನ ಗಣಿಯಂತಹ ಗರ್ಭದಲ್ಲಿ ಜನಿಸಿರುವುದು ಹಿರಿಮೆಯಾಗಿದೆ.

18. ಕನ್ನಡಿಗರು ಕನ್ನಡದಲ್ಲಿರುವ ಕಂಪನ್ನು ಅರಿಯದೆ ಬೇರೆ ಭಾಷೆಗಾಗಿ ಆಸೆಪಡುತ್ತಿದ್ದಾರೆ. ಆದ್ದರಿಂದ ಕವಿ "ಕನ್ನಡಾಂಬೆಯೇ, ಕನ್ನಡ ಕಸ್ತೂರಿಯನ್ನು ಹೊಸ ಮಾತಿನಿಂದ ತೀಡಿ, ಅದರಲ್ಲಿ ಪರಿಮಳವನ್ನು ಹೊರತೆಗೆದು, ಕಾಮಧೇನುವಿನ ಮೈಯಲ್ಲಿ ಹೊಮ್ಮಿದ ಶಕ್ತಿಯಂತೆ ಕನ್ನಡಿಗರಲ್ಲಿ ಹೊಸ ಶಕ್ತಿಯನ್ನು ತುಂಬು, ಹೊಸ ಪರಿಮಳದ ನಲ್ನುಡಿಗಳಿಂದ ಇಡೀ ಜಗತ್ತಿನಲ್ಲಿ ನಿನ್ನ ಹೆಸರನ್ನು ಹಬ್ಬಿಸಬೇಕು." ಎಂದು ಆಶಿಸಿದ್ದಾರೆ.

19. ಕನ್ನಡ ತಾಯಿಯನ್ನು ಮರೆಯಲು ಸಾಧ್ಯವಿಲ್ಲ. ಏಕೆಂದರೆ, ಕನ್ನಡಾಂಬೆಯು ಕನ್ನಡಿಗರೆಲ್ಲರ ಜನ್ಮದಾತೆಯಾಗಿದ್ದಾಳೆ. ಆ ತಾಯಿಯು ನಮ್ಮ ಪ್ರತಿಯೊಂದು ತಪ್ಪುಗಳನ್ನು ಸಹಿಸಿಕೊಂಡಿದ್ದಾಳೆ. ಬಹಳ ಪ್ರೀತಿಯಿಂದ ನಮ್ಮನ್ನು ಸಲಹಿದ್ದಾಳೆ. ಅವಳೇ ನಮ್ಮ ಜೀವನವಾಗಿದ್ದಾಳೆ. ನಮ್ಮ ತನು, ಮನ, ನುಡಿ ಎಲ್ಲವೂ ಕನ್ನಡವಾಗಿದೆ. ಆದ್ದರಿಂದ ಕನ್ನಡತಾಯಿಯನ್ನು ಮರೆಯಲು ಸಾಧ್ಯವಿಲ್ಲ.

20. ಕನ್ನಡ ಕಸ್ತೂರಿಯನ್ನು ಹೊಸ ನುಡಿಗಳಿಂದ ತೀಡಿ, ಪರಿಮಳವನ್ನು ಹೊರತೆಗೆದು, ಕನ್ನಡಿಗರಲ್ಲಿ ಹೊಸ ಶಕ್ತಿಯನ್ನು ತುಂಬು. ಹೊಸ ಪರಿಮಳದ ನಲ್ನುಡಿಗಳಿಂದ ಇಡೀ ಜಗತ್ತಿನಲ್ಲಿ ನಿನ್ನ ಹೆಸರನ್ನು ಹಬ್ಬಿಸು. ನಮ್ಮ ಎದೆಯನ್ನು ಗಟ್ಟಿಗೊಳಿಸಿ, ಎಲ್ಲರ ಬಾಯಲ್ಲಿ

ನೆಲಸಿ, ನಮ್ಮೆಲ್ಲರ ಮನಸ್ಸುಗಳನ್ನು ಒಂದುಗೂಡಿಸು. ಇದನ್ನೊಂದನ್ನೆ ಕೋರುತ್ತೇನೆ. ನಿನ್ನ ಮೂರ್ತಿ ಜಗತ್ತಿನಲ್ಲೆಲ್ಲ ಕೀರ್ತಿಗಳಿಸುವಂತೆ ಎಂದು ತೋರುವೆ" ಎಂದು ಕೋರುತ್ತಾರೆ.

21. ಈ ಚಿತ್ರವನ್ನು ಗಮನಿಸಿ ಸ್ವರಚಿತ ಕವನವನ್ನು ಬರೆಯಿರಿ. (ಗ್ರಹಿಕೆ - ಸಾಧಾರಣ)
   ( ಮಕ್ಕಳ ವಿವೇಚನೆಗೆ ತಕ್ಕ ಉತ್ತರವನ್ನು ಮೌಲ್ಯೀಕರಿಸುವುದು)
22. ಪಂಪ, ರನ್ನ, ಜನ್ನ, ಷಡಕ್ಷರಿ ಮುದ್ದಣ್ಣ, ಪುರಂದರದಾಸರು ಮತ್ತು ವಿದ್ಯಾರಣ್ಯರ ಹೆಸರುಗಳು ಬರುತ್ತವೆ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

23. ಎಂ. ಗೋವಿಂದಪೈ
   ಎಂ.ಗೋವಿಂದ ಪೈ ಅವರು ಕಾಸರಗೋಡು ಜಿಲ್ಲೆಯ ಮಂಜೇಶ್ವರದಲ್ಲಿ ೨೩.೦೩.೧೮೮೩ ರಲ್ಲಿ ಜನಿಸಿದರು. ಇವರ ಕವನ ಸಂಕಲನಗಳು: ಗಿಳಿವಿಂಡು, ನಂದಾದೀಪ ಮೊದಲಾದವು. ಅನುವಾದಿತ ಕೃತಿಗಳು; ನವೀನ ಚಂದ್ರಸೇನರ ಬಂಗಾಳಿ ಕೃಷ್ಣ ಚರಿತೆಯ ಇವಲ್ಲದೆ ವೈಶಾಖ ಮತ್ತು ಗೊಲ್ಗೊಥಾ ಖಂಡಕಾವ್ಯ, ಚಿತ್ರಭಾನು, ಹೆಬ್ಬೆರಳು, ಪಾರ್ಶ್ವನಾಥ ತೀರ್ಥಂಕರ ಚರಿತೆ, ಬಾಹುಬಲಿ. ಗೊಮ್ಮಟೇಶ್ವರ ಚರಿತೆ, ಭಗವಾನ್ ಬುದ್ಧ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಪ್ರಶಸ್ತಿ/ಪುರಸ್ಕಾರಗಳು: *೧೯೪೯ ರಲ್ಲಿ ಮದ್ರಾಸ್ ಸರ್ಕಾರ ರಾಷ್ಟ್ರಕವಿ ಬಿರುದು ನೀಡಿ ಗೌರವಿಸಿದೆ. ಇವರು ಕನ್ನಡದ ಮೊದಲ ರಾಷ್ಟ್ರಕವಿ ಹೆಗ್ಗಳಿಕೆಗೆ ಪಾತ್ರರಾದವರು..

**ಗಾದೆಯನ್ನು ವಿಸ್ತರಿಸಿ ಬರೆಯುವುದು :**

| | |
|---|---|
| ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| ಭಾಷಾಶೈಲಿ –ಪದಬಂಧಗಳಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

24. ಮಾತು ಬೆಳ್ಳಿ; ಮೌನ ಬಂಗಾರ
25. ಕೈ ಕೆಸರಾದರೆ ಬಾಯಿ ಮೊಸರು
26. ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ
27. ಗಿಡವಾಗಿ ಬಗ್ಗದು ಮರವಾಗಿ ಬಗ್ಗೀತೆ
28. ಹಾಸಿಗೆ ಇದ್ದಷ್ಟು ಕಾಲು ಚಾಚು
29. ಅತಿ ಆಸೆ ಗತಿಗೇಡು
30. ಬೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣ ಸಂಕಟ
31. ಊಟ ಬಲ್ಲವನಿಗೆ ರೋಗವಿಲ್ಲ; ಮಾತು ಬಲ್ಲವನಿಗೆ ಜಗಳ ಇಲ್ಲ
32. ದೇಶ ಸುತ್ತಿ ನೋಡು; ಕೋಶ ಓದಿನೋಡು
33. ಉಪ್ಪಿಗಿಂತ ರುಚಿಯಿಲ್ಲ; ತಾಯಿಗಿಂತ ಬಂಧುವಿಲ್ಲ

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

34. ಆಯ್ಕೆ: ಎಂ.ಗೋವಿಂದ ಪೈ ಅವರು ರಚಿಸಿರುವ 'ಕನ್ನಡಿಗರ ತಾಯಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಕವಿ ಕನ್ನಡನಾಡಿನಲ್ಲಿರುವ ಸಂಪದ್ಭರಿತ ಪ್ರಕೃತಿಯನ್ನು ವರ್ಣಿಸುವ ಸಂದರ್ಭದಲ್ಲಿ ಕನ್ನಡ ನಾಡಿನ ಪ್ರಕೃತಿಯಲ್ಲಿ ಹಣ್ಣು-ಕಾಯಿಗಳನ್ನು ನೀಡುವ ವಿವಿಧ ರೀತಿಯ ಮರಗಳು, ಪತ್ರ-ಪುಷ್ಪಗಳನ್ನು ನೀಡುವ ಬಗೆಬಗೆಯ ಬಳ್ಳಿಗಳನ್ನು ಹೊಂದಿರುವುದಲ್ಲದೆ ಪ್ರಾಣಿ-ಪಕ್ಷಿ-ಉರಗಗಳ ಸಮೂಹಗಳಿಂದ ಕೂಡಿದೆ' ಎಂದು ಹೇಳಿದ್ದಾರೆ.
ಸ್ವಾರಸ್ಯ: ಕನ್ನಡನಾಡು ವಿಪುಲ ನೈಸರ್ಗಿಕ ಸಂಪತ್ತಿನಿಂದ ಕೂಡಿದೆ. ಇಲ್ಲಿ ಇಲ್ಲದಿರುವ ಅಂಶವೇ ಇಲ್ಲ ಎಂದು ಹೇಳಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

35. ಆಯ್ಕೆ: ಎಂ.ಗೋವಿಂದ ಪೈ ಅವರು ರಚಿಸಿರುವ 'ಕನ್ನಡಿಗರ ತಾಯಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಕವಿ ಕನ್ನಡನಾಡಿನ ವಾಸ್ತುಶಿಲ್ಪಕಲಾ ವೈಭವವನ್ನು ವರ್ಣಿಸುವ ಸಂದರ್ಭದಲ್ಲಿ ಕನ್ನಡ ನಾಡು ಭವ್ಯ ಶಿಲ್ಪಕಲೆಗಳ ಬೀಡಾಗಿದೆ. ಇಲ್ಲಿ ಇಲ್ಲದಿರುವ ಶಿಲ್ಪಕಲೆಯೇ ಇಲ್ಲ. ಇಲ್ಲಿ ಕಲ್ಲು ಕಲ್ಲುಗಳೂ ನುಡಿಯುತ್ತವೆ' ಎಂದು ಹೇಳಿದ್ದಾರೆ.
ಸ್ವಾರಸ್ಯ: ಕನ್ನಡನಾಡಿನ ವಾಸ್ತುಶಿಲ್ಪಕಲೆಯು ಭವ್ಯ ಇತಿಹಾಸವನ್ನು ಹೊಂದಿದ್ದು ಶಿಲಾಶಾಸನಗಳು ಅದರಎಂಬುದು ಇಲ್ಲಿನ ಸ್ವಾರಸ್ಯವಾಗಿದೆ.

36. ಆಯ್ಕೆ: ಎಂ.ಗೋವಿಂದ ಪೈ ಅವರು ರಚಿಸಿರುವ 'ಕನ್ನಡಿಗರ ತಾಯಿ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಕವಿ ಕನ್ನಡಾಂಬೆಯನ್ನು ಕುರಿತು ನಮ್ಮ ಎದೆಯನ್ನು ಗಟ್ಟಿಗೊಳಿಸಿ. ಎಲ್ಲರ ಬಾಯಲ್ಲಿ ನೆಲಸಿ, ನಮ್ಮೆಲ್ಲರ ಮನಸ್ಸುಗಳನ್ನು ಒಂದುಗೂಡಿಸು, ಎಂದು ಹೇಳುವ ಸಂದರ್ಭದಲ್ಲಿ ನಿನ್ನ ಮೂರ್ತಿ ಜಗತ್ತಿನಲ್ಲೆಲ್ಲ ಕೀರ್ತಿಗಳಿಸುವಂತೆ ಎಂದು ತೋರುವೆ ಎಂದು ಕೋರುತ್ತಾರೆ.
ಸ್ವಾರಸ್ಯ: ಕನ್ನಡ ಭಾಷೆ ಕೇವಲ ಕನ್ನಡ ನಾಡಿಗೆ ಸೀಮಿತವಾಗದೆ ಇಡೀ ಜಗತ್ತಿನಲ್ಲಿ ಕೀರ್ತಿಗಳಿಸಬೇಕೆಂಬ ಕವಿ ಆಶಯ ಇಲ್ಲಿ ಸ್ವಾರಸ್ಯಪೂರ್ಣವಾಗಿದೆ

**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

37. ಜೈನರಾದ ಪೂಜ್ಯಪಾದ ಕೊಂಡಕುಂದವರ್ಯರ,
ಮಧ್ವಯತಿಯೆ ಬಸವಪತಿಯೆ ಮುಖ್ಯ ಮತಾಚಾರ್ಯರ,
ಶರ್ವ ಪಂಪ ರನ್ನರ,
ಲಕ್ಷ್ಮೀಪತಿ ಜನ್ನರ,
ಷಡಕ್ಷರಿ ಮುದ್ದಣ್ಣರ,
ಪುರಂದರ ವರೇಣ್ಯರ,
ತಾಯೆ, ನಿನ್ನ ಬಸಿರೆ ಹೊನ್ನಗನಿ ವಿದ್ಯಾರಣ್ಯರ!

**ಪದ್ಯಭಾಗವನ್ನು ಒದಿ ಅರ್ಥಮಾಡಿಕೊಂಡು, ಮೌಲ್ಯವನಾಧರಿಸಿ ಸಾರಾಂಶ ಬರೆಯುವುದು :**

ವಿಷಯಾಂಶಕ್ಕೆ 3 ಅಂಕಗಳು

ಅಡಕವಾಗಿರುವ ಮೌಲ್ಯ ಗುರುತಿಸುವುದು, ಪದಬಂಧ- ಭಾಷಾಶೈಲಿಗೆ 1 ಅಂಕ

**ಒಟ್ಟು 4 ಅಂಕಗಳು**

38. ಪ್ರಸ್ತುತ ಪದ್ಯ ಭಾಗವನ್ನು ರಾಷ್ಟ್ರಕವಿ ಎಂ ಗೋವಿಂದ ಪೈ ರವರು ರಚಿಸಿರುವ ಕನ್ನಡಿಗರ ತಾಯಿ ಪದ್ಯದಿಂದ ಆರಿಸಿಕೊಳ್ಳಲಾಗಿದೆ.ಕವಿ ಇಲ್ಲಿ ಕನ್ನಡಿಗರ ಭಾವನೆಯನ್ನು ವ್ಯಕ್ತ ಪಡಿಸಿದ್ದಾರೆ. ಕವಿ, ಕನ್ನಡ ನಾಡಿನ ಪ್ರಕೃತಿಯ ಸೊಬಗನ್ನು ವರ್ಣಿಸುತ್ತಾ ಕನ್ನಡ ನಾಡನ್ನು ಈ ರೀತಿ ಚಿತ್ರಿಸಿದ್ದಾರೆ. ನಮ್ಮ ಕನ್ನಡ ನಾಡಿನಲ್ಲಿ ಬಗೆ ಬಗೆಯ ಹಣ್ಣುಗಳನ್ನು ನೀಡುವ ಮರಗಳಿವೆ. ಪತ್ರ - ಪುಷ್ಪಗಳಿಂದ ಕೂಡಿರುವ ಆ ಮರಗಳನ್ನು ಸುತ್ತುವರೆಯಲ್ಪಟ್ಟ ಲತೆಗಳು, ಗಾಳಿಗೆ ಹಾಲುತುಂಬಿ ತೂಗುತ್ತಿರವ ತೆನೆಗಳು, ಬಗೆ ಬಗೆಯ ಪ್ರಾಣಿ - ಪಕ್ಷಿ, ಹಾವು -ಅಳಿಲುಗಳ ಸುಂದರ ಸಂಕುಲ, ನದಿ ಬೆಟ್ಟಗುಡ್ಡ ಪರ್ವತಗಳಿಂದ ಕೂಡಿರುವ ಈ ಸೌಂದರ್ಯ " ಬೇರೆಲ್ಲಿದೆ? ಆಕಾಶದಿಂದ, ಹಾಲು ಜೇನು ಬೆರೆತು ನಮ್ಮ ಕನ್ನಡ - ನಾಡಿನಲ್ಲಿ ಸುರಿಯುತ್ತಿಬಹುದೇನೋ ಎಂಬಂತೆ ನಮ್ಮ ಕನ್ನಡ ನಾಡಿನ ಸೊಬಗು ಸೊಗಸಿನಿಂದ ಕೂಡಿದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು

ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ

**ಒಟ್ಟು 4 ಅಂಕಗಳು**

39. ಕನ್ನಡಾಂಬೆಯು ಕನ್ನಡಿಗರೆಲ್ಲರ ಜನ್ಮದಾತೆಯಾಗಿದ್ದಾಳೆ. ಆ ತಾಯಿಯು ನಮ್ಮ ಪ್ರತಿಯೊಂದು ತಪ್ಪುಗಳನ್ನು ಸಹಿಸಿಕೊಂಡಿದ್ದಾಳೆ. ಬಹಳ ಪ್ರೀತಿಯಿಂದ ನಮ್ಮನ್ನು ಸಲಹಿದ್ದಾಳೆ. ಅವಳೇ ನಮ್ಮ ಜೀವನವಾಗಿದ್ದಾಳೆ. ನಮ್ಮ ತನು, ಮನ, ನುಡಿ ಎಲ್ಲವೂ ಕನ್ನಡವಾಗಿದೆ. ಅವಳನ್ನು ಮರೆಯಲು ಸಾಧ್ಯವಿಲ್ಲ. ಕನ್ನಡ ನಾಡಿನ ವಿವಿಧ ರೀತಿಯ ಮರಗಳು, ಪತ್ರ-ಪುಷ್ಪಗಳನ್ನು ನೀಡುವ ಬಗೆಬಗೆಯ ಬಳ್ಳಿಗಳಿಂದ ಕೂಡಿದೆ. ಅಲ್ಲದೆ ಬೆಳೆಗಳ ಕೆನೆಭರಿತವಾದ ಹಾಲ್ತೆನೆಯ ಮೇಲಿಂದ ಬೀಸಿ ಬರುವ ತಂಗಾಳಿ, ಪ್ರಾಣಿ-ಪಕ್ಷಿಗಳ ಸಮೂಹ, ನದಿಗಳು, ನಗರಗಳು, ಪರ್ವತಗಳು ಹೀಗೆ ಇಲ್ಲಿ ಇಲ್ಲದಿರುವುದೇ ಇಲ್ಲ. ಸ್ವರ್ಗವೇ ಭೂಮಿಗಿಳಿದಂತೆ ಮನೋಹರವಾಗಿದೆ. ಆದ್ದರಿಂದ ಕವಿ ಕನ್ನಡಿಗರ ತಾಯಿ ಮೊಗ ತೋರಬೇಕೆಂದು ಹೇಳಿದ್ದಾರೆ.

40. ಕನ್ನಡನಾಡು ಹಲವಾರು ಕವಿಶ್ರೇಷ್ಠರ ಉದಯಕ್ಕೆ ಕಾರಣವಾಗಿದೆ. ಕೊಂಡಕುಂದಾಚಾರ್ಯರು, ಮಧ್ವಾಚಾರ್ಯ, ಬಸವಣ್ಣನವರಂತಹ ಆಚಾರ್ಯರು, ನೃಪತುಂಗ, ಪಂಪ, ರನ್ನ, , ಮುದ್ದಣ ಮೊದಲಾದ ಶ್ರೇಷ್ಠ ಕವಿಗಳು ಇಲ್ಲಿ ಜನಿಸಿದ್ದಾರೆ. ಹಾಗೆಯೇ ಪುರಂದರದಾಸರಂತಹ ದಾಸ ಶ್ರೇಷ್ಠರು, ವಿದ್ಯಾರಣ್ಯರಂತಹ ಮಹಿಮರು ಈ ಕನ್ನಡ ತಾಯಿಯ ಹೊನ್ನಿನ ಗಣಿಯಂತಹ ಗರ್ಭದಲ್ಲಿ ಜನಿಸಿರುವುದು ಹಿರಿಮೆಯಾಗಿದೆ. ಕನ್ನಡ ನಾಡು ಭವ್ಯ ಶಿಲ್ಪಕಲೆಗಳ ಬೀಡಾಗಿದೆ. ಇಲ್ಲಿ ಇಲ್ಲದಿರುವ ಶಿಲ್ಪಕಲೆಯೇ ಇಲ್ಲ. ಹಳೆಬೀಡು-ಬೇಲೂರುಗಳಲ್ಲಿರುವ ದೇವಾಲಯಗಳು ಸುಂದರವಾಗಿವೆ. ಶ್ರವಣ ಬೆಳಗೊಳ, ಕಾರ್ಕಳ ಮುಂತಾದ ಸ್ಥಳಗಳಲ್ಲಿರುವ ಬಾಹುಬಲಿ ಮೂರ್ತಿಗಳು ಭವ್ಯವಾಗಿವೆ. ಇಲ್ಲಿ ಕಲ್ಲು ಕಲ್ಲುಗಳೂ ಕನ್ನಡ ನಾಡಿನ ಇತಿಹಾಸವನ್ನು ಸಾರುತ್ತವೆ.

# 2. ಭಾರತೀಯತೆ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಸಿ) ತ್ರಿಪದಿ
2. (ಎ) ಅಷ್ಟ್ವಷಟ್ಪದಿ
3. (ಬಿ) ಮಾತ್ರಗಣ
4. (ಡಿ) ಯತಿ
5. (ಎ) ಆದಿಪ್ರಾಸ
6. (ಸಿ) ಸ್ಯೆನಿಕರು ದೇಶ ಸೇವೆಯನ್ನು ಮಾಡುತ್ತಿದ್ದಾರೆ.
7. ಡಿ**)** ಕವನಗಳು

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

8. ಜೋದ
9. ಷಟ್ಪದಿ
10. ಅನ್ವರ್ಥನಾಮ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

11. ಪರ್ವತ ಹಿಮವು ಆಕಾಶದೆತ್ತರಕ್ಕೆ ಎದ್ದು ನಿಂತಿದೆ.
12. ಪೆರ್ದೆರೆಗಳು ಕರಾವಳಿಗೆ ಮುತ್ತನಿಡುತ್ತವೆ.
13. ಹಸಿರು ದೀಪವನ್ನು ಬಯಲ ತುಂಬ ಹಚ್ಚಲಾಗಿದೆ.
14. ನೀಲಿಯಲ್ಲಿ ಹೊಗೆಯನ್ನು ಚೆಲ್ಲುತ್ತಾ ಯಂತ್ರ ಘೋಷವೇಳುತ್ತಿದೆ.
15. ನಮ್ಮ ಧ್ವಜವನ್ನು ಯೋಧರು ಎತ್ತಿ ಹಿಡಿದಿದ್ದಾರೆ.
16. ನಮ್ಮ ಪಯಣವು ನಮ್ಮ ಗುರಿಯ ಬೆಳಕಿನೆಡೆಗೆ ಸಾಗಿದೆ.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

17. ಎಲ್ಲರಿಗೂ ಎರಡು ಕಣ್ಣುಗಳಿರುತ್ತವೆ, ಆ ಕಣ್ಣುಗಳು ಯಾವಾಗಲೂ ಬೇರೆ-ಬೇರೆಯಾಗಿರುತ್ತವೆ. ಆದರೂ ನಾವೆಲ್ಲರೂ ನೋಡುವ ನೋಟವು ಒಂದೇ ಆಗಿರುತ್ತದೆ. ಹಿಮಾಲಯದ ಪರ್ವತ ಶ್ರೇಣಿಗಳಲ್ಲಿ ಆನೇಕ ಪರ್ವತ ಶ್ರೇಣಿಗಳಿದ್ದರೂ ಅದರ ಮೌನ ಒಂದೇ. ಹಾಗೆಯೇ ಅನೇಕ ದೊಡ್ಡ ಅಲೆಗಳು ಸಮುದ್ರದಲ್ಲಿ ಉಂಟಾದರು ಅವುಗಳು ಕರಾವಳಿಗೆ ಮುತ್ತ ನಿಡುವ ರೀತಿ ಒಂದೇ ಆಗಿರುತ್ತದೆ.
18. ನಾಡಿನ ಅನೇಕ ಗಡಿಗಳಲ್ಲಿ ಯೋಧರು ಎತ್ತಿ ಹಿಡಿಯುವ ಧ್ವಜದ ನೆರಳಿನಲ್ಲಿರುವ ಜನರೆಲ್ಲರೂ ಒಂದೇ, ನಾವೆಲ್ಲ ವಾಸಿಸುವ ನೆಲದ ತೊಟ್ಟಿಲಲ್ಲಿ ಬೆಳೆದ ಜನರ ಧ್ವನಿಗಳು ಬೇರೆ ಬೇರೆಯಾದರು, ಭಾಷೆಗಳು ಬೇರೆ ಬೇರೆಯಾದರು ಎಲ್ಲರ ಭಾವ ಒಂದೆ ಎಂಬುದನ್ನು ಕವಿಯು ಮನಮುಟ್ಟುವಂತೆ ಸಮರ್ಥಿಸಿದ್ದಾರೆ.

19. ಕವಿ ಆಕಾಶ ಮುಟ್ಟುವ ರ್ವತಗಳು, ಕರಾವಳಿ, ಹಸಿರು ಬಯಲುಗಳು ಮತ್ತು ಹರಿಯುವ ನದಿಗಳನ್ನು ರ್ಣಿಸಿದ್ದಾರೆ. ಇವು ಭಾರತದ ಪ್ರಕೃತಿ ವೈವಿಧ್ಯವನ್ನು ತೋರಿಸುತ್ತವೆ.
20. ಭಾರತದಲ್ಲಿ ಜನರು ಬೇರೆ ಬೇರೆ ರೂಪ ಮತ್ತು ಹಿನ್ನೆಲೆಯನ್ನು ಹೊಂದಿದ್ದಾರೆ. ಆದರೆ ಎಲ್ಲರ ಗುರಿ ಮತ್ತು ದೇಶಪ್ರೇಮ ಒಂದೇ ಆಗಿದೆ.
21. ನಮ್ಮ ಯೋಧರು ದೇಶದ ಗಡಿಗಳನ್ನು ಕಾಪಾಡುತ್ತಾ ರಾಷ್ಟ್ರಧ್ವಜದ ಗೌರವವನ್ನು ಉಳಿಸುತ್ತಾರೆ. ಅವರ ಶರ್ಯ ಮತ್ತು ತ್ಯಾಗವನ್ನು ಕವಿ ಪ್ರಶಂಸಿಸಿದ್ದಾರೆ.
22. ಭಾರತದಲ್ಲಿ ಅನೇಕ ಭಾಷೆಗಳಿದ್ದರೂ ಎಲ್ಲರ ಮನಸ್ಸಿನ ಭಾವನೆ ಒಂದೇ ಆಗಿದೆ. ಎಲ್ಲರೂ ಭಾರತೀಯರೆಂಬ ಹೆಮ್ಮೆ ಹೊಂದಿದ್ದಾರೆ.
23. ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಹುತಾತ್ಮರನ್ನು ಗೌರವದಿಂದ ನೆನಪಿಸಿಕೊಳ್ಳಬೇಕು. ಅವರ ಆರ್ಶಗಳನ್ನು ಜೀವನದಲ್ಲಿ ಪಾಲಿಸಬೇಕು.
24. ಈ ಪದ್ಯವು ಭಾರತದ ಏಕತೆ, ದೇಶಪ್ರೇಮ ಮತ್ತು ಸಹೋದರತ್ವವನ್ನು ಸಾರುತ್ತದೆ. ಭಾಷೆ, ಪ್ರದೇಶ, ಸಂಸ್ಕೃತಿ ಬೇರೆ ಇದ್ದರೂ ನಾವು ಎಲ್ಲರೂ ಒಂದೇ ಭಾರತೀಯರು ಎಂಬುದನ್ನು ತಿಳಿಸುತ್ತದೆ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

25. ಕೆ.ಎಸ್. ನರಸಿಂಹಸ್ವಾಮಿ

ಕೆ.ಎಸ್. ನರಸಿಂಹಸ್ವಾಮಿಯವರು ಮಂಡ್ಯ ಜಿಲ್ಲೆಯ ಕಿಕ್ಕೇರಿಯವರು. ಇವರ ಕಾಲ 1915-2004. ಇವರು ಶಿಲಾಲತೆ, ಐರಾವತ, ನವಪಲ್ಲವ, ಇರುವಂತಿಗೆ, ದೀಪದ ಮಲ್ಲಿ, ಮನೆಯಿಂದ ಮನೆಗೆ, ತೆರೆದ ಬಾಗಿಲು ಮೊದಲಾದ ಕವನಸಂಕಲನಗಳನ್ನು ರಚಿಸಿದ್ದಾರೆ. 1977 ರಲ್ಲಿ ಇವರ ತೆರೆದ ಬಾಗಿಲು ಎಂಬ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ದುಂಡು ಮಲ್ಲಿಗೆ ಕವನ ಸಂಕಲನಕ್ಕೆ ಪಂಪ ಪ್ರಶಸ್ತಿ ಲಭಿಸಿದೆ. ಇವರು ಪ್ರೇಮಕವಿ ಎಂದು ಹೆಸರಾಗಿದ್ದಾರೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

26. ಆಯ್ಕೆ : ಈ ಮೇಲಿನ ವಾಕ್ಯವನ್ನು 'ಕೆ.ಎಸ್.ನರಸಿಂಹಸ್ವಾಮಿಯ'ವರು ರಚಿಸಿರುವ 'ನವಪಲ್ಲವ' ಎಂಬ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ಆಕಾಶದೆತ್ತರಕ್ಕೆ ಎದ್ದು ನಿಂತಿರುವ ಹಿಮಾಲಯದ ಅನೇಕ ಪರ್ವತ ಶ್ರೇಣಿಗಳ ಹಿಮದ ಮೌನವು ಒಂದೇ. ಹಾಗೆಯೇ ಕರಾವಳಿಗೆ ಮುತ್ತನಿಡುವ ಹಲವು ದೊಡ್ಡ ದೊಡ್ಡ ಅಲೆಗಳು ಬೇರೆ ಬೇರೆಯಾದರೂ ಅವುಗಳ ಗಾನವೊಂದೇ, ಬಯಲ ತುಂಬ ದೀಪದಂತಿರುವ ಹಸಿರೂ ಸಹ ಒಂದೇ. ನದಿಗಳು ಹಲವಾದರೂ ಅವುಗಳು ಹೊರಡಿಸುವ ಯಂತ್ರ ಘೋಷಗಳು ಒಂದೇ. ಅದು ಹೇಗೆಂದರೆ ನಮ್ಮ ಎರಡು ಕಣ್ಣುಗಳು ಬೇರೆ ಬೇರೆಯಾದರೂ ನೋಟವು ಒಂದೇ ಎಂದು ಹೇಳುವ ಸಂದರ್ಭದಲ್ಲಿ ಕವಿಯೂ ಈ ಮೇಲಿನಂತೆ ಹೇಳಿದ್ದಾರೆ.

ಸ್ವಾರಸ್ಯ : ನಾವು ಎಲ್ಲಿ, ಹೇಗೇ ಇದ್ದರೂ ನಾವೆಲ್ಲ ಭಾರತೀಯರು ಎಂಬ ಭಾವನೆ ನಮ್ಮಲ್ಲಿರಬೇಕೆಂಬುದು ಈ ಮಾತಿನ ಸ್ವಾರಸ್ಯವಾಗಿದೆ.

27. ಆಯ್ಕೆ : ಈ ಮೇಲಿನ ವಾಕ್ಯವನ್ನು 'ಕೆ.ಎಸ್.ನರಸಿಂಹಸ್ವಾಮಿಯ'ವರು ರಚಿಸಿರುವ 'ನವಪಲ್ಲವ' ಎಂಬ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ: ನಾಡಿನ ಗಡಿಗಳು ಹಲವು. ಅವು ಬಾನು, ಕಡಲು ಮತ್ತು ಭೂಮಿ. ಇವೆಲ್ಲ ಬೇರೆ ಬೇರೆಯಾದರೂ ಎಲ್ಲಾ ಕಡೆಯೂ ನಮ್ಮ ಯೋಧರು ಮಾಡುವ ಕೆಲಸವು ಒಂದೇ.ವಿವಿಧ ಸ್ಥಳಗಳಲ್ಲಿ ಯುಗದ ದನಿಯಾಗಿ ಮೂಡುವ ಹಾಡುಗಳ ಭಾಷೆ ಬೇರೆಯಾದರೂ ಅವುಗಳ ಭಾವ ಒಂದೇ ಆಗಿರುತ್ತದೆ ಎಂಬುದು ಕವಿಯ ಮಾತಾಗಿದೆ.

ಸ್ವಾರಸ್ಯ : ಭಾಷೆ, ಆಹಾರ, ಉಡುಗೆ-ತೊಡುಗೆ, ಆಚಾರ-ವಿಚಾರ ಬೇರೆ ಬೇರೆಯಾದರೂ ನಮ್ಮಭಾವನೆಗಳು ಒಂದೇ ಆಗಿರಬೇಕೆಂಬುದು ಈ ಮಾತಿನ ಸ್ವಾರಸ್ಯವಾಗಿದೆ.

28. ಆಯ್ಕೆ : ಈ ಮೇಲಿನ ವಾಕ್ಯವನ್ನು 'ಕೆ.ಎಸ್.ನರಸಿಂಹಸ್ವಾಮಿಯ'ವರು ರಚಿಸಿರುವ 'ನವಪಲ್ಲವ' ಎಂಬ ಕವನ ಸಂಕಲನದಿಂದ ಆಯ್ದ 'ಭಾರತೀಯತೆ' ಎಂಬ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ : ನಮ್ಮ ದೇಶಕ್ಕಾಗಿ ತಮ್ಮ ಜೀವನವನ್ನೇ ಬಲಿಕೊಟ್ಟ ಅನೇಕ ಹುತಾತ್ಮರ ಸ್ಮರಣೆಯಲ್ಲಿ ಮತ್ತು ನಮ್ಮ ಕಷ್ಟದಲ್ಲಿ ಕರುಣೆಯಿಂದ ಸಹಾಯ ಮಾಡಿದವರಿಗಾಗಿ, ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ. ಹೀಗೆ ನಾವು ಎಲ್ಲೇ ಇದ್ದರೂ ನಾವೆಲ್ಲ ಒಂದೇ ಎಂದು ಹೇಳುವ ಸಂದರ್ಭದಲ್ಲಿ ಈ ಮೇಲಿನಂತೆ ಕವಿ ಹೇಳಿದ್ದಾರೆ.

ಸ್ವಾರಸ್ಯ : ನಾವು ಎಲ್ಲೇ ಇದ್ದರೂ ನಾವೆಲ್ಲರೂ ಭಾರತೀಯರು ಎಂಬ ಏಕತಾ ಭಾವನೆಯಿಂದ ಜೀವಿಸಬೇಕೆಂಬುದು ಈ ಮಾತಿನ ಸ್ವಾರಸ್ಯವಾಗಿದೆ.

**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

29. ನಾಡಿಗಾಗಿ ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ ಪಯಣದಲ್ಲಿ

30. ತನುವ /ಹುತಾತ್ಮರ /ಕಷ್ಟದಲ್ಲೂ/ಕರುಣೆಯಲ್ಲಿ/ದಾರಿ/ಬಿರುಗಾಳಿಯೇ/ಗುರಿಯ/ಬೆಳಕಿನೆಡೆಗೆ ಧೀರ

**ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನಾಧರಿಸಿ ಸಾರಾಂಶ ಬರೆಯುವುದು :**

ವಿಷಯಾಂಶಕ್ಕೆ 3 ಅಂಕಗಳು
ಅಡಕವಾಗಿರುವ ಮೌಲ್ಯ ಗುರುತಿಸುವುದು, ಪದಬಂಧ- ಭಾಷಾಶೈಲಿಗೆ 1 ಅಂಕ
**ಒಟ್ಟು 4 ಅಂಕಗಳು**

31. ಆಯ್ಕೆ: ಭಾರತೀಯತೆ ಕವನವನ್ನು ಕೆ. ಎಸ್. ನರಸಿಂಹಸ್ವಾಮಿ ಅವರ ನವಪಲ್ಲವ ಕವನ ಸಂಕಲನ ದಿಂದ ಆರಿಸಿಕೊಂಡಿದೆ. ಆಕಾಶದ ಎತ್ತರಕ್ಕೆ ಮೌನವಾಗಿ ಎದ್ದು ನಿಂತಿರುವ ಪರ್ವತಗಳ ಸಾಲಿನಲ್ಲಿ, ಕರಾವಳಿಗೆ ಮುತ್ತನ್ನು ನೀಡುವ ದೊಡ್ಡ ಅಲೆಗಳ ಗಾನದಲ್ಲಿ, ಬಯಲ ಸೀಮೆಯ ತುಂಬಾ ಹಸಿರನ ದೀಪವನ್ನು ಹಚ್ಚಿ ಹರಿಯುವ ನದಿಗಳಲ್ಲಿ ಆಕಾಶದ ನೀಲಿ ಬಣ್ಣದಲ್ಲಿ, ಹೊಗೆಯನ್ನು ಚೆಲ್ಲುವ ಕಾರ್ಖಾನೆಗಳ ಯಂತ್ರಗಳ ದೊಡ್ಡ ಧ್ವನಿಯಲ್ಲಿ ಹೀಗೆ ನೋಡುವ ಕಣ್ಣು ಬೇರೆಯಾದರೂ ನೋಟವೊಂದೆ ಆಗಿರುವುದರಿಂದ ನಾವೆಲ್ಲ ಭಾರತೀಯರು.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

32. ನಮ್ಮ ಭಾರತದ ಉತ್ತರದಲ್ಲಿ ಆಕಾಶದ ಎತ್ತರಕ್ಕೆ ನಿಂತ ಹಿಮಾಲಯ ಪರ್ವತಗಳ ಮೌನದಲ್ಲಿ, ಮೂರು ದಿಕ್ಕುಗಳಲ್ಲೂ ವಿಸ್ತಾರವಾಗಿ ಹರಡಿರುವ ಕರಾವಳಿಗೆ ಮುತ್ತನಿಡುವ ದೊಡ್ಡ ದೊಡ್ಡ ಅಲೆಗಳ ಗಾನದಲ್ಲಿ, ಬಯಲಿನ ತುಂಬ ಹಸಿರಿನ ದೀಪಗಳನ್ನೇ ಹಚ್ಚಿರುವ ನದಿಗಳಲ್ಲಿ, ನೀಲಿ ಆಕಾಶದಲ್ಲಿ ಹೊಗೆಯನ್ನು ಚೆಲ್ಲುವ ಯಂತ್ರಗಳ ಘೋಷದಲ್ಲಿ ಕಣ್ಣು ಬೇರೆಬೇರೆಯಾಗಿದ್ದರೂ ನೋಟವೊಂದೆ ಎಂಬ ಭಾವವಿದೆ. ನಮ್ಮ ನಾಡಿನ ಗಡಿಗಳಾದ ಭೂಮಿ, ಬಾನು, ಕಡಲಿನಲ್ಲಿ ನಮ್ಮ ಸೈನಿಕರು ನಮ್ಮನ್ನೆಲ್ಲ ರಕ್ಷಿಸುತ್ತಾ ಎತ್ತಿಹಿಡಿದಿರುವ ನಮ್ಮ ಹೆಮ್ಮೆಯ ರಾಷ್ಟ್ರಧ್ವಜದ ನೆರಳಿನಲ್ಲಿ. ಒಂದೇ ನೆಲದ ತೊಟ್ಟಿಲಲ್ಲಿ ಬೆಳೆದ ನಮ್ಮ ಕೊರಳಿನಲ್ಲಿ, ನಮ್ಮ ಯುಗದ ದನಿಗಳಾಗಿ ಮೂಡಿದ ಎಲ್ಲ ಹಾಡುಗಳಲ್ಲಿ ನಮ್ಮ ನಮ್ಮ ಭಾಷೆಗಳು ಬೇರೆಬೇರೆಯಾಗಿದ್ದರೂ ನಾವು ಭಾರತೀಯರೆಂಬ ಭಾವವಿದೆ. ದೇಶಕ್ಕಾಗಿ ತಮ್ಮ ಅಮೂಲ್ಯವಾದ ಪ್ರಾಣಗಳನ್ನೇ ಬಲಿದಾನ ಮಾಡಿದ ಹುತಾತ್ಮರ ಸ್ಮರಣೆಯಲ್ಲಿ. ನಮ್ಮ ಕಷ್ಟದಲ್ಲೂ ನೆರೆಹೊರೆಯವರಿಗೆ ಆಸರೆಯನ್ನು ನೀಡಿ ಸಹಾಯ ಮಾಡುವ ಕರುಣೆಯಲ್ಲಿ, ನಮ್ಮ ಗುರಿಯ ಬೆಳಕಿನೆಡೆಗೆ ನಡೆಯುವ ಧೀರ ಪಯಣದಲ್ಲಿ ಎಲ್ಲೇ ಇರಲಿ, ನಾವೆಲ್ಲಾ ಒಂದೆ. ನಾವು ಭಾರತೀಯರು ಎಂಬ ಭಾವವಿದೆ.
33. ವಿದ್ಯಾರ್ಥಿಯ ವಿವೇಚನೆ ಮತ್ತು ಆಲೋಚನೆಯ ಉತ್ತರ.

# 3. ಬೇವು ಬೆಲ್ಲದೊಳಿಡಲೇನು ಫಲ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಎ) ಅನ್ನು
2. (ಡಿ) ಅಧಿಕರಣ
3. (ಬಿ) ದೆಸೆಯಿಂದ
4. (ಸಿ) ತೃತೀಯಾ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

5. ಸಂಬಂಧ
6. ಪ್ರಥಮಾ
7. ಮೋಸ
8. ಸುಳ್ಳು
9. ಕೆಟ್ಟ ಜನರು
10. ಮಾನವ
11. ಪರಿಣಾಮ/ಫಲಿತಾಂಶ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

12. ಪುರಂದರದಾಸರ ಅಂಕಿತ ಪುರಂದರವಿಠಲ.
13. ಜಪದ ಫಲ ನಮಗೆ ಸಿಗಬೇಕಾದರೆ ಮನಸ್ಸಿನಲ್ಲಿನ ಕಪಟತನವನ್ನು ಬಿಡಬೇಕು.
14. ಮಂತ್ರ ಪಠಣೆಯ ಫಲ ಸಿಗಬೇಕೆಂದರೆ ಮನುಜ ಕುಟಿಲತೆಯನ್ನು ಬಿಡಬೇಕು.
15. ಘಾತಕತನವನು ಮಾಡದೆ ಇದ್ದಾಗ ನಿರಂತರವಾಗಿ ಗೀತೆಯನ್ನು ಓದಿದ ಫಲ ದೊರೆಯುತ್ತದೆ.
16. ಸಿ) ತಂದೆ-ತಾಯಿಯರ ಮಹತ್ವ ತಿಳಿಯದಿರುವುದು

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

17. ಮನುಷ್ಯ ತಾನು ಮಾಡಿದ ಪಾಪಗಳ ಪರಿಹಾರಕ್ಕಾಗಿ ಪುಣ್ಯಕ್ಷೇತ್ರಗಳಿಗೆ ಹೋಗಿ ದೇವರ ದರ್ಶನ ಮಾಡುವುದರಿಂದ ಅವನ ಪಾಪಗಳು ಪರಹಾರವಾಗಿ ಪುಣ್ಯ ಲಭಿಸುತ್ತದೆ. ಗೀತೆಯನ್ನು ಓದುವುದರಿಂದ ಜ್ಞಾನ ಮತ್ತು ಸದ್ಗುಣಗಳು ಹೆಚ್ಚಾಗುತ್ತವೆ.

18. ಕುತಂತ್ರದಿಂದ ಪರರಿಗೆ ತೊಂದರೆ ಕೊಡದೆ ಬದುಕಿದರೆ ದೇವರ ಜಪವನ್ನು ಮಾಡಿದರೆ ಫಲ ದೊರೆಯುತ್ತದೆ. ಕೋಪದಿಂದ ಬುದ್ಧಿಯನ್ನು ಬಿಟ್ಟರೆ ಉಪವಾಸ ಮಾಡಿದ ಫಲ ದೊರೆಯುತ್ತದೆ.

19. ಬೇವಿನ ಕಹಿ ಸ್ವಭಾವವು ಬೆಲ್ಲದಲ್ಲಿ ಇಟ್ಟರೂ ಬದಲಾಗುವುದಿಲ್ಲ. ಅದೇ ರೀತಿ ದುಷ್ಟನ ಸ್ವಭಾವವೂ ಸುಲಭವಾಗಿ ಬದಲಾಗುವುದಿಲ್ಲ ಎಂಬುದನ್ನು ಕವಿ ತಿಳಿಸಿದ್ದಾರೆ.

20. ಕುಜನರು ತಮ್ಮ ಕೆಟ್ಟ ಗುಣಗಳನ್ನು ಬಿಡದೆ ಮಂತ್ರ ಪಠಿಸಿದರೆ ಅದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಒಳ್ಳೆಯ ನಡೆ-ನುಡಿಗಳಿದ್ದಾಗ ಮಾತ್ರ ಪೂಜೆಗೆ ಅರ್ಥ ಬರುತ್ತದೆ.
21. ತಂದೆ-ತಾಯಿಯನ್ನು ಕಷ್ಟಪಡಿಸುವವನು ಯಾತ್ರೆ ಮಾಡಿದರೂ ಅದಕ್ಕೆ ಫಲವಿಲ್ಲ. ಮೊದಲು ಹಿರಿಯರನ್ನು ಗೌರವಿಸಿ ಸೇವೆ ಮಾಡಬೇಕು ಎಂದು ಕವಿ ಹೇಳಿದ್ದಾರೆ.
22. ಕೋಪ ಮತ್ತು ಹಿಂಸೆಯಂತಹ ಕೆಟ್ಟ ಗುಣಗಳನ್ನು ಬಿಡದೆ ಉಪವಾಸ ಮಾಡುವುದು ಅಥವಾ ಗೀತೆ ಓದುವುದು ವ್ಯರ್ಥ ಮನಸ್ಸಿನ ಶುದ್ಧಿಯೇ ಮುಖ್ಯ ಎಂದು ಕವಿ ತಿಳಿಸಿದ್ದಾರೆ.
23. ಹೀನ ಕೃತ್ಯಗಳನ್ನು ಮಾಡುತ್ತಲೇ ನದಿಯಲ್ಲಿ ಸ್ನಾನ ಮಾಡಿದರೆ ಪವಿತ್ರತೆ ದೊರೆಯುವುದಿಲ್ಲ. ಒಳ್ಳೆಯ ಗುಣ ಮತ್ತು ಸತ್ಪ್ರವೃತ್ತಿಯೇ ನಿಜವಾದ ಶುದ್ಧತೆ.
24. ಈ ಪದ್ಯವು ಕೇವಲ ಧಾರ್ಮಿಕ ಆಚರಣೆಗಳಿಗಿಂತ ಉತ್ತಮ ನಡತೆ ಮತ್ತು ಶುದ್ಧ ಮನಸ್ಸು ಮುಖ್ಯವೆಂದು ತಿಳಿಸುತ್ತದೆ. ಕೆಟ್ಟ ಗುಣಗಳನ್ನು ಬಿಟ್ಟು ದೇವರನ್ನು ಭಕ್ತಿಯಿಂದ ಸ್ಮರಿಸಿದಾಗ ಮಾತ್ರ ಜೀವನ ಸಾರ್ಥಕವಾಗುತ್ತದೆ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

25. ಪುರಂದರದಾಸ

ಹರಿದಾಸ ಸಾಹಿತ್ಯದ ಅಶ್ವಿನಿ ದೇವತೆಗಳಲ್ಲಿ ಒಬ್ಬರಾದ ಪುರಂದರದಾಸರು ಈಗಿನ ಮಹಾರಾಷ್ಟ್ರದ ಸಾ.ಶ. ಸುಮಾರು 1480 ರಲ್ಲಿ ಜನಿಸಿದರು. ತಂದೆ ವರದಪ್ಪ ನಾಯಕ, ತಾಯಿ ಸರಸ್ವತಿ, ಪೂರ್ವದ ಹೆಸರು ಶ್ರೀನಿವಾಸನಾಯಕ ಆಭರಣ ವ್ಯಾಪಾರಿಯಾಗಿದ್ದ ಿವರು ಜೀವನದಲ್ಲಿ ನಡೆದ ಘಟನೆಯಿಂದಾಗಿ ವೈರಾಗ್ಯ ತಾಳಿದರು. ಹರಿಭಕ್ತರಾಗಿ ನೂರಾರು ಕೀರ್ತನೆಗಳನ್ನು ರಚಿಸಿದರು. ಕರ್ನಾಟಕ ಸಂಗೀತದ ಪಿಳ್ಳಾರಿ ಗೀತೆಗಳನ್ನು ರಚಿಸಿ ಕರ್ನಾಟಕ ಸಂಗೀತ ಪಿತಾಮಹಾ ಎನಿಸಿಕೊಂಡರು. ಇವರ ಅಂಕಿತ ಪುರಂದರವಿಠಲ.

**ಗಾದೆಯನ್ನು ವಿಸ್ತರಿಸಿ ಬರೆಯುವುದು :**

| | |
|---|---|
| ಗಾದೆಯ ಮಹತ್ತ್ವದ ವಿವರಣೆ | 1 ಅಂಕ |
| ಉದಾಹರಣೆಯೊಂದಿಗೆ ಅರ್ಥ ವಿವರಣೆ | 1 ಅಂಕ |
| ಭಾಷಾಶೈಲಿ –ಪದಬಂಧಗಳಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

26. ಕೋಪದಲ್ಲಿ ಕೊಯ್ದ ಮೂಗುಮತ್ತೆ ಬಂದಿತೇ ?
27. ಆಚಾರವೇ ಸ್ವರ್ಗ ಅನಾಚಾರವೇ ನರಕ

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

**28.** ಆಯ್ಕೆ : ಈ ಮೇಲಿನ ವಾಕ್ಯವನ್ನು ಪುರಂದರದಾಸರು ಬರೆದ ಬೇವು ಬೆಲ್ಲದೊಳಿಡಲೇನು ಫಲ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ : ಮೋಸ, ವಂಚನೆ, ಮತ್ಸರ ಮೊದಲಾದ ಕೆಟ್ಟ ಗುಣಗಳನ್ನು ಮೈಗೂಡಿಸಿಕೊಂಡು ಕುಟಿಲವನ್ನು ಮಾಡುತ್ತಾ ದೇವರ ಮಂತ್ರವನ್ನು ಪಠಿಸಿದರೆ ಫಲ ದೊರೆಯುವುದಿಲ್ಲ. ಸುಳ್ಳು ಹೇಳುವ ಮನುಷ್ಯರು ಮನಸ್ಸಿನಲ್ಲಿ ವಿಠಲನನ್ನು ನೆನೆದರೆ ಫಲ ದೊರೆಯುವುದಿಲ್ಲ ಎಂದು ಪುರಂದರ ದಾಸರು ಹೇಳಿದ್ದಾರೆ.
ಸ್ವಾರಸ್ಯ : ಮಾನವನು ಆದಷ್ಟು ಉತ್ತಮ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು, ವಂಚನೆ, ಕಪಟತನವನ್ನು ತೊರೆದು ಬಾಳಬೇಕು ಎಂದು ಪುರಂದರದಾಸರು ಹೇಳಿದ್ದಾರೆ.

**29.** ಆಯ್ಕೆ : ಈ ಮೇಲಿನ ವಾಕ್ಯವನ್ನು ಪುರಂದರದಾಸರು ಬರೆದ ಬೇವು ಬೆಲ್ಲದೊಳಿಡಲೇನು ಫಲ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ : ತನ್ನ ತಂದೆ-ತಾಯಿಗಳುನ್ನು ಬಳಲಿಸಿ ಯಾತ್ರೆಯನ್ನು ಮಾಡಿ ಪ್ರಯೋಜನವಿಲ್ಲ. ಹಾಗೆಯೇ ಘಾತಕತನವನ್ನ ಹೊಂದಿ ಗೀತೆಯನ್ನು ಓದಿದರೆ ಫಲ ದೊರೆಯುವುದಿಲ್ಲ ಎಂದಿದ್ದಾರೆ ಪುರಂದರ ದಾಸರು.
ಸ್ವಾರಸ್ಯ : ಯಾತ್ರೆ ಮಾಡುವುದರಿಂದ ಗೀತೆ ಓದುವುದರಿಂದ ಒಳ್ಳೆಯದಾಗುತ್ತದೆ ಎಂಬ ನಂಬಿಕೆ ಸಹಜ. ಆದರೆ ಮನದಲ್ಲಿ ದುರ್ಗುಣಗಳನ್ನು ಹೊಂದಿ ಹೆತ್ತ ತಂದೆ ತಾಯಿಗಳನ್ನು ನಿರ್ಲಕ್ಷಿಸಿ ಪುಣ್ಯಕ್ಷೇತ್ರ ಮಾಡಿದರೆ ಸದ್ಗತಿ ದೊರೆಯಲಾರದು ಎಂದು ಪುರಂದರದಾಸರು ಹೇಳಿರುವುದು ಸ್ವಾರಸ್ಯವಾಗಿದೆ.

**30.** ಆಯ್ಕೆ : ಈ ಮೇಲಿನ ವಾಕ್ಯವನ್ನು ಪುರಂದರದಾಸರು ಬರೆದ ಬೇವು ಬೆಲ್ಲದೊಳಿಡಲೇನು ಫಲ ಎಂಬ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ.
ಸಂದರ್ಭ : ಕಪಟತನವನ್ನು ಹೊಂದಿ ಜಪ ಮಾಡಿದರೆ ಅಥವ ಉಪವಾಸ ಮಾಡಿದರೆ ಏನು ಪ್ರಯೋಜನ**?** ಹೀನ ಕೃತ್ಯಗಳನ್ನು ಮಾಡುತ್ತಾ ಪವಿತ್ರ ನದಿಯಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಪಾಪ ಪರಿಹಾರವಾಗುವುದೇ **?** ಎಂದು ಪುರಂದರ ದಾಸರು ಪ್ರಶ್ನಿಸಿದ್ದಾರೆ.
ಸ್ವಾರಸ್ಯ : ಮನುಷ್ಯ ಮೊದಲು ತನ್ನ ಅಂತರಂಗವನ್ನು ಪರಿಶುದ್ಧವಾಗಿಟ್ಟುಕೊಳ್ಳಬೆಕು. ಪಾಪದ ಕೃತ್ಯಗಳನ್ನು ಮಾಡಬಾರದು ಎಂಬುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ.

**ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನಾಧರಿಸಿ ಸಾರಾಂಶ ಬರೆಯುವುದು :**

| | |
|---|---|
| ವಿಷಯಾಂಶಕ್ಕೆ | 3 ಅಂಕಗಳು |
| ಅಡಕವಾಗಿರುವ ಮೌಲ್ಯ ಗುರುತಿಸುವುದು, ಪದಬಂಧ- ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **4 ಅಂಕಗಳು** |

31. ಮಾನವ ತನ್ನ ಕೆಟ್ಟಗುಣಗಳನ್ನು ಬಿಡದೆ, ತನ್ನ ಪಾಪದ ಪ್ರಾಯಶ್ಚಿತ್ತಕ್ಕಾಗಿ ಪವಿತ್ರವಾದ ಗಂಗಾನದಿಯಲ್ಲಿ ಸ್ನಾನ ಮಾಡಿದರೂ ಅದರಿಂದ ಏನೂ ಪ್ರಯೋಜನವಿಲ್ಲ. ನಾವು ನಮ್ಮ ಇಷ್ಟ ದೇವರನ್ನು ಸದಾ ಮನದಲ್ಲಿ ನೆನೆಯದೆ, ಪ್ರಾರ್ಥಿಸದೆ, ಮೌನವ ಮಾಡಿದರೆ ಪ್ರಯೋಜನವೇನು ಎಂದು ಪುರಂದರದಾಸರು ಪ್ರಶ್ನಿಸಿದ್ದಾರೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

32. ಬೇವನ್ನು ಬೆಲ್ಲದೊಳಿಟ್ಟರೂ ಅದರ ಮೂಲ ಗುಣ ಕಹಿಯೇ ಆಗಿದೆ. ಹಾವಿಗೆ ಹಾಲೆರೆದರೂ ಅದು ವಿಷವನ್ನೆ ಕಕ್ಕುತ್ತದೆ. ನಮ್ಮ ಹೀನ ಕೃತ್ಯಗಳು ಸಹಜವಾಗಿ ಕೆಟ್ಟ ಫಲವನ್ನೇ ನೀಡುತ್ತವೆ. ಮೋಸ, ವಂಚನೆ, ಮತ್ಸರ, ಮೊದಲಾದ ಕೆಟ್ಟಗುಣಗಳನ್ನು ಮೈಗೂಡಿಸಿಕೊಂಡು ಕುಟಿಲವನ್ನು ಮಾಡುತ್ತಾ ದೇವರ ಮಂತ್ರವನ್ನು ಪಠಿಸಿದರೆ ಫಲ ದೊರೆಯುವುದಿಲ್ಲ. ಸುಳ್ಳು ಹೇಳುವ ಮನುಷ್ಯರು ಮನಸ್ಸಿನಲ್ಲಿ ವಿಠಲನನ್ನು ನೆನೆದರೆ ಫಲದೊರೆಯುವುದಿಲ್ಲ. ಯಾತ್ರೆ ಮಾಡುವುದರಿಂದ, ಗೀತೆ ಓದುವುದರಿಂದ ಒಳ್ಳೆಯದಾಗುತ್ತದೆ ಎಂಬ ನಂಬಿಕ ಸಹಜ. ಆದರೆ ಮನಸ್ಸಿನಲ್ಲಿ ದುರ್ಗುಣಗಳನ್ನು ಹೊಂದಿ, ಹೆತ್ತ ತಂದೆ ತಾಯಿಗಳನ್ನೆ ನಿರ್ಲಕ್ಷಿಸಿ ಪುಣ್ಯಕ್ಷೇತ್ರ ದರ್ಶನ ಮಾಡಿದರೆ ಸದ್ಗತಿ ದೊರೆಯಲಾರದು. ಕಪಟತನವನು ಹೊಂದಿ ಜಪ ಮಾಡಿದರೆ ಅಥವ ಉಪವಾಸವಿದ್ದರೆ ಏನು ಪ್ರಯೋಜನ ? ಹೀನ ಕೃತ್ಯಗಳನ್ನು ಮಾಡುತ್ತಾ ಪವಿತ್ರ ನದಿಯಲ್ಲಿ ಸ್ನಾನ ಮಾಡಿದ ಮಾತ್ರಕ್ಕೆ ಪಾಪ ಪರಿಹಾರವಾಗುವುದೇ ? ಹುಟ್ಟುಗುಣ ಸುಟ್ಟರೂ ಹೋಗುವುದಿಲ್ಲ. ಯಾವುದೇ ಕೆಲಸ ನಿರ್ವಹಿಸಿದರೂ ಅದರಿಂದ ಫಲಾಫಲಗಳನ್ನು ಅಪೇಕ್ಷಿಸಬಾರದು ನಿರ್ಮಲ ಭಕ್ತಿ ಇಲ್ಲದಿದ್ದರೆ ಮಾಡಿದ ಕೆಲಸ ಕೂಡ ನಿಷ್ಫಲವಾಗುತ್ತದೆ ಎಂದು ಪುರಂದರದಾಸರು ಹೇಳಿದ್ದಾರೆ.

33. ಭಕ್ತಿಯೇ ಮುಕ್ತಿಯ ಮಾರ್ಗ ಜೀವನದಲ್ಲಿ ಏನೇ ಸಂಭವಿಸಲಿ ಕೊನೆಯಲ್ಲಿ ಮುಕ್ತಿಯೊಂದು ಸಿಕ್ಕರೆ ಸಾಕು ಎಂಬುದು ಎಲ್ಲರ ಆಸೆ. ಈ ಭೂಮಿಯಲ್ಲಿ ಜೀವಿಸದೆ ದೇವರ ಪಾದವನ್ನು ಸೇರುವುದನ್ನೇ ಮುಕ್ತಿ ಎನ್ನುತ್ತೇವೆ. ಅಂದರೆ ಪುನರ್ಜನ್ಮವಿಲ್ಲದೆ ಇರುವುದು ಮುಕ್ತಿಯನ್ನು ಮೋಕ್ಷ ಎಂದೂ ಕರೆಯಲಾಗುತ್ತದೆ. ಮುಕ್ತಿಯನ್ನು ಪಡೆಯಲು ಭಕ್ತಿ ಎಂಬುದು ಸರಳವಾದ ಮಾರ್ಗದಂತೆ ಕಂಡು ಬಂದರೂ ಕಠಿಣವಾದ ಹಾದಿಯೂ ಹೌದು.
ಮನಸ್ಸನ್ನು ಹಿಡಿತದಲ್ಲಿಟ್ಟುಕೊಳ್ಳಲು ದೇವರಲ್ಲಿಯೇ ಮನಸ್ಸನ್ನು ಕೇಂದ್ರೀಕರಿಸುವುದನ್ನು ಭಕ್ತಿ ಎನ್ನುತ್ತೇವೆ. ಆಡಂಬರದ ಅಥವಾ ಡಾಂಬಿಕ ಭಕ್ತಿಯಿಂದ ಏನೂ ಪ್ರಯೋಜನವಿಲ್ಲ. ಸತ್ಯದ ಹಾದಿಯಲ್ಲಿಯೇ ನಡೆಯಬೇಕು ಧರ್ಮದ ನಡೆಯಲ್ಲಿಯೇ ಸಾಗಬೇಕು. ಮಾನವನ ಬದುಕು ಎಂಬುದು ಮುಕ್ತಿಯನ್ನು ಹೊಂದಲು ಪಡೆದ ಅವಕಾಶ ಎಂದು ಪುರಂದರದಾಸರು ತಿಳಿಸಿದ್ದಾರೆ

34. ವಿದ್ಯಾರ್ಥಿಯ ವಿವೇಚನೆ ಮತ್ತು ಆಲೋಚನೆಯೆ ಉತ್ತರ.

## 4. ಸೋಮೇಶ್ವರ ಶತಕ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. **(ಬಿ)** ಚಂದ್ರ
2. **(ಎ)** ಆಗಮಸಂಧಿ
3. **(ಡಿ)** ಕಳೆಗುಂದು

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

4. ಬಲ್ಲಿದ
5. ಭಕುತಿ
6. ದೊಡ್ಡಮರ
7. ಬಂಧು
8. ತಂದೆ
9. ಸತಿ
10. ಗುರು
11. ಸುತ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

12. ನಮಗೆ ಯಾರು ಹಿತವನ್ನು ಬಯಸುವರೋ ಆತನೇ ನಿಜವಾದ ಬಂಧು.
13. ತಂದೆ -ತಾಯಿಯನ್ನು ಸಲಹಲು ಬಲ್ಲವನನು ಧಾರ್ಮಿಕನೆಂದು ಕರೆಯಲಾಗಿದೆ.
14. ಪ್ರಜೆಯನ್ನು ಪಾಲಿಸುವುದು ರಾಜನಾದವನ ಕರ್ತವ್ಯವಾಗಿದೆ.
15. ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಹೆಮ್ಮರವಾಗುತ್ತದೆ.
16. ವರ್ಣ ಮಾತ್ರಂ ಕಲಿಸಿದಾತನು ಗುರು ಎಂದು ಸೋಮನಾಥನು ಹೇಳಿದ್ದಾನೆ.
17. ಲಂಚವನ್ನಾಗಲಿ ಸ್ವೀಕರಿಸದೆ ಇರುವವನೇ ನಿಜವಾದ ಮಂತ್ರಿ.
18. (ಎ) ಶತಕ ಸಾಹಿತ್ಯ

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

19. ವೇದಗಳನ್ನು ಬಿಡದೇ ಪಠಿಸುವವನೇ ಸುವ್ರತಿ ಒಳ್ಳೆಯ ವಿದ್ಯೆಯನ್ನು ಸಂಪಾದಿಸಿ ತಂದೆ - ತಾಯಿಗಳಿಗೆ ಸದ್ಗತಿಯನ್ನು ತೋರುವ ಒಳ್ಳೆಯ ಮಗನೇ ಸುತ ಎಂದು ಕವಿ ಹೇಳಿದ್ದಾರೆ.

20. ನಿರ್ಭೀತಿಯಿಂದ ನಡೆದುಕೊಳ್ಳುವವನೇ ಭಟ ಉತ್ತಮ ಆಚಾರ ವಿಚಾರಗಳನ್ನು ಹೊಂದಿರುವವನೇ ದ್ವಿಜ (ಬ್ರಾಹ್ಮ) ಎಂದು ಸೋಮೇಶ್ವರರು ಹೇಳಿದ್ದಾರೆ

21. ಆತ್ಮಬಂಧು ಹಿತವನ್ನು ಹೇಳುವವನಾಗಿರಬೇಕು. ತಂದೆ ಸದ್ಧರ್ಮವನ್ನು ಬೋಧಿಸಬೇಕು ಮತ್ತು ಗುರು ಉತ್ತಮ ವಿದ್ಯೆಯನ್ನು ಕಲಿಸಬೇಕು ಎಂದು ಕವಿ ಹೇಳಿದ್ದಾರೆ.
22. ಒಳ್ಳೆಯ ರಾಜನು ಪ್ರಜೆಗಳನ್ನು ನ್ಯಾಯಯುತವಾಗಿ ಪಾಲಿಸಬೇಕು. ಅವನು ಹಣದ ಆಸೆಗೆ ಒಳಗಾಗದೆ ರ್ಮದಿಂದ ಆಡಳಿತ ನಡೆಸಬೇಕು.
23. ಒಳ್ಳೆಯ ಮಂತ್ರಿಯು ಸತ್ಯವಂತ, ಧೈರ್ಯಶಾಲಿ ಮತ್ತು ಜ್ಞಾನಿಯಾಗಿರಬೇಕು. ಲಂಚ ಸ್ವೀಕರಿಸದೆ ಧರ್ಮದ ಮಾರ್ಗದಲ್ಲಿ ನಡೆಯಬೇಕು.
24. ಭಕ್ತನು ದೇವರ ಮೇಲೆ ನಿಜವಾದ ಭಕ್ತಿ ಹೊಂದಿರಬೇಕು. ಭಟನು ನೀರ್ಭಯನಾಗಿ ತನ್ನ ಕರ್ತವ್ಯವನ್ನು ನಿಷ್ಠೆಯಿಂದ ಮಾಡಬೇಕು.
25. ದೇವರ ಕೃಪೆ ಇದ್ದರೆ ಬಡವನೂ ಕೂಡ ಜೀವನದಲ್ಲಿ ದೊಡ್ಡವನಾಗಬಹುದು ಎಂದು ಕವಿ ತಿಳಿಸಿದ್ದಾರೆ. ಆದ್ದರಿಂದ ದೇವರ ಮೇಲಿನ ಭಕ್ತಿ ಮತ್ತು ಒಳ್ಳೆಯ ಗುಣಗಳನ್ನು ಬೆಳೆಸಿಕೊಳ್ಳಬೇಕು.
26. ಈ ಪದ್ಯವು ವ್ಯಕ್ತಿಯ ಜೀವನದಲ್ಲಿ ಸತ್ಯ, ಧರ್ಮ, ಪ್ರಾಮಾಣಿಕತೆ ಮತ್ತು ಭಕ್ತಿಯ ಮಹತ್ವವನ್ನು ತಿಳಿಸುತ್ತದೆ. ಪ್ರತಿಯೊಬ್ಬರೂ ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಬೇಕು ಎಂಬ ಸಂದೇಶವನ್ನು ನೀಡುತ್ತದೆ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

27. ಪುಲಿಗೆರೆ ಸೋಮನಾಥ

ಪುಲಿಗೆರೆ ಸೋಮನಾಥ ಕವಿಯು ಕ್ರಿಶ 1299 ರಲ್ಲಿ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆಯಲ್ಲಿ ಜನಿಸಿದರು. ಪುಲಿಗೆರೆ ಸೋಮನಾಥನೆಂದು ಪ್ರಸಿದ್ಧಿ. ಕನ್ನಡ ರತ್ನ ಕರಂಡಕ ಮತ್ತು ಸೋಮೇಶ್ವರ ಶತಕ ಎರಡು ಕೃತಿಗಳಣ್ನು ರಚಿಸಿದ್ದಾರೆ. ಹರಹರ ಶ್ರೀ ಚನ್ನಸೋಮೆಶ್ವರ ಇವರ ಅಂಕಿತನಾಮವಾಗಿದೆ.

**ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯ ಮಾಡುವುದು :**

| | |
|---|---|
| ಅಲಂಕಾರವನ್ನು ಹೆಸರಿಸುವುದು | 1 ಅಂಕ |
| ಲಕ್ಷಣ ಬರೆಯುವುದು | 1 ಅಂಕ |
| ಅಂಶಗಳನ್ನು ಗುರುತಿಸಿ ಸಮನ್ವಯಿಸುವುದು | 1 ಅಂಕ |
| **ಒಟ್ಟು** | **3 ಅಂಕಗಳು** |

28. "ಸೀತೆಯ ಮುಖ ಕಮಲದಂತೆ ಅರಳಿತು."

ಅಲಂಕಾರ = ಉಪಮಾಲಂಕಾರ

'ಲಕ್ಷಣ = ಎರಡು ವಸ್ತುಗಳ ನಡುವೆ ಪರಸ್ಪರ ಹೋಲಿಕೆಯನ್ನು ತಿಳಿಸುವ ಅಲಂಕಾರವೇ ಉಪಮಾಲಂಕಾರ.

ಉಪಮೇಯ = ಸೀತೆಯ ಮುಖ

ಉಪಮನ= ಕಮಲ

ವಾಚಕಪದ= ಅಂತೆ

ಸಮಾನಧರ್ಮ = ಅರಳಿತು

'ಸಮನ್ವಯ = ಇಲ್ಲಿ ಉಪಮೇಯವಾದ ಸೀತೆಯ ಮುಖವನ್ನು ಉಪಮನವಾದ ಕಮಲಕ್ಕೆ ಹೋಲಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರವಾಗಿದೆ.

29. "ಗೀಜಗನ ಗೂಡುಗಳು ತೂಗುವ ತೊಟ್ಟಿಲಿನಂತೆ ತೂಗಾಡುತ್ತಿದ್ದವು."

ಅಲಂಕಾರ- ಉಪಮಾಲಂಕಾರ

ಲಕ್ಷಣ = ಎರಡು ವಸ್ತುಗಳ ನಡುವೆ ಪರಸ್ಪರ ಹೋಲಿಕೆಯನ್ನು ತಿಳಿಸುವ ಅಲಂಕಾರವೇ ಉಪಮಾಲಂಕಾರ

ಉಪಮೇಯ = ಗೀಜಗನ ಗೂಡುಗಳು

ಉಪಮಾನ : ತೂಗುವ ತೊಟ್ಟಿಲು

ವಾಚಕಪದ= ಅಂತೆ

ಸಮಾನಧರ್ಮ = ತೊಗಾಡುತ್ತಿದ್ದವು

ಸಮನ್ವಯ = ಇಲ್ಲಿ ಉಪಮೇಯವಾದ ಗೀಜಗನ ಗೂಡುಗಳನ್ನು ಉಪಮಾನವಾದ ತೂಗುವ ತೂಟ್ಟಿಲಿಗೆ ಹೋಲಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರವಾಗಿದೆ

30. "ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು"

ಅಲಂಕಾರ- ಉಪಮಾಲಂಕಾರ

ಲಕ್ಷಣ = ಎರಡು ವಸ್ತುಗಳ ನಡುವೆ ಪರಸ್ಪರ ಹೋಲಿಕೆಯನ್ನು ತಿಳಿಸುವ ಅಲಂಕಾರವೇ ಉಪಮಾಲಂಕಾರ

ಉಪಮೇಯ = ಮನೋರಮೆಯ ಹಣೆ

ಉಪಮಾನ : ಬಾಲಚಂದ್ರ

ವಾಚಕಪದ= ಅಂತೆ

ಸಮಾನಧರ್ಮ = ಆಕರ್ಷಣೀಯವಾಗಿತ್ತು

ಸಮನ್ವಯ = ಇಲ್ಲಿ ಉಪಮೇಯವಾದ ಮನೋರಮೆಯ ಹಣೆಯನ್ನು ಉಪಮಾನವಾದ ಬಾಲಚಂದ್ರನಿಗೆ ಹೋಲಿಸಲಾಗಿದೆ. ಆದ್ದರಿಂದ ಇದು ಉಪಮಾಲಂಕಾರವಾಗಿದೆ

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

31. ಆಯ್ಕೆ : ಈ ವಾಕ್ಯವನ್ನು ಪುಲಿಗೆರೆ ಸೋಮನಾಥರು ಬರೆದಿರುವ ಸೋಮೇಶ್ವರ ರ ಶತಕ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.
    ಸಂದರ್ಭ: ನಮ್ಮ ಹಿತವನ್ನು ಬಯಸುವವನೇ ನಿಜವಾದ ಬಂಧು ನಮ್ಮನ್ನು ಸಾಕುವ ತಂದೆ ಮತ್ತು ಉತ್ತಮ ಧರ್ಮ ಮತ್ತು ದಾರಿಯಲ್ಲಿ ಸಾಗುವ ಹೆಂಡತಿಯೆಂದು ಹೇಳುವಾಗ ಈ ಮೇಲಿನ ವಾಕ್ಯವನ್ನು ಹೇಳಿದ್ದಾರೆ.
    ಸ್ವಾರಸ್ಯ: ಗಂಡನ ಕೆಲಸದಲ್ಲಿ ಹೆಂಡತಿಯು ಸದಾ ಪ್ರೋತ್ಸಾಹ ನೀಡಿದಾಗ ಗಂಡನು ತನ್ನ ಕೆಲಸದಲ್ಲಿ ಯಶಸ್ಸನ್ನು ಸಾಧಿಸಬಹುದು ಎಂಬುದು ಸ್ವಾರಸ್ಯವಾಗಿದೆ.

32. ಆಯ್ಕೆ : ಈ ವಾಕ್ಯವನ್ನು ಪುಲಿಗೆರೆ ಸೋಮನಾಥರು ಬರೆದಿರುವ ಸೋಮೇಶ್ವರ ರ ಶತಕ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.
    ಸಂದರ್ಭ: ಶ್ರೇಷ್ಠ ಮಂತ್ರಿಯಾದವನ್ನು ಅತಿ ಗಂಭೀರವಾಗಿ ಉದಾರವಾಗಿ, ಧೀರನಾಗಿ, ಮಹಾಸಂಪನ್ನನ್ನಾಗಿ ಸದಾ ಸತ್ಯವನ್ನು ಹೇಳವವನು, ಬೇರೆ ಬೇರೆ ಲಿಪಿ ಭಾಷೆಗಳನ್ನು ತಿಳಿದವನು ಲಂಚಕ್ಕೆ ಆಸೆ ಪಡದವನ್ನು ಚತುರೋಪಾಯಗಳನ್ನು ಬಲ್ಲವನ್ನಾಗಿರಬೇಕೆಂದು ಕವಿಯು ಹೇಳಿದ್ದಾರೆ.
    ಸ್ವಾರಸ್ಯ: ಮಂತ್ರಿಯಾದವನ್ನ ವ್ಯಕ್ತಿತ್ವ ಹೇಗಿರಬೇಕೆಂದು ತಿಳಿಸುವುದರ ಜೊತೆಗೆ ಕೆಲಸ ಕಾರ್ಯಗಳನ್ನು ನಿಷ್ಠೆಯಿಂದ ಮಾಡಬೇಕೆಂದು ಈ ವಾಕ್ಯದ ಸ್ವಾರಸ್ಯವಾಗಿದೆ.

33. ಆಯ್ಕೆ : ಈ ವಾಕ್ಯವನ್ನು ಪುಲಿಗೆರೆ ಸೋಮನಾಥರು ಬರೆದಿರುವ ಸೋಮೇಶ್ವರ ರ ಶತಕ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.
    ಸಂದರ್ಭ: ದೇವರ ಬಲವಿದ್ದರೆ ಬಡವ ಬಲ್ಲಿದನಾಗಬಲ್ಲ ಎಂಬುವ ಸಂದರ್ಭದಲ್ಲಿ ಕವಿ ಈ ನಿದರ್ಶನದೊಂದಿಗೆ ತನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾನೆ.
    ಸ್ವಾರಸ್ಯ: ದೇವರ ಅನುಗ್ರಹದಿಂದ ಕಾಲಾಂತರದಲ್ಲಿ ಸ್ವಾಭಾವಿಕವಾಗಿ ಆಗುವ ಬದಲಾವಣೆಯ ಬಗ್ಗೆ ಮೇಲಿನ ವಾಕ್ಯವು ಸೂಚಿಸುತ್ತದೆ.

**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

34. ಪ್ರಜೆಯ ಪಾಲಿಸಬಲ್ಲೊಡಾತನರಸಂ ಕೈಯಸೆಯಂ ಮಾಡದಂ।
    ನಿಜ ಮಂತ್ರೀಶ್ವರ ತಂದೆ ತಾಯಿ ಸಲಹಲ್ ಬಲ್ಲಾತನೇ ಧಾರ್ಮಿಕಂ
    ಭಜಕಂ ದೈವದ ಭಕ್ತಿಯುಳ್ಳೊಡೆ ಭಟಂ ನಿರ್ಭೀತ ತಾನಾದವಂ
    ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀ ಚನ್ನಸೋಮೇಶ್ವರಂ

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

35. ಮಂತ್ರಿಯು ಬಹಳ ಗಂಭೀರನಾದವನ್ನು ದಾನಶೀಲ, ಧೈರ್ಯಶಾಲಿ,ಗುಣಶಾಲಿ, ಸತ್ಯಸಂಧನಾದವನ್ನು ಅತಿ ಗಂಭೀರನುದಾರನು ಧೀರನೂ ಮಹಾ ಸಂಪನ್ನನೂ ಸತ್ಯಾತ್ಮಾನು ಅನೇಕ ಲಿಪಿ, ಭಾಷೆಗಳನ್ನು ಬಲ್ಲವನ್ನು ಲಂಚಕ್ಕೆ ಕೈಚಾಚದವನೂ ವಿಚಾರವಂತನೂ ಸಾಮ, ದಾನ, ಭೇಧ,ದಂಡ ಎಂಬ ಚತುರೋಪಯಗಳನ್ನು ಬಲ್ಲವನೂ ಒಡೆಯನ ಕಾರ್ಯದಲ್ಲಿ ನಿಷ್ಠೆ ಇರುವವನು ಆಗಿರಬೇಕು ಇವು ಶ್ರೇಷ್ಠ ಮಂತ್ರಿಯ ಗುಣಗಳು.

36. ಚಂದ್ರನು ಒಂದೇ ಸಮನಾಗಿರುವುದಿಲ್ಲ ಕೃಷ್ಣಪಕ್ಷದಲ್ಲಿ ಕಳೆಗುಂದಿದರು ಮತ್ತೆ ಶುಕ್ಲಪಕ್ಷದಲ್ಲಿ ವೃದ್ದಿ ಹೊಂದುವುದಿಲ್ಲವೇ ಬಹಳ ಸುಣ್ಣವಾಗಿರುವ ಆಲದ ಬೀಜವು ಸಿಡಿದು, ನೆಲದ ಮೇಲೆ ಬಿದ್ದು ಮೊಳೆತು ದೊಡ್ಡ ಮರವಾಗುವುದಿಲ್ಲವೇ ಎಳೆಗರುವು ಬೆಳೆದು ದೊಡ್ಡ ಎತ್ತಾಗುವುದಿಲ್ಲವೇ .ಸಣ್ಣ ಹೀಚು ಬಲಿತು ಹಣ್ಣಾಗುವುದಿಲ್ಲವೇ ಹಾಗೆಯೇ ದೇವರ ಕೃಪೆ ಒಲುಮೆಯಿದ್ದರೆ ಮುಂದೊಂದು ದಿನ ಬಡವನು ಬಲ್ಲದನಾಗದಿರುವನೇ ಎಂದು ಪುಲಿಗೆರೆ ಸೋಮನಾಥ ಕವಿಯು ಹೇಳುತ್ತಾನೆ.

---

# ಪಠ್ಯ ಪೂರಕ ಅಧ್ಯಯನ

## 1. ಸಾರ್ಥಕ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ**

1. ಭತ್ತ ಬೆಳೆಯುವ ಗದ್ದೆಯಲ್ಲಿ ಬೀಳುತ್ತದೆ.
2. ಬೂದಿಯನ್ನು ಹೊಳೆಯಲ್ಲಿ ಹರಿಬಿಟ್ಟಾಗ ಮೀನಿನ ಬಾಯಿಗೆ ಸಿಗುತ್ತದೆ.
3. ದೇಹವು ಸ್ವಾರ್ಥವನ್ನು ನೆನೆದು ವ್ಯರ್ಥವಾಗಿದೆ.
4. ಕವಿಯು ತನ್ನ ದೇಹದ ಬೂದಿಯನ್ನು ಭತ್ತ ಬೆಳೆಯುವಲ್ಲಿ ತೂರಿಬಿಡಲು ಹೇಳುತ್ತಾನೆ.
5. ಬೂದಿ-ಗೊಬ್ಬರದಿಂದ ತೆನೆಯೊಂದು ನೆಗೆದು ಬರಬೇಕು ಎಂದು ಕವಿ ಬಯಸುತ್ತಾನೆ.
6. ಮೀನುಗಳು ಅದನ್ನು ತಿಂದು ಪುಷ್ಟಿಯಾಗಲೆಂದು ಹೊಳೆಯಲ್ಲಿ ಹರಿಯಲು ಬಿಡಲು ಹೇಳುತ್ತಾನೆ.
7. ಕೊಳದಲ್ಲಿ ಬೂದಿಯನ್ನು ಬೀಳಿಸಿದರೆ ತಾವರೆ ಅರಳಬೇಕು ಎಂದು ಕವಿ ಹೇಳುತ್ತಾನೆ.
8. ಬೂದಿ ಕೆಸರಿನಿಂದ ಹೊಸ ಪಂಕಜವು ಮೂಡಬೇಕು ಎಂದು ಕವಿ ಆಶಿಸುತ್ತಾನೆ.
9. ಸತ್ತ ಮೇಲಾದರೂ ದೇಹ ಸೇವೆಗೆ ನಿಲ್ಲಬೇಕು ಎಂದು ಕವಿ ಬಯಸುತ್ತಾನೆ.
10. ತನ್ನ ಸ್ವಾರ್ಥವನ್ನೇ ನೆನೆದ ಕಾರಣ ಮಾನವ ಜೀವನ ವ್ಯರ್ಥವಾಗಿದೆ ಎಂದು ಕವಿ ಹೇಳುತ್ತಾನೆ.
11. ಮುಂದಿನ ಜನ್ಮದಲ್ಲಿ ನಿಜಸೇವೆ ಮಾಡುವ ಗುಣ ಬರಲಿ ಎಂದು ಕವಿ ಪ್ರಾರ್ಥಿಸುತ್ತಾನೆ.
12. ಜೀವಿತದಲ್ಲಿಯೂ ಸಾವಿನ ನಂತರವೂ ಇತರರಿಗೆ ಉಪಕಾರಿಯಾಗುವಂತೆ ಬದುಕಬೇಕು ಎಂಬುದೇ ಕವನದ ಮುಖ್ಯ ಸಂದೇಶ.
13. ಈ ಕವನದ ಕವಿ ದಿನಕರ ದೇಸಾಯಿ.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

14. ಬೂದಿಯನ್ನು ಕೊಳದಲ್ಲಿ ಬಿಡುವುದರಿಂದ ಬೂದಿಯು ಕೆಸರಿನೊಂದಿಗೆ ಕೂಡಿ ಗೊಬ್ಬರವಾಗುತ್ತದೆ. ಕಮಲದ ಗಿಡವು ಚೆನ್ನಾಗಿ ಬೆಳೆದು ಹೆಚ್ಚು ಹೂಗಳನ್ನು ಬಿಟ್ಟಾಗ ಜೀವನದ ಹುಟ್ಟು ಸಾವಿನ ಬದುಕು ಧನ್ಯವಾಗುವುದೆಂದು ಕವಿ ಹೇಳಿದ್ದಾರೆ.

15. ಹುಟ್ಟು ಸಾವಿನ ನಡುವಿನ ಜೀವನದಲ್ಲಿ ನಾವು ಸ್ವಾರ್ಥ ಪರರಾಗಿರದೆ ಸಹಾಯ ಮಾಡುವ ಗುಣಗಳನ್ನು ಬೆಳೆಸಿಕೊಳ್ಳಬೇಕು. ಎಲ್ಲರ ಹಿತವನ್ನು ಬಯಸುವ ಗುಣಗಳನ್ನು ಬೆಳೆಸಿಕೊಳ್ಳಬೇಕು. ಪರರ ಹಿತಕ್ಕಾಗಿ ಶರೀರವನ್ನು ಮುಡುಪಾಗಿಸುವ ಈ ಅಂಶಗಳನ್ನು ನಾನು ಮೆಚ್ಚುತ್ತೇನೆ.
16. ಕವಿ ತನ್ನ ದೇಹದ ಬೂದಿಯನ್ನು ಭತ್ತ ಬೆಳೆಯುವ ಹೊಲದಲ್ಲಿ, ಹೊಳೆಯಲ್ಲಿ ಮತ್ತು ಕೊಳದಲ್ಲಿ ಬಿಡಿ ಎಂದು ಹೇಳಿದ್ದಾರೆ. ಅದರಿಂದ ಇತರ ಜೀವಿಗಳಿಗೆ ಉಪಯೋಗವಾಗಲಿ ಎಂಬುದು ಅವರ ಆಶಯವಾಗಿದೆ.
17. ಬೂದಿ ಗೊಬ್ಬರವಾಗಿ ಭತ್ತದ ಬೆಳೆಗೆ ಸಹಾಯವಾಗಲಿ ಎಂದು ಕವಿ ಬಯಸುತ್ತಾರೆ. ತಮ್ಮ ಸಾವು ಕೂಡ ಸಮಾಜಕ್ಕೆ ಉಪಯುಕ್ತವಾಗಬೇಕು ಎಂಬ ಸಂದೇಶವನ್ನು ನೀಡಿದ್ದಾರೆ.
18. ಬೂದಿಯನ್ನು ಮೀನುಗಳು ಆಹಾರವಾಗಿ ಸೇವಿಸಿ ಪುಷ್ಟಿಯಾಗಲಿ ಎಂದು ಕವಿ ಆಶಿಸುತ್ತಾರೆ. ತಮ್ಮ ದೇಹವು ಮರಣಾನಂತರವೂ ಜೀವಿಗಳಿಗೆ ನೆರವಾಗಬೇಕು ಎಂಬ ಭಾವವನ್ನು ವ್ಯಕ್ತಪಡಿಸಿದ್ದಾರೆ.
19. ಬೂದಿ ಕೆಸರಿನೊಂದಿಗೆ ಸೇರಿ ತಾವರೆ ಹೂವು ಅರಳಲು ಕಾರಣವಾಗಲಿ ಎಂದು ಕವಿ ಬಯಸುತ್ತಾರೆ. ಪ್ರಕೃತಿಗೆ ತಮ್ಮ ಕೊಡುಗೆ ಮುಂದುವರಿಯಲಿ ಎಂಬುದು ಅವರ ಉದ್ದೇಶವಾಗಿದೆ.
20. ಮನುಷ್ಯನು ಬದುಕಿರುವಾಗ ಮಾತ್ರವಲ್ಲ, ಸತ್ತ ನಂತರವೂ ಇತರರಿಗೆ ಉಪಕಾರಿಯಾಗಬೇಕು ಎಂಬುದನ್ನು ಈ ಸಾಲು ತಿಳಿಸುತ್ತದೆ. ನಿಸ್ವಾರ್ಥ ಸೇವೆಯೇ ಜೀವನದ ನಿಜವಾದ ಮೌಲ್ಯ ಎಂದು ಕವಿ ಹೇಳಿದ್ದಾರೆ.
21. ಈ ಪದ್ಯವು ನಿಸ್ವಾರ್ಥ ಸೇವೆ ಮತ್ತು ಪರೋಪಕಾರದ ಮಹತ್ವವನ್ನು ಸಾರುತ್ತದೆ. ಜೀವನದಲ್ಲೂ ಮರಣಾನಂತರವೂ ಇತರರಿಗೆ ಉಪಯೋಗವಾಗುವಂತೆ ಬದುಕಬೇಕು ಎಂಬ ಸಂದೇಶವನ್ನು ನೀಡುತ್ತದೆ.
22. ವಿದ್ಯಾರ್ಥಿಯ ವಿವೇಚನೆ ಮತ್ತು ಆಲೋಚನೆಯ ಉತ್ತರ.

---

## 2. ಆಹುತಿ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

1. ರೈಲಿನಲ್ಲಿ ಸಿಕ್ಕಿದ ಮುದುಕ ರತ್ನದ ವ್ಯಾಪಾರಿಯಾಗಿದ್ದನು.
2. ಯುವಕನು ಮುದುಕನ ಮನೆಗೆ ಕೆಲಸ ಕೇಳಲು ಬಂದನು.
3. ಮುದುಕನ ಮಗಳ ಹೆಸರು ಸೀತೆ ಮತ್ತು ಸೊಸೆಯ ಹೆಸರು ಶಾಂತಿ.
4. ವರದಕ್ಷಿಣೆಯ ಪಿಶಾಚಿ ಅದೆಷ್ಟೋ ಸುಕುಮಾರಿಯರನ್ನು ಬಲಿ ತೆಗೆದುಕೊಂಡಿದೆ.
5. ಯುವಕನು ಬಡವರ ಮನೆಯ ಹುಡುಗಿಯನ್ನು ಮದುವೆಯಾದರೆ ಅವರಿಗೆ ವರದಕ್ಷಿಣೆ ಕೊಡಲು ಸಾಧ್ಯವಿಲ್ಲವೆಂದು ಅವಳನ್ನು ಮದುವೆಯಾಗಲಿಲ್ಲ.
6. ಪತ್ರಿಕೆಯನ್ನು ತೋರಿಸಿ ವಿಜಯಲು ನೋಡುತ್ತಿದ್ದುದು ನೀನು ಕೊಂದ ಹುಡುಗಿಯನ್ನು ಎಂದಳು.
7. ಯುವಕನ ತಂಗಿಯ ಹೆಸರು ವಿಜಯ.

8. ಯುವಕನ ತಂದೆಗೆ ವರದಕ್ಷಿಣೆ ತೆಗೆದುಕೊಳ್ಳಲು ಇಷ್ಟವಿರಲಿಲ್ಲ

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

9. ಯುವಕನ ತಂದೆಯು ನೋಡಿದ್ದ ಹುಡುಗಿಯ ಪೋಷಕರು ಬಹಳ ಬಡವರಾಗಿದ್ದರು. ಎಂಎ ಪಾಸಾಗಿದ್ದ ತಾನು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪದವಿಗಳಿಸಲು ಬೇಕಾದ ಹಣವನ್ನು ಬರಿಸಲು ಅವರಿಗೆ ಸಾಧ್ಯವಿಲ್ಲ. ಐಶ್ವರ್ಯವಂತರ ಅಳಿಯನಾದರೆ ಸುಲಭವಾಗಿ ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರ್ ಪದವಿ ಪಡೆಯಬಹುದು ಎಂಬುದು ಅವನ ಮುಖ್ಯ ಆಸೆಯಾಗಿತ್ತು.

10. ಯುವಕನು ಹೇಳಿಕೊಟ್ಟ ಪಾಠವನ್ನು ಶಾಂತಿಯು ಚುರುಕಾಗಿಕಲಿಯುತ್ತಿದ್ದಳು,ಅವಳ ಸೌಂದರ್ಯ,ಸೌಂದರ್ಯವನ್ನು ಆವರಿಸಿದ ದುಃಖ ,ವಿದ್ಯೆಯಲ್ಲಿ ಅವಳಿಗಿದ್ದ ಅಭಿರುಚಿ ಮಿತವಾದ ಮಾತು ಇವೆಲ್ಲ ಗುಣಗಳು ಯುವಕನನ್ನು ಆಕರ್ಷಿಸಿದ್ದವು.

11. ಹುಡುಗಿಯ ಮನೆ ಅವರ ಮನೆಯಿಂದ ಹನ್ನೆರಡು ಮೈಲಿ ದೂರದ ಹಳ್ಳಿಯಲ್ಲಿತ್ತು. ಅವಳ ತಂದೆತಾಯಿಯವರು ತುಂಬಾ ಬಡವರಾಗಿದ್ದರು.
12. ಅವನಿಗೆ ಐಶ್ವರ್ಯವಂತರ ಅಳಿಯನಾಗಬೇಕೆಂಬ ಆಸೆ ಇತ್ತು. ಲಂಡನ್‌ಗೆ ಹೋಗಿ ಬ್ಯಾರಿಸ್ಟರ್ ಆಗಲು ಹಣದ ಸಹಾಯ ಬೇಕಾಗಿದ್ದರಿಂದ ಬಡ ಹುಡುಗಿಯನ್ನು ಮದುವೆಯಾಗಲು ಇಷ್ಟಪಡಲಿಲ್ಲ.
13. ವಿಜಯಳು ಹುಡುಗಿ ಎಲ್ಲ ರೀತಿಯಲ್ಲೂ ಅಣ್ಣನಿಗೆ ಯೋಗ್ಯಳಾಗಿದ್ದಾಳೆ ಎಂದು ಹೇಳಿದಳು. ಅವಳು ಓದುಬರಹ ತಿಳಿದವಳು ಹಾಗೂ ಬಹಳ ಸುಂದರಳಾಗಿದ್ದಾಳೆ ಎಂದಳು.
14. ಹುಡುಗಿಯ ಮನೆಯವರು ಬಡವರಾಗಿದ್ದು ಅವರಿಗೆ ಹಲವು ಹೆಣ್ಣುಮಕ್ಕಳಿದ್ದಾರೆ ಎಂದು ಹೇಳಿದರು. ಲಂಡನ್‌ಗೆ ಹೋಗಲು ದೊಡ್ಡವರ ಅಳಿಯನಾಗುವುದು ಬೇಡ, ಇಲ್ಲಿಯೇ ಲಾ ಓದಲು ಬೇಕಾದ ಖರ್ಚನ್ನು ತಾವೇ ಭರಿಸುವುದಾಗಿ ತಿಳಿಸಿದರು.
15. ಬಡ ಹುಡುಗಿಯನ್ನು ಮದುವೆಯಾಗಲು ಅವನಿಗೆ ಇಷ್ಟವಿರಲಿಲ್ಲ. ತಂದೆಯ ಎದುರು ತನ್ನ ಅಭಿಪ್ರಾಯವನ್ನು ಹೇಳುವ ಧೈರ್ಯ ಇಲ್ಲದ ಕಾರಣ ರಾತ್ರಿ ಮನೆ ಬಿಟ್ಟು ಹೊರಟನು.
16. ಶಾಂತಿಯ ಸೌಂದರ್ಯ, ದುಃಖಭರಿತ ಜೀವನ, ವಿದ್ಯೆಯ ಮೇಲಿನ ಆಸಕ್ತಿ ಮತ್ತು ಮಿತಭಾಷಿತ್ವ ಅವನ ಮನಸ್ಸನ್ನು ಆಕರ್ಷಿಸಿದವು. ಇದರಿಂದ ಅವನು ಶಾಂತಿಯನ್ನು ಪ್ರೀತಿಸಲು ಆರಂಭಿಸಿದನು.
17. ಸೀತೆಯನ್ನು ಮದುವೆಯಾದರೆ ಲಂಡನ್‌ಗೆ ಹೋಗುವ ಅವಕಾಶ ಇತ್ತು. ಆದರೆ ಶಾಂತಿಯ ಮೇಲಿನ ಪ್ರೀತಿಯಿಂದ ಹಣಕ್ಕಾಗಿ ಪ್ರೇಮವನ್ನು ಬಲಿಕೊಡಬಾರದು ಎಂದು ಅವನ ಮನಸ್ಸು ಹೇಳುತ್ತಿತ್ತು.
18. ಶಾಂತಿ ಇಲ್ಲದೆ ತಾನು ಬದುಕಲಾರೆನೆಂದು ಅವನಿಗೆ ಅರಿವಾಯಿತು. ಹಣದಾಸೆಯಿಂದ ತನ್ನ ಜೀವನವನ್ನೇ ಹಾಳು ಮಾಡಿಕೊಂಡೆ ಎಂದು ಪಶ್ಚಾತ್ತಾಪಪಟ್ಟನು.
19. ವರದಕ್ಷಿಣೆ ಕೊಡಲಾಗದೆ ಶಾಂತಿಯ ತಂದೆತಾಯಿಯವರು ಆತ್ಮಹತ್ಯೆ ಮಾಡಿಕೊಂಡರು ಎಂದು ಪತ್ರದಲ್ಲಿ ತಿಳಿದುಬಂತು. ಇದರಿಂದ ಶಾಂತಿಯ ಜೀವನ ದುರಂತವಾಯಿತು.
20. ತಾನು ಮೊದಲು ತಿರಸ್ಕರಿಸಿದ ಹುಡುಗಿಯೇ ಶಾಂತಿ ಎಂಬ ಸತ್ಯ ಅವನಿಗೆ ತಿಳಿಯಿತು. ಆದರೆ ಆಗ ಅವಳನ್ನು ಕಳೆದುಕೊಂಡಿದ್ದರಿಂದ ಯಾವುದೇ ಪ್ರಯೋಜನವಿರಲಿಲ್ಲ.

# 3. ಮಗಳಿಗೆ ಬರೆದ ಪತ್ರ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ**

1. ನೆಹರುರವರು ತಮ್ಮ ಮಗಳಾದ ಪ್ರಿಯಾದರ್ಶಿನಿಗೆ ಬರೆದಿದ್ದಾರೆ
2. ಜ್ಞಾನಾರ್ಜನೆಗಾಗಿ, ವಿವೇಕ ಸಾಧನೆಗಾಗಿ ಹೂಯಾನ್ ತ್ಸಾಂಗ್ ಭಾರತಕ್ಕೆ ಬಂದ.
3. ನಲಂದ ವಿಶ್ವವಿದ್ಯಾನಿಲಯ ಪಾಟಲಿಪುತ್ರದಲ್ಲಿತ್ತು.
4. ತೆರೆಮರೆಯಲ್ಲಿ ಕೆಲಸ ಮಾಡಬೇಕೆಂದು ಅನಿಸಿದರೇ ಭಯವಿದೆ ಎಂದರ್ಥ.
5. ಹೂಯಾನ್ ತ್ಸಾಂಗ್ ಪಡೆದ ಬಿರುದು ಧರ್ಮಜ್ಞ ಚಕ್ರೇಶ್ವರ
6. ಗಂಡಸರು, ಹೆಂಗಸರು ಮತ್ತು ಮಕ್ಕಳು ಗಾಂಧೀಜಿಯವರ ಸಂದೇಶದಿಂದ ಸ್ವಾತಂತ್ರ್ಯ ಸೈನಿಕರಾಗಿದ್ದಾರೆ.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

7. ನನ್ನ ಜ್ಞಾನ ಶಕ್ತಿ ಇಷ್ಟಿದೆ. ಈ ತಾಮ್ರದ ರೇಕು ಗಳನ್ನು ಬಿಗಿಸದೆ ಹೋದೆನಾದರೆ ನನ್ನ ಹೊಟ್ಟೆ ಬಿರಿದೀತು.ನನ್ನ ಸುತ್ತ ಸುಳಿವ ಅಜ್ಞಾನಿಗಳ ಕಂಡು ನನಗೆ ಅಯ್ಯೋ ಅನಿಸುತ್ತದೆ.ಅವರೆಲ್ಲ ಕತ್ತಲೆಯಲ್ಲಿ ತಡವಿ ಆಡುತ್ತಿದ್ದಾರೆ. ಅವರಿಗಾಗಿ ನಾ ನನ್ನ ನೆತ್ತಿಯ ಮೇಲೆ ದೀಪ ಹೊತ್ತಿದ್ದೇನೆ ಎಂದು ಹೇಳುತ್ತಿದ್ದನಂತೆ.

8. ಬಡವರಿಗೆ, ಕಷ್ಟದಿಂದ ನೆರಳುತ್ತಿರುವವರಿಗೆ, ಹಸುವಿನಿಂದ ಕೊರಗುತ್ತಿರುವವರಿಗೆ,ಅನ್ಯಾಯಕ್ಕೆ ತುತ್ತಾದವರಿಗೆ ಸದಾ ಸಹಾಯ ಮಾಡಬೇಕು ಎಂಬುದು ಗಾಂಧೀಜಿಯವರ ಆಸೆಯಾಗಿದೆ. ಹಾಗೂ ಅಂತವರ ಮೇಲೆ ಗಾಂಧೀಜಿಯವರಿಗೆ ಅಪಾರ ಪ್ರೇಮವಿದೆ. ಎಲ್ಲರಲ್ಲೂ ಸ್ಫೂರ್ತಿತುಂಬುವ ವ್ಯಕ್ತಿತ್ವ ಗಾಂಧೀಜಿಯವರದು.

9. ಜವಾಹರಲಾಲ್ ನೆಹರು ಅವರು ನೈನಿ ಸೆಂಟ್ರಲ್ ಜೈಲಿನಿಂದ ಈ ಪತ್ರವನ್ನು ಬರೆದರು. ಇದು ಇಂದಿರಾ ಅವರ ಹುಟ್ಟುಹಬ್ಬದ ದಿನದಂದು ಬರೆದ ಪತ್ರವಾಗಿದೆ.
10. ಸೆರೆಮನೆಯಿಂದ ಭೌತಿಕ ಉಡುಗೊರೆ ನೀಡಲು ಸಾಧ್ಯವಿಲ್ಲವೆಂದು ನೆಹರು ಹೇಳಿದರು. ಮನಸ್ಸಿನ ಮತ್ತು ಜ್ಞಾನದ ರೂಪದಲ್ಲಿರುವ ಅಮೂಲ್ಯವಾದ ಬಹುಮಾನವನ್ನು ನೀಡಲು ಬಯಸಿದರು.
11. ಬುದ್ಧಿವಾದ ಹೇಳುವುದು ಅವರಿಗೆ ಇಷ್ಟವಿರಲಿಲ್ಲ. ಉಪದೇಶ ಮಾಡುವಾಗ ತಾನು ಎಲ್ಲವನ್ನೂ ತಿಳಿದವನೆಂಬ ಅಹಂಕಾರ ಬರಬಾರದು ಎಂದು ಅವರು ಭಾವಿಸಿದ್ದರು.
12. ಹಿಯಾನ್‌ತ್ಸಾಂಗ್ ಚೀನಾದಿಂದ ಬಂದ ಜ್ಞಾನಾನ್ವೇಷಕ ಪ್ರವಾಸಿಗನಾಗಿದ್ದನು. ಜ್ಞಾನವನ್ನು ಪಡೆಯುವ ಉದ್ದೇಶದಿಂದ ಅವನು ಭಾರತಕ್ಕೆ ಪ್ರಯಾಣ ಮಾಡಿದನು.
13. ಹಿಯಾನ್‌ತ್ಸಾಂಗ್ ನಲಂದಾ ಎಂಬ ಮಹಾಘಟಿಕಾಸ್ಥಾನದಲ್ಲಿ ವಿದ್ಯಾಭ್ಯಾಸ ಮಾಡಿದನು. ನಂತರ ಅವನು ವಿದ್ಯಾಪಾರಂಗತನಾಗಿ 'ಧರ್ಮಜ್ಞ ಚಕ್ರೇಶ್ವರ' ಎಂಬ ಬಿರುದನ್ನು ಪಡೆದನು.
14. ಆ ವ್ಯಕ್ತಿ ತನ್ನ ಜ್ಞಾನವನ್ನು ಕುರಿತು ಅಹಂಕಾರ ಹೊಂದಿದ್ದನು. ನೆಹರು ಅವರು ಜ್ಞಾನದ ಬಗ್ಗೆ ಅಹಂಕಾರ ಪಡಬಾರದು ಎಂಬ ಸಂದೇಶವನ್ನು ಈ ಕಥೆಯ ಮೂಲಕ ನೀಡಿದ್ದಾರೆ.
15. ಜ್ಞಾನಿಗಳು ತಮ್ಮಲ್ಲಿ ಎಲ್ಲ ಜ್ಞಾನವೂ ಇದೆ ಎಂದು ಅಹಂಕಾರಪಡಬಾರದು. ಹೊಸ ವಿಷಯಗಳನ್ನು ಕಲಿಯುವ ಆಸಕ್ತಿ ಮತ್ತು ಶೋಧನೆಯ ಮನೋಭಾವ ಹೊಂದಿರಬೇಕು.

16. **1917**ನೇ ವರ್ಷದಲ್ಲಿ ಲೆನಿನ್ ಮಹಾವಿಪ್ಲವವನ್ನು ಆರಂಭಿಸಿದನು. ಆ ಕ್ರಾಂತಿಯಿಂದ ರಷ್ಯಾ ಮತ್ತು ಸೈಬೀರಿಯಾದ ರೂಪುರೇಖೆಗಳು ಬದಲಾದವು.
17. ಬಾಪೂಜಿಯವರ ಆಶಯ ಭಾರತಕ್ಕೆ ಸ್ವಾತಂತ್ರ್ಯ ತಂದುಕೊಡುವುದು ಮತ್ತು ಬಡವರು, ಹಸಿದವರು ಹಾಗೂ ಅನ್ಯಾಯಕ್ಕೊಳಗಾದವರ ದುಃಖವನ್ನು ನಿವಾರಿಸುವುದಾಗಿತ್ತು.
18. ಇಂದಿರಾ ಯಾವ ಕೆಲಸವನ್ನೂ ರಹಸ್ಯವಾಗಿ ಮಾಡಬಾರದು ಎಂದು ಸಲಹೆ ನೀಡಿದರು. ಧೈರ್ಯ, ಪ್ರಾಮಾಣಿಕತೆ ಮತ್ತು ನಿರ್ಭಯತೆಯಿಂದ ಬದುಕಬೇಕೆಂದು ಹೇಳಿದರು.
19. ಭಾರತ ಯೋಧರೆಂದು ಕರೆಯಿಸಿಕೊಳ್ಳುವವರು ದೇಶದ ಮಾನ-ಮರ್ಯಾದೆಯನ್ನು ಕಾಪಾಡಬೇಕು. ಯಾವುದೇ ಅಪಕೀರ್ತಿ ತರುವ ಕೆಲಸ ಮಾಡಬಾರದು.
20. ಇಂದಿರಾ ದೊಡ್ಡವಳಾಗಿ ವೀರರಮಣಿಯಾಗಬೇಕು ಮತ್ತು ಭಾರತಮಾತೆಯ ಸೇವೆ ಮಾಡಬೇಕು ಎಂದು ಆಶೀರ್ವದಿಸಿದರು. ಪೂರ್ಣ ವಾತ್ಸಲ್ಯದಿಂದ ಅವಳನ್ನು ಹರಸಿದರು.
21. ಅಗತ್ಯವಾದ ವಿಷಯವಸ್ತುವನ್ನು (ಕಂಟೆಂಟ್) ರಚಿಸುತ್ತಾರೆ.
22. ತಮ್ಮ ವಿಚಾರಗಳು, ಆಲೋಚನೆಗಳು ಮತ್ತು ಇತರ ವಿಷಯಗಳನ್ನು ಸಂವಹನ ಮಾಡುತ್ತಾರೆ.
23. ತಮ್ಮ ವಿಚಾರಗಳು, ಆಲೋಚನೆಗಳು ಮತ್ತು ವಿಷಯಗಳನ್ನು ಪರಿಣಾಮಕಾರಿಯಾಗಿ ಸಂವಹನ ಮಾಡುವುದು.
24. ವಿದ್ಯಾರ್ಥಿಯ ವಿವೇಚನೆಯ ವಿವರಣೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು.

---

# ಗದ್ಯ ಭಾಗ

## 5. ಹೂವಾದ ಹುಡುಗಿ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಬಿ) ಕಾಲ
2. (ಸಿ) ವ್ಯಾಪಾರಿ
3. (ಡಿ) ನಾನು
4. (ಎ) ತೆಗೆದುಕೊಂಡು
5. ಮೌಖಿಕವಾಗಿ (ಎ)
6. (ಎ)ಯಕ್ಷಗಾನ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

7. ಕೇಳಿಕೊಂಡು
8. ಕಡಾಯಿ
9. ಪ್ರಥಮ ಪುರುಷ
10. ಅಂಕಿತನಾಮ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

11. ಹೂವನ್ನು ಮಾರಿ ಬಂದ ಹಣದಿಂದ ತನ್ನ ತಾಯಿಯ ಕಷ್ಟವನ್ನು ದೂರ ಮಾಡುವ ಸಲುವಾಗಿ ಮುದುಕಿಯ ಕಿರಿಯ ಮಗಳು ಹೂವಿನ ಗಿಡವಾದಳು.

12. ದೊರೆಯ ಹೆಂಡತಿ ಹೂವಿಗೆ ಒಂದು ಮೊಗೆ ಹಣವನ್ನು ಕೊಟ್ಟಳು.
13. ಹೂವಾಗುವ ಹುಡುಗಿಯ ವಿಚಾರವನ್ನು ದೊರೆಯ ಮಗ ಮಂತ್ರಿಯ ಮಗನ ಬಳಿ ಹೇಳಿದನು.
14. ದೊರೆಯ ಚಿಕ್ಕಮಗಳು ಗೆಳತಿಯರೊಂದಗೆ ಸುರಹೊನ್ನೆ ತೋಟಕ್ಕೆ ಉಯ್ಯಾಲೆಯಾಡಲು ಹೋದಳು.
15. ಪಟ್ಟಣಕ್ಕೆ ಹಿಂದಿರುಗುವಾಗ ಅಕ್ಕ ತಮ್ಮನಿಗೆ ಐಸಿರಿಯ ಉಡುಗೊರೆಯನ್ನು ನೀಡಿದಳು.
16. ಮುದುಕಿ ತನ್ನ ಮಕ್ಕಳನ್ನು ಕೂಲಿ ಕೆಲಸ ಮಾಡಿ ಸಾಕುತ್ತಿದ್ದಳು.
17. ಮುದುಕಿಯ ಕಿರಿಯ ಮಗಳಿಗೆ ರಾಜಕುಮಾರನ ಜೊತೆ ಮದುವೆಯಾಗುತ್ತದೆ.
18. ದೊರೆಮಗಳು ಅರಮನೆಯ ಪಕ್ಕದಲ್ಲಿ ಬಾಡಿದ ಹೂವಿನ ರಾಸಿಯನ್ನು ನೋಡಿದಳು.
19. ಬಾಯಿ ಇದೆ, ಮಾತಿಲ್ಲ; ಹಲ್ಲುಗಳಿವೆ, ಕಚ್ಚುವುದಿಲ್ಲ .ಈ ಒಗಟಿನ ಅರ್ಥ  ಬಾಚಣಿಗೆ
20. ಕಾಲಿಲ್ಲ, ಕೈಯಿಲ್ಲ; ಮನೆ ಮನೆಗೆ ಓಡಾಡುತ್ತದೆ .ಈ ಒಗಟಿನ ಅರ್ಥ ಪತ್ರ
21. ರೆಕ್ಕೆ ಇಲ್ಲದೆಯೇ ಆಕಾಶದಲ್ಲಿ ಹಾರುತ್ತದೆ .ಈ ಒಗಟಿನ ಅರ್ಥ ಮೋಡ
22. ಕೈಗಳಿವೆ, ಆದರೆ ಕೆಲಸ ಮಾಡುವುದಿಲ್ಲ; ಮುಖವಿದೆ, ಆದರೆ ಮಾತನಾಡುವುದಿಲ್ಲ .ಈ ಒಗಟಿನ ಅರ್ಥ ಗಡಿಯಾರ

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

23. ಅರಮನೆಗೆ ಗಮಗಮ ಹೂವು ಬರುವುದನ್ನು ನೋಡಿದ ದೊರೆಮಗನು ಅದನ್ನು ತಂದುಕೊಡುತ್ತಿದ್ದ ಹುಡುಗಿಯನ್ನು ಹಿಂಬಾಲಿಸಿ ಹೋದನು. ಆದರೆ ಅವರ ಮನೆಯ ಸುತ್ತ ಯಾವುದೇ ಹೂವಿನ ಗಿಡಗಳಿಲ್ಲದಿರುವುದನ್ನು ಗಮನಿಸಿ ಆ ಹೂವು ಅವರಿಗೆಲ್ಲಿಂದ ಬರುತ್ತದೆಂದು ಯೋಚಿಸಿ ಅರಮನೆಗೆ ಹಿಂದಿರುಗಿದವನು ಸೂರ್ಯ ಹುಟ್ಟುವ ಮೊದಲೇ ಹುಡುಗಿಯರಿದ್ದ ದೊಡ್ಡ ಮರದ ಮೇಲೆ ಕುಳಿತುಕೊಂಡ. ಎಂದಿನಂತೆಯೇ ಚಿಕ್ಕ ಹುಡುಗಿಯು ದೊಡ್ಡ ಹುಡುಗಿಯ ಸಹಾಯದಿಂದ ಹೂವಿನ ಗಿಡವಾಗುವುದನ್ನು ನೋಡಿದನು. ಹೀಗೆ ದೊರೆಯ ಮಗನು ಅರಮನೆಗೆ ಹೂವು ಎಲ್ಲಿಂದ ಬರುತ್ತದೆಂದು ಕಂಡು ಹಿಡಿದನು.

24. ಮೊದಲು ಮನೆಯನ್ನು ಸಾರಿಸಿ ನಂತರ ಸ್ನಾನ ಮಾಡಿದ ಅಕ್ಕ ಬಾವಿಯಿಂದ  ಚಿಳ್ ಉಗುರು ಸೋಕಿಸದಂತೆ ಎರಡು ತಂಬಿಗೆ ನೀರನ್ನು ತೆಗೆದುಕೊಂಡು ಬರುತ್ತಿದಳು. ನಂತರ ಅವರ ಮನೆಯ ಎದುರಿಗೆ ಇದ್ದ ದೊಡ್ಡ ಮರದ ಬಳಿ ತಂಗಿಯು ಗುಡಿಸಿ ಸಾರಿಸುತ್ತಿದ್ದಳು. ಅಲ್ಲಿ ತಂಗಿಯು ದೇವರ ಧ್ಯಾನ ಮಾಡಿ ಕುಳಿತುಕೊಂಡ ನಂತರ ಅಕ್ಕ ತಾನು ತಂದ ಒಂದು ತಂಬಿಗೆ ನೀರನ್ನು ಅವಳ ಮೇಲೆ ಸುರಿಯುತ್ತಿದ್ದಳು. ಆಗ ತಂಗಿಯು ಹೂವಿನ ಗಿಡವಾಗುತ್ತಿದ್ದಳು. ನಂತರ ಅಕ್ಕ ಸುಳಿ ಮುರಿಯದ ಹಾಗೆ ಎಲೆ ಮುರಿಯದ ಹಾಗೆ ಬೇಕಾದಷ್ಟು ಹೂವನ್ನು ಕಿತ್ತುಕೊಂಡು, ನಂತರ ಇನ್ನೊಂದು ತಂಬಿಗೆ ನೀರನ್ನು ತಂಗಿಯ ಮೇಲೆ ಸುರಿದ ನಂತರ ತಂಗಿ ಮೊದಲಿನಂತೆ ಮನುಷ್ಯಳಾಗುತ್ತಿದ್ದಳು

25. ತನ್ನ ಅತ್ತಿಗೆಯು ಹೂವಿನ ಗಿಡವಾಗುವುದನ್ನು ತಿಳಿದ ದೊರೆಯ ಮಗನ ತಂಗಿಯು ತನ್ನ ಸ್ನೇಹಿತೆಯರೊಡನೆ ಅತ್ತಿಗೆಯನ್ನು ಸುರಹೊನ್ನೆ ತೋಟಕ್ಕೆ ಕರೆದುಕೊಂಡು ಹೋದಳು. ಅಲ್ಲಿ ಅತ್ತಿಗೆಗೆ ಹೂವಿನ ಗಿಡವಾಗುವಂತೆ ಒತ್ತಾಯಿಸಿದಾಗ ಅತ್ತಿಗೆಯು ಗಿಡವಾಗುವಾಗ ಮತ್ತು ನಂತರದಲ್ಲಿ ಏನೇನು ಮಾಡಬೇಕೆಂದು ತಿಳಿಸಿ ಅದರಂತೆ ಹೂವಿನ ಗಿಡವಾದಳು. ಆದರೆ ದೊರೆ ಮಗನ ತಂಗಿ ಮತ್ತು ಅವಳ ಸ್ನೇಹಿತೆಯರು ದೊರೆ ಮಗನ ಹೆಂಡತಿ ಹೇಳಿದಂತೆ ಮಾಡದಿದ್ದುದರಿಂದ ಅವಳು ಅರ್ಧಂಬರ್ಧ ಮನುಷ್ಯಳಾದಳು ಮನೆಗೆ ಹಿಂದಿರುಗಲೇ ಇಲ್ಲ. ತನ್ನ ಹೆಂಡತಿಗೆ ಏನಾಯಿತು? ಅವಳು ಯಾಕೆ ಬರಲಿಲ್ಲವೆಂದು ತಿಳಿಯದೆ ಬೇಸರದಲ್ಲಿ ದೊರೆ ಮಗನು ಗೋಸಾಯಿಧಿರಿಸು ಧರಿಸಿ ದೇಶಾಂತರ ಹೋದನು

26. ದೊರೆ ಮಗನ ತಂಗಿಯಿಂದಾಗಿ ಅರ್ಧಂಬರ್ಧ ದೇಹ ಹೊಂದಿದ ಅವನ ಹೆಂಡತಿಯು ಮಳೆಯ ನೀರಿನಲ್ಲಿ ತೇಲಿಕೊಂಡು ಮೋರಿಗೆ ಹೋಗಿ ಬಿದ್ದಳು.ಮಾರನೆಯ ದಿನ ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದಾಗ ಗಾಡಿಯವನೊಬ್ಬ ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿ ಮೇಲೆ ಕೂರಿಸಿಕೊಂಡು ಮುಂದಿನ ಊರಿನ ಹಾಳು ಮಂಟಪದಲ್ಲಿ ಅವಳನ್ನು ಇಳಿಸಿ ಹೊರಟು ಹೋದಾಗ ಆ ಪಟ್ಟಣದ ಜನರು ನೀರಿಗೆ ಹೋಗುವಾಗ ಇವಳನ್ನು ನೋಡಿ ತಮ್ಮ ಪಟ್ಟಣದ ರಾಣಿಯ ತಮ್ಮನ ಹೆಂಡತಿಯಿರಬಹುದೆಂದು ಊಹಿಸಿ ಅವಳನ್ನು ಅರಮನೆಗೆ ತಂದು ಅವಳ ಗಾಯಗಳಿಗೆ ಔಷಧಿ ಹಾಕಿ ವಾಸಿ ಮಾಡುವರು. ಹೀಗೆ ಅರ್ಧಂಬರ್ಧ ದೇಹವಾಗಿದ್ದವಳು ಅರಮನೆ ಸೇರಿದಳು.

27. ದೊರೆ ಮಗಳು ತನ್ನ ಸ್ನೇಹಿತರೆಯರಿಗೆಲ್ಲ "ಸುರಹೊನ್ನೆ ತೋಟಕ್ಕೆ ಉಯ್ಯಾಲೆ ಆಡೋಕೆ ಹೋಗೋಣ" ನಮ್ಮ ಅತ್ತಿಗೆ ಹೂವಿನ ಗಿಡ ಆಗ್ತಾಳೆ , ನೀವೆಲ್ಲರೂ ಬನ್ನಿ, ಗಮಗಮ ಅನ್ನೋ ಹೂವು ಬೇಕಾದಷ್ಟು ಕೊಡ್ತೀನಿ" ಎಂದು ಹೇಳಿ ಬಂದಳು.

28. ಮುದುಕಿಯ ಕಿರಿ ಮಗಳು ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿಕೊಟ್ಟು ಅವುಗಳನ್ನು ಮೈಮೇಲೆ ಸುರಿಯುವ , ಹೂವನ್ನು ಕೀಳುವ ವಿಧಾನವನ್ನೆಲ್ಲಾ ಹೇಳಿ ದೇವರನ್ನು ನೆನೆಯುತ್ತಾ ಕುಳಿತಾಗ, ಹುಡುಗಿಯರು ಅವಳು ಹೇಳಿದ ಮಾತನ್ನು ಸರಿಯಾಗಿ ಆಲಿಸದೇ ನಿರ್ಲಕ್ಷದಿಂದ ತಂಬಿಗೆ ನೀರನ್ನು ಅಡ್ಡಾದಿಡ್ಡಿಯಾಗಿ ಸುರಿದಿದ್ದರಿಂದಾಗಿ ಅರ್ಧಂಬರ್ಧ ಗಿಡವಾದಳು.

29. ಬಡತನದಲ್ಲಿಯೂ ಪ್ರಾಮಾಣಿಕತೆ, ದುಡಿಮೆ, ಸಹೋದರಿಯರ ಪ್ರೀತಿ ಮತ್ತು ಒಳ್ಳೆಯತನವನ್ನು ಮನಮುಟ್ಟುವ ರೀತಿಯಲ್ಲಿ ಚಿತ್ರಿಸಲಾಗಿದೆ. ಹೂವಿನ ಗಿಡವಾಗುವ ಹುಡುಗಿಯ ಅದ್ಭುತ ಶಕ್ತಿ ಕಥೆಗೆ ವಿಶೇಷ ಆರ್ಕ್ಷಣೆಯನ್ನು ನೀಡುತ್ತದೆ.ಕೊನೆಯಲ್ಲಿ ಒಳ್ಳೆಯತನಕ್ಕೆ ಜಯ ಮತ್ತು ಅಜಾಗರೂಕತೆಗೆ ಶಿಕ್ಷೆ ಎಂಬ ಸಂದೇಶವನ್ನು ನೀಡುತ್ತದೆ. ಪ್ರೀತಿ, ತ್ಯಾಗ, ಸಹನೆ ಮತ್ತು ಮಾನವೀಯ ಮೌಲ್ಯಗಳನ್ನು ತಿಳಿಸುವ ಉತ್ತಮ ಜನಪದ ಕಥೆಯಾಗಿದೆ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

30. ಎ.ಕೆ. ರಾಮಾನುಜನ್

ಎ.ಕೆ.ರಾಮಾನುಜನ್ ರವರು ಸಾ.ಶ.1929 ರಲ್ಲಿ ಮೈಸೂರಿನಲ್ಲಿ ಜನಿಸಿದರು. ಇವರು ಕನ್ನಡ ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ. ಕನ್ನಡದಲ್ಲಿ ಹೊಕ್ಕುಳದಲ್ಲಿ ಹೂವಿಲ್ಲ ಮತ್ತು ಇತರ ಕವಿತೆಗಳು, ಕುಂಟೋಬಿಲ್ಲೆ, ಮತ್ತೊಬ್ಬನ ಆತ್ಮಚರಿತ್ರೆ ಮೊದಲಾದ ಪ್ರಸಿದ್ಧ ಕೃತಿಗಳನ್ನು ಬರೆದಿದ್ದಾರೆ. ಕನ್ನಡ ವಚನ ಸಾಹಿತ್ಯವನ್ನು ಸ್ಪೀಕಿಂಗ್ ಆಫ್ ಶಿವ ಎಂದು ಅನುವಾದಿಸಿದ್ದಾರೆ ಇವರ ಸಾಹಿತ್ಯಕ ಸಾಧನೆಗೆ 1976 ರಲ್ಲಿ ಭಾರತ ಸರ್ಕಾರವು ಪದ್ಮಶ್ರೀ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. 1983 ರಲ್ಲಿ ಪ್ರಸಿದ್ಧ ಮ್ಯಾಕ್ ಅರ್ಥರ್ ಫೆಲೋಷಿಪ್ ಗೌರವ ಸಂದಿದೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

31. ಆಯ್ಕೆ : ಮೇಲಿನ ವಾಕ್ಯವನ್ನು ಎ.ಕೆ. ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ತಾಯಿಯು ಕೂಲಿ ಮಾಡಿ ತಮ್ಮನ್ನು ಸಾಕಲು ಕಷ್ಟ ಪಡುತ್ತಿದ್ದಾಗ ತಂಗಿಯು ತಾನು ಹೂವಿನ ಗಿಡವಾಗಿ ಹೂವನ್ನು ಕೊಯ್ದು ನಂತರ ತಂಗಿಯ ಸಲಹೆಯಂತೆ ಅರಮನೆಗೆ ಹೋಗಿ ಮಾರಾಟ ಮಾಡಿ ರಾಣಿಯು ಕೊಟ್ಟ ಮೊಗೆ ಹಣವನ್ನು ತಂಗಿಗೆ ತೋರಿಸುವಳು. ಆಗ ಅವಳು ಮೇಲಿನಂತೆ ಹೇಳುವಳು.

ಸ್ವಾರಸ್ಯ: ಹುಡುಗಿಯರ ತಾಯಿಗೆ ಸಹಾಯ ಮಾಡುವ ಸಲುವಾಗಿ ಸಂಪಾದಿಸಬೇಕೆಂಬ ಮನೋಭಾವನೆಯ ಜೊತೆ ಅದು ತಮ್ಮ ತಾಯಿಗೆ ಗೊತ್ತಾದರೆ ಬಯ್ಯಬಹುದು ಎಂಬ ಭಯವನ್ನೂ ಮೇಲಿನ ವಾಕ್ಯವು ಸೂಚಿಸುವುದು.

32. ಆಯ್ಕೆ : ಮೇಲಿನ ವಾಕ್ಯವನ್ನು ಎ.ಕೆ. ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದಿನವೂ ಅರಮನೆಗೆ ಗಮಗಮಿಸುವ ಹೂವು ಎಲ್ಲಿಂದ ಬರುತ್ತಿದೆ ಎಂದು ಯೋಚಿಸಿದ ದೊರೆಯ ಮಗನು ಅದನ್ನು ಅರಮನೆಗೆ ತಂದು ಮಾರುತ್ತಿದ್ದ ಅಕ್ಕನನ್ನು ಹಿಂಬಾಲಿಸಿ ನಿಜ ಸಂಗತಿಯನ್ನು ತಿಳಿದುಕೊಂಡನು. ನಂತರ ಮಂತ್ರಿಯ ಮಗನಿಗೆ ಈ ವಿಚಾರವನ್ನು ತಿಳಿಸಿದನು. ಈ ವಿಚಾರ ತಿಳಿದ ದೊರೆಯು ಮುದುಕಿಯನ್ನು ಕರೆಸಿ ಅವಳ ಕಿರಿಯ ಮಗಳೊಡನೆ ಮದುವೆ ಸಿದ್ಧತೆ ಮಾಡಿಸಿದನು. ತದ ನಂತರದಲ್ಲಿ ದೊರೆಯ ಮಗನೊಂದಿಗೆ ಮದುವೆಯಾ ತಂಗಿಯು ಏಕಾಂತದಲ್ಲಿದ್ದಾಗ ಅವಳೂ ಮಾತನಾಡದೆ ಪರಸ್ಪರ ಸುಮ್ಮನಿದ್ದಾಗ ಕೊನೆಗೆ ಅವಳೇ ಮೇಲಿನಂತೆ ಪ್ರಶ್ನಿಸುವಳು.

ಸ್ವಾರಸ್ಯ : ದೊರೆಯ ಮಗನು ಮಾತನಾಡಿಸದ ಕುರಿತಾದ ಹುಡುಗಿಯ ಬೇಸರ ಇಲ್ಲಿ ವ್ಯಕ್ತವಾಗಿದೆ.

33. ಆಯ್ಕೆ : ಮೇಲಿನ ವಾಕ್ಯವನ್ನು ಎ.ಕೆ. ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ದೊರೆಯ ಮಗನ ತಂಗಿಯಿಂದಾಗಿ ಅರ್ಧಂಬರ್ಧ ದೇಹ ಹೊಂದಿದ ಅವನ ಹೆಂಡತಿಯು ಮಳೆಯ ನೀರಿನಲ್ಲಿ ತೇಲಿಕೊಂಡು ಮೋರಿಗೆ ಹೋಗಿ ಬಿದ್ದಳು. ಮಾರನೆಯ ದಿನ ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದಾಗ ಗಾಡಿಯವನೊಬ್ಬ ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿ ಮೇಲೆ ಕೂರಿಸಿಕೊಂಡು ಮುಂದಿನ ಊರಿನಹಾಳು ಮಂಟಪದಲ್ಲಿ ಅವಳನ್ನು ಇಳಿಸಿ ಹೊರಟು ಹೋಗುವಾಗ ಈ ಮೇಲಿನಂತೆ ಹೇಳಿದನು.

ಸ್ವಾರಸ್ಯ : ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿಯವನು ಗಾಡಿಯಲ್ಲಿ ಕರೆತಂದು ಅವಳ ಬಗ್ಗೆ ತೋರಿದ ಕರುಣೆ ಇಲ್ಲಿ ವ್ಯಕ್ತವಾಗಿದೆ.

34. ಆಯ್ಕೆ : ಮೇಲಿನ ವಾಕ್ಯವನ್ನು ಎ.ಕೆ. ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ

ಸಂದರ್ಭ : ದೊರೆಯ ಮಗನ ತಂಗಿಯಿಂದಾಗಿ ಅರ್ಧಂಬರ್ಧ ದೇಹ ಹೊಂದಿ ಮೋರಿಯಲ್ಲಿ ಬಿದ್ದಿದ್ದ ಅವನ ಹೆಂಡತಿಯನ್ನು ಅತ್ತ ಕಡೆಯಿಂದ ಅರಳೆ ತುಂಬಿದ ಗಾಡಿಗಳು ಬರುತ್ತಿದ್ದಾಗ ಗಾಡಿಯವನೊಬ್ಬ ಅರ್ಧಂಬರ್ಧ ದೇಹದವಳನ್ನು ನೋಡಿ ಗಾಡಿ ಮೇಲೆ ಕೂರಿಸಿಕೊಂಡು ಮುಂದಿನ ಊರಿನ ಹಾಳು ಮಂಟಪದಲ್ಲಿ ಅವಳನ್ನು ಇಳಿಸಿ ಹೊರಟು ಹೋದಾಗ ಆ ಪಟ್ಟಣದ ದಾದಿಯರು ಮತ್ತು ಗೌಡತಿಯರು ನೀರಿಗೆ ಹೋಗುವಾಗ ಇವಳನ್ನು ನೋಡಿ ತಮ್ಮ ಪಟ್ಟಣದ ರಾಣಿಯ ತಮ್ಮನ ಹೆಂಡತಿಯಿರಬಹುದೆಂದು ಊಹಿಸಿ ರಾಣಿಯ ಬಳಿ ಹೋಗಿ ಮೇಲಿನಂತೆ ಹೇಳಿದರು.

ಸ್ವಾರಸ್ಯ : ಅರ್ಧಂಬರ್ಧ ದೇಹದವಳನ್ನು ನೋಡಿದ ಪಟ್ಟಣದ ಜನರು ಅವಳ ಗುರುತು ಹಿಡಿದು ಕಾಳಜಿ ತೋರಿದ ಸಂದರ್ಭ ಇಲ್ಲಿ ವ್ಯಕ್ತವಾಗಿದೆ.

35. ಆಯ್ಕೆ : ಮೇಲಿನ ವಾಕ್ಯವನ್ನು ಎ.ಕೆ. ರಾಮಾನುಜನ್ ಅವರು ಸಂಪಾದಿಸಿರುವ ಸಾಲು ಸಂಪಿಗೆ ನೆರಳು ಕೃತಿಯಿಂದ ಆಯ್ದ ಹೂವಾದ ಹುಡುಗಿ ಗದ್ಯದಿಂದ ಆರಿಸಿಕೊಳ್ಳಲಾಗಿದೆ.

ಸಂದರ್ಭ : ತಾಯಿಯು ಕೂಲಿ ಮಾಡಿ ತಮ್ಮನ್ನು ಸಾಕಲು ಕಷ್ಟ ಪಡುತ್ತಿದ್ದಾಗ ತಂಗಿಯು ತಾನು ಹೂವಿನ ಗಿಡವಾಗಿ ಹೂವನ್ನು ಕೊಯ್ದು ಮಾರಾಟ ಮಾಡಿ ಹಣ ಸಂಪಾದಿಸುವ ಸಲಹೆಯನ್ನು ಮುದುಕಿಯ ಕಿರಿಯ ಮಗಳು ತನ್ನ ಅಕ್ಕನಿಗೆ ತಿಳಿಸಿದಾಗ ಅವಳ ಅಕ್ಕ ಈ ಮಾತನ್ನು ತನ್ನ ತಂಗಿಗೆ ಹೇಳುವ ಸಂದರ್ಭ ಇದಾಗಿದೆ.

ಸ್ವಾರಸ್ಯ : ಮುದುಕಿಯ ಹಿರಿಯ ಮಗಳಿಗೆ ತನ್ನ ತಂಗಿ ಹೇಗೆ ಹೂವಿನ ಗಿಡವಾಗುತ್ತಾಳೆ ಎಂಬುದನ್ನು ತಿಳಿದುಕೊಳ್ಳುವ ಮನದ ಹಂಬಲ, ಸೋಜಿಗದ ಕ್ಷಣವನ್ನು ಕಣ್ತುಂಬಿಕೊಳ್ಳುವ ಕುತೂಹಲ ಈ ಮೇಲಿನ ಹೇಳಿಕೆಯಲ್ಲಿ ಬಹುಸ್ವಾರಸ್ಯಪೂರ್ಣವಾಗಿ ಮೂಡಿ ಬಂದಿದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

36. ಅತ್ತಿಗೆಯು ಹೂವಿನ ಗಿಡವಾಗುವ ವಿಷಯ ತಿಳಿದು ದೊರೆಯ ಮಗನ ತಂಗಿಯು ತನ್ನ ಸ್ನೇಹಿತರೆಯರೊಡನೆ ಅವಳನ್ನು ಕರೆದುಕೊಂಡು ಸುರಹೊನ್ನೆ ತೋಟಕ್ಕೆ ಹೋಗಿ ಹೂವಿನ ಗಿಡವಾಗುವಂತೆ ಒತ್ತಾಯಿಸಿದಳು. ಅವಳ ನಿಷ್ಠುರ ಮಾತಿಗೆ ಮಣಿದ ಅತ್ತಿಗೆಯು ಎರಡು ತಂಬಿಗೆ ನೀರು ತರಿಸಿ, ಅದನ್ನು ಮಂತ್ರಿಸಿ ಕೊಟ್ಟು ಅದನ್ನು ಸುರಿಯುವ ಹಾಗೂ ಹೂವನ್ನು ಕೀಳುವ ವಿಧಾನವನ್ನು ಹೇಳಿ ದೇವರನ್ನು ನೆನೆಯುತ್ತಾ ಕುಳಿತಳು. ಹುಡುಗಿಯರು ಸರಿಯಾಗಿ ಆಲಿಸದೆ ತಂಬಿಗೆ ನೀರನ್ನು ಅಡ್ಡಾದಿಡ್ಡಿಯಾಗಿ ಸುರಿದರು. ಅವಳು ಅರ್ಧಂಬರ್ಧ ಗಿಡವಾದಳು. ಆಗ ಸಾಯಂಕಾಲವಾಗಿತ್ತು. ಮಳೆ ಪ್ರಾರಂಭವಾಯಿತು. ಅವರು ಹೂವು ಕೀಳುವ ಸಂಭ್ರಮದಲ್ಲಿ ತೊಟ್ಟು, ಎಲೆ, ಸುಳಿ ಕಿತ್ತು ರೆಂಬೆಯನ್ನೆಲ್ಲ ತರಿದುಬಿಟ್ಟರು. ಮಳೆಗೆ ಹೆದರಿ ಮನೆಗೆ ಹೋಗುವ ಆತುರದಲ್ಲಿ ಮತ್ತೊಂದು ತಂಬಿಗೆ ನೀರನ್ನು ಅಡ್ಡಾದಿಡ್ಡಿ ಸುರಿದು ಹೊರಟು ಹೋದರು. ದೊರೆಮಗನ ಹೆಂಡತಿ ಮನುಷ್ಯಳಾದಾಗ ಕೈಯಿಲ್ಲ, ಕಾಲಿಲ್ಲದ ಅರ್ಧಂಬರ್ಧ ದೇಹವಾಗಿದ್ದಳು. ಮೈಯೆಲ್ಲ ಗಾಯವಾಗಿತ್ತು. ಮಳೆಯ ನೀರಿನಲ್ಲಿ ತೇಲಿ ಹೋದ ಅವಳು ಮೋರಿಯಲ್ಲಿ ಬಿದ್ದಳು. ಈ ರೀತಿಯಾಗಿ ದೊರೆಯ ಕಿರಿಯ ಮಗಳು ತನ್ನ ಅತ್ತಿಗೆಗೆ ದ್ರೋಹ ಮಾಡಿದಳು.

37. ತಂಗಿ ಮತ್ತು ಅವಳ ಸ್ನೇಹಿತೆಯರ ಜೊತೆ ಹೋದ ದೊರೆಯ ಮಗನ ಹೆಂಡತಿಯು ಮರಳಿ ಬರದಿದುದಕ್ಕೆ ನಿಜವಾದ ಕಾರಣ ತಿಳಿಯದ ದೊರೆಯ ಮಗನು ಬೇಸರದಿಂದ ಗೋಸಾಯಿಯ ದಿರಿಸು ಧರಿಸಿ ದೇಶಾಂತರ ಹೋದನು. ಅರ್ಧಂಬರ್ಧ ದೇಹವಾಗಿದ್ದ ಅವನ ಹೆಂಡತಿಯು ಅವನ ಅಕ್ಕನ ಪಟ್ಟಣದಲ್ಲಿಯೇ ದಾದಿಯರು ಮತ್ತು ಗೌಡತಿಯರ ನೆರವಿನಿಂದ ಅರಮನೆ ಸೇರಿದ್ದಳು. ದೊರೆಯ ಮಗನೂ ದೇಶದೇಶವನ್ನು ತಿರುಗುತ್ತ ತನ್ನ ಅಕ್ಕನ ಪಟ್ಟಣಕ್ಕೆ ಬಂದನು. ತಿಕ್ಕಲು ಮನುಷ್ಯನಂತಿದ್ದ ಅವನಿಗೆ ಗಡ್ಡ ಮೀಸೆ ಬೆಳೆದಿತ್ತು. ನೀರಿಗೆ ಬರುತ್ತಿದ್ದ ದಾದಿಯರು ಅವನನ್ನು ರಾಣಿಯ ತಮ್ಮನೆಂದು ಗುರುತಿಸಿ ರಾಣಿಗೆ ತಿಳಿಸಿದರು. ಅವನಿಗೆ ಸ್ನಾನ ಮಾಡಿಸಿ ಅವನೇ ತನ್ನ ತಮ್ಮನೆಂದು ತಿಳಿದ ರಾಣಿಯು ಅವನಿಗೆ ದಿನಕ್ಕೊಂದು ಅಡುಗೆ ಮಾಡಿ ಬಡಿಸಿದರೂ ಅವನು ಅವಳ ಬಳಿ ಮಾತನಾಡಲೇ ಇಲ್ಲ. ಅವಳು ಆಶ್ಚರ್ಯ ಪಟ್ಟು ಚೆಲುವೆಯರಾದ ದಾಸಿಯರನ್ನು ಸೇವೆಗೆ ಕಳಿಸಿದರೂ ಅವನು ಮಾತನಾಡಲಿಲ್ಲ. ನಂತರ ಅರ್ಧಂಬರ್ಧ ದೇಹದವಳನ್ನು ಶೃಂಗರಿಸಿ ಅವನ ಮಂಚದ ಮೇಲೆ ಕೂರಿಸಿದಾಗ ಅವಳು ತನ್ನ ಮೋಟುಗೈಯಿಂದ ಇವನ ಸೇವೆ ಮಾಡುತ್ತಿದ್ದಾಗ ಅವಳೇ ತನ್ನ ಪತ್ನಿ ಎಂದು ದೊರೆಯ ಮಗನಿಗೆ ತಿಳಿದು ಅವಳಿಂದ ನಡೆದ ಸಂಗತಿಯನ್ನು ತಿಳಿದುಕೊಂಡನು. ಅವಳ ಮಾತಿನಂತೆ ಅವಳು ಮಂತ್ರಿಸಿಕೊಟ್ಟ ಒಂದು ತಂಬಿಗೆ ನೀರನ್ನು ದೇವರನ್ನು ಧ್ಯಾನಿಸಿ ಕುಳಿತ ಅವಳ ಮೇಲೆ ಸುರಿದನು. ತರಿದು ಹೋಗಿದ್ದ ರೆಂಬೆ ಕೊಂಬೆಗಳನ್ನೆಲ್ಲ ಸೇರಿಸಿ ಮತ್ತೊಂದು ತಂಬಿಗೆ ನೀರನ್ನು ಸುರಿದಾಗ ಅವಳು ಮೊದಲಿನಂತೆ ಪುನಃ ಮನುಷ್ಯಳಾದಳು. ಹೀಗೆ ದೊರೆಯ ಮಗನು ತನ್ನ ಹೆಂಡತಿಯನ್ನು ಪುನಃ ಪಡೆದುಕೊಂಡನು.

38. ಈ ಕೆಳಗಿನ ಚಿತ್ರದ ಸನ್ನಿವೇಶದ ಸಂದರ್ಭವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ.
(ಮಕ್ಕಳ ಬರವಣಿಗೆಯ ಜೊತೆಗೆ ಶಬ್ದ ಸಾಮಾರ್ಥ್ಯವನ್ನು ವಾಕ್ಯಗಳ ಜೋಡಣೆಯನ್ನು ಗಮನಿಸಿ ಮೌಲ್ಯಮಾಪನ ಮಾಡಿ)

39. ವಿದ್ಯಾರ್ಥಿಯು ಬರೆದಿರುವ ಕಥಾ ಶೈಲಿಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು.

---

## 6. ತಲಕಾಡಿನ ವೈಭವ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಎ) ಸಂಧಿ
2. (ಡಿ) ಬೇರೊಬ್ಬ
3. (ಬಿ) ಪ್ರಕೃತಿಭಾವ
4. (ಡಿ) ಭಾವಸೂಚಕಾವ್ಯಯ
5. (ಸಿ) ಬೆನ್+ಪತ್ತು

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

6. ಆದೇಶಸಂಧಿ
7. ಪಶ್ಚಿಮ
8. ಆಗಮಸಂಧಿ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

9. ಪ್ರವಾಸಿಗರ ನಿಲ್ ಮನೆಯಲ್ಲಿ
10. ಕೋಲಾರ
11. ಚಾವುಂಡರಾಯನನ್ನು
12. ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯ ಪುರುಷರ ಚರಿತ್ರೆಯನ್ನು ಬರೆದಿರುವುದು ಕನ್ನಡಕ್ಕೆ ಕೊಟ್ಟ ದೊಡ್ಡ ಕಾಣಿಕೆ.
13. ವಿಕ್ರಮ ಚೋಳನ ಸೇನಾನಿ ಆದಿಯಮನನ್ನು ಸೋಲಿಸಿ ಗೆಲುವಿನ ಸ್ಮಾರಕವಾಗಿ ತಲಕಾಡಿನ ನೆಲದ ಮೇಲೆ ವಿಷ್ಣುವರ್ಧನ ವೀರ ನಾರಾಯಣ ದೇಗುಲವನ್ನು ಕಟ್ಟಿಸಿದನು
14. ನಮ್ಮ ದೇಗುಲಗಳು
15. ನಿಲ್‌ಮನೆಯ ಸ್ವಾಗತಕಾರ **ಸುಬ್ರಮಣ್ಯಮ್**
16. ಹರಿವರ್ಮ
17. ವಿಷ್ಣುವರ್ಧನ
18. **ಸಳ**

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

19. ಶಿವನಸಮುದ್ರ ಒಳ ಸೇರುವ ಮುನ್ನ ಬಾಗಿಲ ಬಳಿ ನಿಂತಿದ್ದ ಸುಬ್ರಮಣ್ಯಮ್ ಲೇಖಕರನ್ನು ವಿಶ್ವಾಸದಿಂದ ಸ್ವಾಗತಿಸಿದರು. ನಿಲ್ಮನೆಯನ್ನು ಕೂಡಲೇ ಖಾಲಿ ಮಾಡಿಸಿದರು. ಹಾಸಿಗೆ ಹಾಸಿ ಕೊಟ್ಟರು. ಊಟ ಉಪಚಾರದ ಬಗ್ಗೆ ಕೇಳಿದರು. ಕೊನೆಗೆ ಹೋಗುವಾಗ 'ಗುಡ್ನಾಯಿಟ್' ಎಂದು ಹೇಳಿದರು.
20. ಚಾವುಂಡರಾಯ ತಲಕಾಡಿನ ಗಂಗ ವಂಶದ ದೊರೆಗಳಾದ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿಯಾಗಿದ್ದು, ಅವರೊಂದಿಗೆ ಕೊನೆಯವರೆಗೂ ಇದ್ದ ಹಿರಿಯ ಜೀವ. ಜನರು 'ರಾಯ', 'ಅಣ್ಣ' ಎಂದು ಕರೆಯುತ್ತಿದ್ದರು. ಸ್ವತಃ ಕವಿಯಾಗಿದ್ದ ಚಾವುಂಡರಾಯ ಕನ್ನಡಕ್ಕೆ ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯ ಪುರುಷರ ಚರಿತ್ರೆಯನ್ನು ಕಾಣಿಕೆಯಾಗಿ ನೀಡಿದ್ದಾರೆ.

21. ಗುಡಿಗೋಪುರಗಳನ್ನು ಕಟ್ಟಿದುದ್ದಲ್ಲದೆ, ರಾಜೇಶ್ವರ, ವೈಕುಂಠನಾರಾಯಣ ಮರುಳೇಶ್ವರ , ಪಾತಾಳೇಶ್ವರ,ವೈದ್ಯೇಶ್ವರ ಗುಡಿಗಳನ್ನು ಕಟ್ಟಿದರು.

22. ತಲಕಾಡಿನ ಇತಿಹಾಸದಲ್ಲಿ ಗಂಗರ ಇತಿಹಾಸ , ಜೈನಧರ್ಮದ ವಿವರಣೆ ಇದೆ. ಕನ್ನಡ ಸಾಹಿತ್ಯದ ಕಥನವಿದೆ. ಹೊಯ್ಸಳ ವಾಸ್ತುಶಿಲ್ಪದ ವಿವರಣೆ ಇದೆ. ಎಲ್ಲಕ್ಕೂ ಮಿಗಿಲಾಗಿ ಕನ್ನಡವೇ ಧರ್ಮ. ಕನ್ನಡವೇ ಬಾಳಿನ ಪರಿಪೂರ್ಣತೆಯೆಂದು ಬಗೆದು ಅದಕ್ಕಾಗಿ ಹೋರಾಟ ಮಾಡಿದ ವೀರರ ಚರಿತ್ರೆಯಿದೆ
23. ವೈದ್ಯೇಶ್ವರ ದೇವಾಲಯದ ರಚನೆಯ ಕಾಲ ನಿಶ್ಚಿತವಾಗಿ ತಿಳಿದು ಬಾರದಿದ್ದರೂ ಈಗ ಸಿಕ್ಕಿರುವ ಆಧಾರಗಳನ್ವಯ ಇದರ ಕಾಲವನ್ನು ಹದಿಮೂರನೆಯ ಶತಮಾನದ ಪೂರ್ವಕ್ಕೆ ತಂದಿರುವರು. ದೇವಾಲಯದ ಹೊರ ವಲಯದಲ್ಲಿರುವ ಕಲಶಗಳೂ ಗರ್ಭಗುಡಿಯ ಗೋಪುರದ ಶಿಲ್ಪ ನಿರ್ಮಾಣದಲ್ಲಿ ತೋರಿರುವ ಕೆಲವು ವಿಶಿಷ್ಟ ರೂಪಗಳೂ ಕಟ್ಟಡಕ್ಕೆ ಉಪಯೋಗಿಸಿರುವ ಸಾಮಗ್ರಿ ಈ ಕಾಲವನ್ನು ನಿರ್ದೇಶಿಸುವವು.

24. ಲೇಖಕರಿಗೆ ವಿಜಯಪುರದ ಅರ್ಕೇಶ್ವರನ ದರ್ಶನವನ್ನು ಮಾಡಿಕೊಳ್ಳುವ ಹಂಬಲ. ಅವರು ಹೊರಟಾಗ ದಾರಿಯಲ್ಲಿ ಲೇಖಕರು ಸಾರಥಿಗೆ ನಿವೇದಿಸಿಕೊಂಡರು. ಬನ್ನಿ ನಾವೆಲ್ಲರೂ ಮುಂದೆ ಹೋಗಿ ನೋಡಿಕೊಂಡು ಬರೋಣ. ಸಿಕ್ಕರೆ ತಿರುಗಿ ಬಂದು ಇವರನ್ನು ಕರೆದುಕೊಂಡು ಹೋಗೋಣ ಎಂದು ಇಬ್ಬರೂ ಹೋದರು. ರಾತ್ರಿ ಒಂದು ಗಂಟೆ ಸಮಯದಲ್ಲಿ ಎಡಬಲಕ್ಕೆ ಭತ್ತದ ವನಗಳು, ನರಿಗಳ ಊಳಿಡುವಿಕೆ ಸ್ವಲ್ಪದೂರ ಹೋಗುವಷ್ಟರಲ್ಲಿ ಪೊದೆಗಳಲ್ಲಿ ಏನೇನೋ ಬೆಳ್ಳಬೆಳ್ಳಗೆ ಮಸುಕು ಮಸುಕಾಗಿ ಕಂಡಿತು. ಆಗ ಅರ್ಕೇಶ್ವರ ದೇವಾಲಯವನ್ನು ಕಂಡು ಲೇಖಕರು ಮೇಲಿನಂತೆ ಹೇಳಿದರು.

25. ಒಂದು ದಿನ ವಾಸಂತಿಕಾ ದೇವಾಲಯದ ಪೂಜೆಗೆಂದು ಹೋದ ಸಳ ಸುದತ್ತ ಗುರುವಿನ ಬಳಿ ಉಪದೇಶ ಕೇಳುತ್ತ ಕುಳಿತಾಗ ಹುಲಿಯೊಂದು ಅವನೆಡೆಗೆ ಜಿಗಿದು ಬಂದಿತು. ಆಗ ಸುದತ್ತಮುನಿ ತನ್ನ ಕೈಯೊಳಗಿನ ಬೆತ್ತವನ್ನು ಸಳನೆಡೆಗೆ ಚಾಚಿ ಹೊಯ್‌ಸಳ ಎಂದು ಆದೇಶವಿತ್ತನೆಂದೂ, ಸಳನು ಕೂಡಲೇ ಹುಲಿಯನ್ನು ಎದುರಿಸಿ ಅದರ ಗಂಟಲಲ್ಲಿ ಖಡ್ಗವನ್ನು ತುರುಕಿ ಹುಲಿಯನ್ನು ಹೋಯ್ದುದರಿಂದ ಈ ವಂಶಕ್ಕೆ ಹೊಯ್ಸಳ ಎಂಬ ನಾಮಾಂಕಿತವು ಪ್ರಾಪ್ತವಾಯ್ತು.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

26. ಹಿರೇಮಲ್ಲೂರು ಈಶ್ವರನ್

ಹಿರೇಮಲ್ಲೂರು ಈಶ್ವರನ್ ಸಾ.ಶ. 1922 ರಲ್ಲಿ ಹಾವೇರಿ ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಹಿರೇಮಲ್ಲೂರು ಗ್ರಾಮದಲ್ಲಿ ಜನಿಸಿದರು. ಇವರು ಕವಿಕಂಡ ನಾಡು (ಪ್ರವಾಸಕಥನ), ವಿಷನಿಮಿಷಗಳು, ಭಾರತದ ಹಳ್ಳಿಗಳು, ವಲಸೆ ಹೋದ ಕನ್ನಡಿಗನ ಕಥೆ, ಹಾಲಾಹಲ, ರಾಜಾರಾಣಿ ದೇಖೋ, ಶಿವನಬುಟ್ಟಿ, ತಾಯಿನೋಟ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರ 'ಹರಿಹರನ ಕೃತಿಗಳು ಒಂದು ಸಂಖ್ಯಾ ನಿರ್ಣಯ' ಮಹಾಪ್ರಬಂಧಕ್ಕೆ ಡಾಕ್ಟರೇಟ್ ದೊರಕಿದೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

27. ಆಯ್ಕೆ : ಪ್ರಸ್ತುತ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರು ಬರೆದ 'ತಲಕಾಡಿನ ವೈಭವ' ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : 1950 ನೇಯ ಇಸವಿ ಅಕ್ಟೋಬರ್ ತಿಂಗಳ ೨೦ನೇಯ ತಾರೀಖಿನ ದಿನ ಲೇಖಕರು ಶಿವನಸಮುದ್ರದ ಪ್ರವಾಸಿಗರ ನಿಲ್ಮನೆಯಲ್ಲಿ ಕುಳಿತುಕೊಂಡು ಆ ದಿನದ ಪಯಣದ ವಿವರವನ್ನು ಬರೆಯುತ್ತಿದ್ದರು. ಆಗ ರಾತ್ರಿ ಹನ್ನೆರಡು ಹೊಡೆದು ಹದಿನೈದು ನಿಮಿಷವಾಗಿತ್ತು. ಸುತ್ತಣ ಲೋಕವೆಲ್ಲ ಮಲಗಿಕೊಂಡಿದೆ ಎಂದು ಹೇಳುತ್ತಾರೆ.
ಸ್ವಾರಸ್ಯ: ತಾವು ದಿನಚರಿ ಬರೆಯತೊಡಗಿದ ಸಮಯದಲ್ಲಿ ರಾತ್ರಿಯಲ್ಲಿ ನೀರವ ಮೌನ ಆವರಿಸಿತ್ತು ಎಂಬುದನ್ನು ಲೇಖಕರು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

28. ಆಯ್ಕೆ : ಪ್ರಸ್ತುತ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್, ಅವರು ಬರೆದು ತಲಕಾಡಿನ ವೈಭವ ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: 10ನೇ ಶತಮಾನದ ಕೊನೆಯ ಭಾಗದಲ್ಲಿ ಮುದುವೊಳಲುನಿಂದ ತಂದೆತಾಯಿಯರಿಗೆ ಹೇಳದೇ ಬಳೆ ಮಾರುವ ಉದ್ಯಮವನ್ನು ಕೃಷ್ಣಾತೀರದ ಮಳಲಿನಲ್ಲಿ ಮುಚ್ಚಿಟ್ಟು ತಲಕಾಡಿಗೆ ರನ್ನ ಓಡಿಬಂದನು. ಏನೂ ನಂಬಿ ಬಂದ**?** ತಲಕಾಡಿನ ಮಣ್ಣನ್ನು ! ಅಲ್ಲಿ ರಾಯನಿದ್ದಾನೆ. ಅತ್ತಿಮಬ್ಬೆ ಇದ್ದಾಳೆ. ಅಜಿತಸೇನ ಗುರುಗಳ ಶಿಷ್ಯವೃಂದವಿದೆ. ಅದು ಕಲಾಶ್ರೀ ವಿಹರಿಸುವ ನಂದನವನವಾಗಿದೆ ಎಂದು ಉತ್ತರಿಸಿದನು.
ಸ್ವಾರಸ್ಯ: ತಲಕಾಡು ಕಲಾವಿದರಿಗೆ ಆಶ್ರಯ ತಾಣವಾಗಿತ್ತು ಎಂಬುದನ್ನು ಲೇಖಕರು ಸ್ವಾರಸ್ಯಪೂರ್ಣವಾಗಿ ವರ್ಣಿಸಿದ್ದಾರೆ.

29. ಆಯ್ಕೆ : ಪ್ರಸ್ತುತ ವಾಕ್ಯವನ್ನು ಹಿರೇಮಲ್ಲೂರು ಈಶ್ವರನ್ ಅವರು ಬರೆದ 'ತಲಕಾಡಿನ ವೈಭವ' ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಮೂರು ಮೈಲುಗಳ ಆಚೆ ವಿಜಯಪುರ. ಇಲ್ಲಿನ ಅರ್ಕೇಶ್ವರನ ದರ್ಶನವೊಂದು ಮುಗಿದರೆ, ತಲಕಾಡಿನ ಪಂಚಲಿಂಗಗಳ ದರ್ಶನ ಪೂರ್ತಿಯಾಗುವುದೆಂದು ನಂಬಿ ಆ ದಾರಿಯಲ್ಲಿ ನಡೆದಾಗ ಮೂಡಣ ದಿಗಂತದಲ್ಲಿ ಕಾರ್ತಿಕ ಹುಣ್ಣಿಮೆಯೆಡೆಗೆ ನಡೆದಿದ್ದ ಚಂದ್ರಮ ಮೆಲ್ಲಮೆಲ್ಲಗೆ ಮೇರುತ್ತಿದ್ದು, ದಾರಿಕೊರಕಲು , ಮೋಟಾರು ಓಡಲೊಲ್ಲದು, ಸಾರಥಿ ನಿಲ್ಲಿಸಲಾರ. ಅಂತಹ ಕಷ್ಟದ ಪರಿಸ್ಥಿತಿಯಲ್ಲಿ ಮೇಲಿನಂತೆ ಲೇಖಕರು ಹೇಳುತ್ತಾರೆ.
ಸ್ವಾರಸ್ಯ: ಬಹು ಇಕ್ಕಟ್ಟಾದ ಕೊರಕಲಿನ ದಾರಿಯಲ್ಲಿ ಮೋಟಾರ್ ಚಲಿಸುತ್ತಿದ್ದ ಪರಿಯನ್ನು ದಾರಿಯ ಸ್ಥಿತಿಯನ್ನು ಲೇಖಕರು ಸ್ವಾರಸ್ಯ ಪೂರ್ಣವಾಗಿ ಹೇಳಿದ್ದಾರೆ.

30. ಆಯ್ಕೆ : ಪ್ರಸ್ತುತ ವಾಕ್ಯವನ್ನು ಡಾ. ಹಿರೇಮಲ್ಲೂರ ಈಶ್ವರನ್ ಅವರು ಬರೆದಿರುವ ತಲಕಾಡಿನ ವೈಭವ ಎಂಬ ಪ್ರವಾಸ ಕಥನದಿಂದ ಆರಿಸಿಕೊಳ್ಳಲಾಗಿದೆ
ಸಂದರ್ಭ: ಬಸ್ಸು ನಿಂತ ಮೇಲೆ, ಲೇಖಕರು ಸಾರಥಿಯೊಂದಿಗೆ ಅರ್ಕೇಶ್ವರ ದೇವಾಲಯವನ್ನು ಹುಡುಕುತ್ತ ಮುಂದೆ ಮುಂದೆ ಸಾಗಿದರು. ಆಗ ರಾತ್ರಿ ಒಂದು ಗಂಟೆ. ಎಡಕ್ಕೆ ಶಾಲಿವನ ನರಿಗಳು, ಬಯಲಾಟದ ತಾಳಗತಿಗೆ ತಕ್ಕಂತೆ ಕೂಗುವ ಹಿಮ್ಮೇಳದವರಂತೆ ಕೂಗುತಲಿದ್ದವು. ಅನತಿ ದೂರ ಹೋಗುವಷ್ಟರಲ್ಲಿ ಗಿಡ-ಮರಗಳ ಪೊದೆಯಲ್ಲಿ ಏನೋ ಬೆಳ್ಳ-ಬೆಳ್ಳಗೆ ಮಸುಕು ಮಸುಕಾಗಿ ಕಂಡಿತು. ಎದೆ ಜೋರಿನಿಂದ ಹಾರತೊಡಗಿತು. ಧಾವಿಸಿ ಸಮೀಪಿಸಿ ಆನಂದದ ಆವೇಶದಲ್ಲಿ ಚೀರು ಧ್ವನಿಯಿಂದ ಬರ್ರೋ ಗುಡಿ ಸಿಕ್ಕಿತು, ಬರ್ರೋ ದೇವಾಲಯ ದೊರಕಿತು ಎಂದರು
ಸ್ವಾರಸ್ಯ: ಮಧ್ಯರಾತ್ರಿಯಲ್ಲಿ ವಿಜಯಪುರದ ಅರ್ಕೇಶ್ವರ ದೇವಾಲಯವನ್ನು ಕಂಡ ಲೇಖಕರ ಆನಂದದ ಆವೇಶ ಈ ಮಾತಿನಲ್ಲಿ ಸ್ವಾರಸ್ಯ ಪೂರ್ಣವಾಗಿ ಮೂಡಿ ಬಂದಿದೆ.

**ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ :**

31. ನೀವು ಕೈಗೊಂಡ ಪ್ರವಾಸದ ಕುರಿತು ನಿಮ್ಮ ಅನುಭವಗಳೊಂದಿಗೆ ಬರೆಯಿರಿ.
    (ಮಕ್ಕಳ ಬರವಣಿಗೆಯ ಜೊತೆಗೆ ವಾಕ್ಯಗಳ ಜೋಡಣೆಯನ್ನು ಗಮನಿಸಿ ಮೌಲ್ಯಮಾಪನ ಮಾಡಿ)
32. ವಿದ್ಯಾರ್ಥಿಯ ವಿವೇಚನೆಯ ಉತ್ತರವೇ ಉತ್ತರ.

---

## 7. ಅಮ್ಮ

**ಬಹು - ಆಯ್ಕೆ ಪ್ರಶ್ನೆ  (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಎ) ತತ್ಪುರುಷ
2. (ಬಿ) ಹೆಮ್ಮರ
3. (ಡಿ) ದ್ವಿಗು
4. (ಎ) ಹರಟೆ
5. (ಡಿ) ಆದೇಶ ಸಂಧಿ '
6. (ಬಿ) ಶರ್ಕರಾ

**ಸಂಬಂಧೀಪದ ಬರೆಯುವುದು  (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

7. ದ್ವಿಗು ಸಮಾಸ
8. ತತ್ಪುರುಷ ಸಮಾಸ
9. ಗರಿಕೆ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು  (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

10. ಬಾಲ್ಯದಲ್ಲಿ ಲೇಖಕರು ಭಯವಾದಾಗ "ಅರ್ಜುನ ಮಂತ್ರ"ವನ್ನು ಹೇಳಿಕೊಳ್ಳುತ್ತಿದ್ದರು.
11. ಲೇಖಕರ ಮೊದಲವಿ ದ್ಯಾಗುರು ಅಮ್ಮ.
12. ಸಣ್ಣ ಕುಳಿಯೊಳಗಿನ ಕಪ್ಪುಹುಳವನ್ನು 'ತನ್ನಾದೇವಿ' 'ಗುಬ್ಬಿ' ಎಂದೆಲ್ಲಾ ಕರೆಯುತ್ತಿದ್ದರು.
13. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"! ಎಂದು ಮನಸ್ಸಿನಲ್ಲೇ ಪ್ರಾರ್ಥಿಸುತ್ತಾ ಇರುವುದೇ ಲೇಖಕರ ಬಾಲ್ಯದ ಪುನರಾವರ್ತಿತ ದೈನಿಕವಾಗಿತ್ತು.
14. ತಿಂಗಳಿಗೊಮ್ಮೆ ಕಾಫಿ ಬೀಜವನ್ನು ತಂದು ಕೊಡುತ್ತಿದ್ದವರು'. ಬ್ಯಾರಿ'
15. ಹುಲಿಗಳ ಶಬ್ದಕ್ಕೆ ತುಂಬಾ ಸೂಕ್ಷ್ಮವಾಗಿದ್ದ ಜೀವಿಗಳು ದನಗಳು.
16. ಲೇಖಕರಿಗೆ ಅಕ್ಷರಾಭ್ಯಾಸ ಪ್ರಾರಂಭವಾಗಿದ್ದು ಕೆರೆಕೊಪ್ಪದ ಮನೆಯಲ್ಲಿದ್ದಾಗ.
17. ಅಧಿಕೃತವಾಗಿ ಲೇಖಕರ ಮೊದಲ ವಿದ್ಯಾಗುರು ಕೃಷ್ಣಪ್ಪಯ್ಯ ಮೇಷ್ಟ್ರು .
18. ಲೇಖಕರ ಅಮ್ಮನ ಊರು ಮೇಳಿಗೆ

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

19. ಲೇಖಕರು ಕೆರೆಕೊಪ್ಪದ ಮನೆಯಲ್ಲಿದ್ದಾಗಲೇ ಅಕ್ಷರಭ್ಯಾಸ ಪ್ರಾರಂಭವಾಗಿದ್ದು . ಹಬ್ಬದ ದಿನ ಅದು."ಸರಸ್ವತಿ ನಮಸ್ತುಭ್ಯಂ ಪರದೆ ಕಾಮ ರೂಪಿಣಿ, ವಿದ್ಯಾರಂಭಂ ಕರಿಷ್ಯಾಮಿಸಿದ್ಧಿರ್ಭವತು ಮೇಸದಾ". ಎಂದು ಹೇಳಿ ಅಮ್ಮ ನೆಲದಲ್ಲಿ ಮರಳು ಹರಡಿ ಕೂರಿಸಿ ಬೆರಳನ್ನು ಹಿಡಿದುಕೊಂಡು' ಅ' ಎಂಬ ಅಕ್ಷರವನ್ನು ಬರೆಸಿದ್ದಳು. ಹೀಗೆ ಅಮ್ಮ ನಿತ್ಯ ಹೇಗೆ ಮಾಡಿಸುತ್ತಿತ್ತುದರಿಂದ ಶಾಲೆಯಲ್ಲಿ ಅಕ್ಷರ ಕಲಿಯುವುದಕ್ಕೆ ಆರಂಭಿಸುವ ಹೊತ್ತಿಗೆ ಅನೇಕ ಅಕ್ಷರಗಳನ್ನು ಲೇಖಕರು ಕಲಿತು ಬಿಟ್ಟಿದ್ದರು.

20. ಮಳೆಗಾಲದ ಆರಂಭಕ್ಕೆ ಮೊದಲು ಒಣ,ಸೌದೆ, ಅಕ್ಕಿ, ಬೇಳೆ, ಜೋನಿಬೆಲ್ಲವನ್ನು ಸಂಗ್ರಹಿಸುತ್ತಿದ್ದರು. ಮಳೆಗಾಲದ ದಿನಗಳಿಗೆ ಎಂದು ಹಪ್ಪಳ ಸಂಡಿಗೆ ತಿಂಡಿಗಳನ್ನು ಒಣಗಿಸಿ ಇಡುತ್ತಿದ್ದರು .
21. ನಸುಕಿನಲ್ಲಿ ಎದ್ದು ಮನೆಯೆದುರು ಅರಣ್ಯದ ಅಂಚಿನಲ್ಲಿ ಇದ್ದ ರಂಜದ ಮರ ಒಂದರಿಂದ ನೆಲದ ಮೇಲೆ ಚೆಲ್ಲಿರುತ್ತಿದ್ದ ನಕ್ಷತ್ರದ ಆಕಾರದ ರಂಜದ ಹೂಗಳನ್ನು ಆರಿಸುವುದು, ದೂರ್ವೆಯನ್ನು ಹುಲ್ಲಲ್ಲಿ ಹುಡುಕಿ ಕಿತ್ತು ತರುವುದು, ಕೇದಗೆ ಅರಳಿದೆಯೇ? ಮರದ ಮೇಲಿನ ಗೂಡಲ್ಲಿ ಮೊಟ್ಟೆ ಮರಿಯಾಯಿತೆ, ಎಂದು ಬಿದಿರಿನ ಸಂಧಿಯಿಂದ ನಿತ್ಯ ನೋಡುವುದು ಲೇಖಕರಿಗೆ ಖುಷಿಕೊಡುತ್ತಿದ್ದ ಸಂಗತಿಗಳಾಗಿದ್ದವು.

22. ವಿಶೇಷ ಪದಾರ್ಥಗಳೆಲ್ಲವನ್ನು ಕಡವಾಗಿ ಪಡೆಯುವುದು ವರ್ಷಕ್ಕೊಮ್ಮೆ, ಅಂದರೆ ದೀಪಾವಳಿಯಿಂದ ಇನ್ನೊಂದು ದೀಪಾವಳಿಗೆ, ಯುಗಾದಿಯಿಂದ ಇನ್ನೊಂದು ಯುಗಾದಿಗೆ. ಗೌರಿ ಹಬ್ಬದಿಂದ ಇನ್ನೊಂದು ಗೌರಿಹಬ್ಬದವರೆಗೆ ಈ ಕಡದ ಅವಧಿ. ಇವರು ಬೆಳೆದ ಅಡಿಕೆಯನ್ನೋ, ಭತ್ತವನ್ನೋ ಅವರಿಗೆ ಕೊಟ್ಟು ಕಡವನ್ನು ತೀರಿಸುತ್ತಿದ್ದರು .

23. ಸುರಿಯುವ ಮಳೆಯಲ್ಲಿ ಮಕ್ಕಳೆಲ್ಲ ಬಚ್ಚಲಮನೆಯ ಬೆಂಕಿಯ ಎದುರು ಕುಳಿತು ಕೈಗಳನ್ನು ಮುಂಚಾಚಿ ಬೆಂಕಿ ಕಾಯಿಸುತ್ತಿದ್ದರು. ಒಲೆಗೆ ಹಲಸಿನ ಬೀಜಗಳನ್ನು ಹಾಕಿ ಸುಟ್ಟು ತಿನ್ನುತ್ತಾ ದೊಡ್ಡವರು ಹೇಳುವ ಕಥೆಗಳನ್ನು ಬಾಯಿಬಿಟ್ಟುಕೊಂಡು ಆಲಿಸುತ್ತಿದ್ದರು

24. ಕೆರೆಕೊಪ್ಪದಲ್ಲಿ ಹುಲಿಗಳ ಕಾಟ ಬಹಳ ಹೆಚ್ಚಾಗಿತ್ತು. ಹುಲಿಗಳ ಕೂಗು ಕೇಳಿದಾಗ ಕೊಟ್ಟಿಗೆಯ ದನಗಳು ಹೆದರಿ ನಡುಗುತ್ತಿದ್ದವು ಮತ್ತು ಮನೆಯವರು ಭಯದಿಂದ ಇರುತ್ತಿದ್ದರು.

25. ಲೇಖಕನ ಮೊದಲ ವಿದ್ಯಾಗುರು ಅವನ ತಾಯಿ. ತಾಯಿ ಮರಳಿನಲ್ಲಿ ಅವನ ಬೆರಳನ್ನು ಹಿಡಿದು 'ಅ' ಅಕ್ಷರವನ್ನು ಬರೆಯಿಸುವ ಮೂಲಕ ವಿದ್ಯಾಭ್ಯಾಸ ಆರಂಭಿಸಿದರು.
26. ಲೇಖಕನಿಗೆ ರಂಜದ ಹೂಗಳನ್ನು ತಂದು ಪೋಣಿಸುವುದು ಮತ್ತು ಅವುಗಳನ್ನು ಅಮ್ಮನಿಗೆ ಮುಡಿಸುವುದು ಹೆಚ್ಚು ಇಷ್ಟವಾಗಿತ್ತು. ಓದುವುದಕ್ಕಿಂತ ಆಟವಾಡುವುದರಲ್ಲಿ ಅವನಿಗೆ ಹೆಚ್ಚಿನ ಆಸಕ್ತಿ ಇತ್ತು.

27. ಮೇಳಿಗೆಯ ಏಕೋಪಾಧ್ಯಾಯ ಶಾಲೆಯಲ್ಲಿ ಶೇಷಗಿರಿ ಮೇಷ್ಟ್ರು ಅವನಿಗೆ ಪಾಠ ಹೇಳುತ್ತಿದ್ದರು. ತರಗತಿಯಲ್ಲಿ ಕುಳಿತುಕೊಳ್ಳುವುದಕ್ಕಿಂತ ಹೊರಗೆ ಆಟವಾಡಲು ಮಕ್ಕಳು ಹೆಚ್ಚು ಇಷ್ಟಪಡುತ್ತಿದ್ದರು.

28. ಮಳೆಗಾಲ ಆರಂಭವಾಗುವ ಮೊದಲು ಒಣ ಸೌದೆ, ಅಕ್ಕಿ, ಬೇಳೆ ಮತ್ತು ಜೋನಿ ಬೆಲ್ಲವನ್ನು ಸಂಗ್ರಹಿಸುತ್ತಿದ್ದರು. ಮಳೆಯ ಸಮಯದಲ್ಲಿ ಮನೆಯ ಅಗತ್ಯಗಳಿಗೆ ಇವುಗಳನ್ನು ಬಳಸುತ್ತಿದ್ದರು.
29. ಕಾಡು ಹಲಸಿನ ಹಣ್ಣು ಕಾಯಿಯಿಂದ ಹಣ್ಣಿನವರೆಗೂ ವಿವಿಧ ಆಹಾರ ಪದಾರ್ಥಗಳ ತಯಾರಿಕೆಯಲ್ಲಿ ಬಳಸಲಾಗುತ್ತಿತ್ತು. ಅದು ಜನರ ಜೀವನದಲ್ಲಿ ಪ್ರಮುಖ ಆಹಾರವಾಗಿತ್ತು.
30. ರಂಜದ ಹೂವುಗಳನ್ನು ಆರಿಸುವುದು, ದೂರ್ವೆಯನ್ನು ತರುವುದು, ಹಕ್ಕಿಗಳ ಗೂಡುಗಳನ್ನು ನೋಡುವುದು ಮತ್ತು ಮೇಷ್ಟ್ರಿಗಾಗಿ ಕಾಯುವುದು ಅವನ ಬಾಲ್ಯದ ದಿನಚರಿಯಾಗಿತ್ತು.
31. ಕಾಫಿ ಬೀಜಗಳನ್ನು ಹುರಿದು ಪುಡಿ ಮಾಡಿ ಕುದಿಯುವ ನೀರಿನಲ್ಲಿ ಹಾಕಿ ಡಿಕಾಕ್ಷನ್ ತಯಾರಿಸುತ್ತಿದ್ದರು. ನಂತರ ಬಿಸಿ ಎಮ್ಮೆ ಹಾಲು ಬೆರೆಸಿ ನೊರೆ ಬರುವಂತೆ ಕಾಫಿ ಮಾಡುತ್ತಿದ್ದರು.
32. ವಿಶೇಷ ಪದಾರ್ಥಗಳನ್ನು ವರ್ಷಕ್ಕೊಮ್ಮೆ ಕಡವಾಗಿ ಪಡೆಯುತ್ತಿದ್ದರು. ನಂತರ ಭತ್ತ ಅಥವಾ ಅಡಿಕೆಯನ್ನು ಕೊಟ್ಟು ಆ ಕಡವನ್ನು ತೀರಿಸುತ್ತಿದ್ದರು.
33. ಕರಡಿ ಆಡಿಸುವವನು ಕಡುಕಪ್ಪು ಕರಡಿಯ ಮೇಲೆ ಲೇಖಕನನ್ನು ಕೂರಿಸಿ ಅಂಗಳ ಸುತ್ತಿಸಿದನು. ಇದರಿಂದ ಅವನ ಭಯ ನಿವಾರಣೆಯಾಗುವಂತೆ ಮಾಡಿದರು.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

34. ಯು. ಆರ್. ಅನಂತಮೂರ್ತಿ

ಯು. ಆರ್. ಅನಂತಮೂರ್ತಿ ಅವರು 1932 ರಲ್ಲಿ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮೇಳಿಗೆ ಗ್ರಾಮದಲ್ಲಿ ಜನಿಸಿದರು. ಶ್ರೀಯುತರು ಸಂಸ್ಕಾರ, ಭವ, ಭಾರತೀಪುರ, ಪ್ರಶ್ನೆ , ಎಂದೆಂದೂ ಮುಗಿಯದ ಕಥೆ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ, ಇವರಿಗೆ ಭಾರತೀಯ ಜ್ಞಾನಪೀಠ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ ಲಭಿಸಿವೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

35. ಆಯ್ಕೆ: ಈ ವಾಕ್ಯವನ್ನುಡಾ|| ಯು ಆರ್ಅನಂತಮೂರ್ತಿ ಅವರು ಬರೆದಿರುವ 'ಸುರಗಿ' ಎಂಬ ಆತ್ಮಕಥನದಿಂದ ಆಯ್ದ 'ಅಮ್ಮ 'ಎಂಬ ಗದ್ಯಪಾಠದಿಂದ ಆರಿಸಲಾಗಿದೆ .

ಸಂದರ್ಭ-ಲೇಖಕರ ಮೊದಲ ವಿದ್ಯಾಗುರು ಅವರ ಅಮ್ಮ ಅವರು ಕೆರೆಕೊಪ್ಪದ ಮನೆಯಲ್ಲಿದ್ದಾಗ ಅವರಿಗೆ ಅಕ್ಷರ ಅಭ್ಯಾಸ ಪ್ರಾರಂಭವಾಯಿತು. ಆಗ ಸ್ಕೂಲ್ ಇರಲಿಲ್ಲ. ಅವರ ಅಮ್ಮ ಹಬ್ಬದ ದಿನ ನೆಲದಲ್ಲಿ ಮರಳು ಹರಡಿ ಲೇಖಕರನ್ನು ಕೂರಿಸಿ ಅವರ ಬೆರಳು ಹಿಡಿದು ಆ

ಎಂಬ ಅಕ್ಷರವನ್ನು ಬರೆಸುವ ಪೂರ್ವದಲ್ಲಿ ಮೇಲಿನಂತೆ ಶ್ಲೋಕವನ್ನು ಉದ್ದರಿಸಿದ್ದರು. ಎಂದು ಲೇಖಕರು ಅಕ್ಷರ ಅಭ್ಯಾಸ ಪ್ರಾರಂಭಿಸಿದ ದಿನಗಳನ್ನು ಸ್ಮರಿಸಿದ್ದಾರೆ .
ಸ್ವಾರಸ್ಯ—ಅಕ್ಷರಾಭ್ಯಾಸ ಪ್ರಾರಂಭಿಸುವ ಪೂರ್ವದಲ್ಲಿ ವಿದ್ಯಾದಿದೇವತೆ ಸರಸ್ವತಿಯನ್ನು ಸ್ಮರಿಸುವ ಶ್ಲೋಕವನ್ನು ಹೇಳಲಾಗುತ್ತಿತ್ತು ಎಂಬುದು ಈ ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ .

36. ಆಯ್ಕೆ: ಈ ವಾಕ್ಯವನ್ನುಡಾ|| ಯು ಆರ್ಅನಂತಮೂರ್ತಿ ಅವರು ಬರೆದಿರುವ 'ಸುರಗಿ' ಎಂಬ ಆತ್ಮಕಥನದಿಂದ ಆಯ್ದ 'ಅಮ್ಮ 'ಎಂಬ ಗದ್ಯಪಾಠದಿಂದ ಆರಿಸಲಾಗಿದೆ .
ಸಂದರ್ಭ—ಲೇಖಕರು ಚಿಕ್ಕವರಿದ್ದಾಗ ಅವರಿಗೆ ಚೌಲವಾಗಿರಲಿಲ್ಲ. ರಂಜದ ಹೂವನ್ನು ತಂದು ಪೋಣಿಸಿ ದೊಡ್ಡದೊಡ್ಡ ಸರಗಳನ್ನು ಮಾಡಿ ಮನೆಗೆ ಮುಡಿಯುವುದಕ್ಕೆ ಕೊಡುವುದು, ಅವರೂ ಮುಡಿದುಕೊಳ್ಳುವುದು ಎಂದು ವಿವರಿಸುವಾಗ ಮೇಲಿನಂತೆ ಹೇಳಿದ್ದಾರೆ .
ಸ್ವಾರಸ್ಯ- ಚೌಲವಾಗದೆ ಇದ್ದ ಸಂದರ್ಭದಲ್ಲಿ ತನಗೂ ಹೆಣ್ಣುಮಕ್ಕಳಿಗೆ ಇದ್ದಂತೆ ಉದ್ದಕೂದಲು ಇದ್ದ ದಿನಗಳನ್ನುಅವರಮ್ಮಅವರನ್ನು ಹೆಣ್ಣು ಮಗುವಿನಂತೆ ಅಲಂಕರಿಸುತ್ತಾ ದಿನಗಳನ್ನು ಲೇಖಕರು ಇಲ್ಲಿ ಸ್ಮರಿಸಿದ್ದಾರೆ .

37. ಆಯ್ಕೆ: ಈ ವಾಕ್ಯವನ್ನುಡಾ|| ಯು ಆರ್ಅನಂತಮೂರ್ತಿ ಅವರು ಬರೆದಿರುವ 'ಸುರಗಿ' ಎಂಬ ಆತ್ಮಕಥನದಿಂದ ಆಯ್ದ 'ಅಮ್ಮ 'ಎಂಬ ಗದ್ಯಪಾಠದಿಂದ ಆರಿಸಲಾಗಿದೆ .
ಸಂದರ್ಭ- ಕಡೆಗೋಲಿನಿಂದ ಮೊಸರು ಕಡೆಯುವಾಗ ಏಳು ನಾರಾಯಣನೇ ಏಳು, ಲಕ್ಷ್ಮೀರಮಣ ಎಂಬ ಹಾಡನ್ನು ಹೇಳುವುದನ್ನು ಆಲಿಸುತ್ತಾ ರಂಜದ ಹೂವನ್ನು ಬಾಳೆನಾರಿನಲ್ಲಿ ಪೋಣಿಸುತ್ತಾ ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕದಲ್ಲಿ ಕಾಯುತ್ತಾ ಮನಸಿನಲ್ಲಿ ಈ ಮೇಲಿನಂತೆ ಪ್ರಾರ್ಥಿಸುತ್ತಿದ್ದರು
ಸ್ವಾರಸ್ಯ- ಸಹಜವಾಗಿ ತರಗತಿಗಿಂತ ಹೊರಗಡೆ ಹೋಗುವುದನ್ನು ಕಾಯುವುದು ಶಿಕ್ಷಕರು ಶಾಲೆಗೆ ಬರುವುದಿಲ್ಲವೆಂದರೆ ಖುಷಿ ಪಡುವುದು ಬಾಲ್ಯದ ದಿನಗಳಲ್ಲಿ ಸಹಜ ಸ್ವಭಾವವಾಗಿರುವುದು . ಅದರಂತೆ ಲೇಖಕರು ಸಹ ಮೇಷ್ಟರು ಬರದಿದ್ದರೆ ಚೆನ್ನ ಎಂದು ಹೆಚ್ಚಿಸುವುದು ಮೇಲಿನ ವಾಕ್ಯದ ಸ್ವಾರಸ್ಯವಾಗಿದೆ .

38. ಆಯ್ಕೆ: ಈ ವಾಕ್ಯವನ್ನುಡಾ|| ಯು ಆರ್ಅನಂತಮೂರ್ತಿ ಅವರು ಬರೆದಿರುವ 'ಸುರಗಿ' ಎಂಬ ಆತ್ಮಕಥನದಿಂದ ಆಯ್ದ 'ಅಮ್ಮ 'ಎಂಬ ಗದ್ಯಪಾಠದಿಂದ ಆರಿಸಲಾಗಿದೆ .
ಸಂದರ್ಭ- ಲೇಖಕರ ಬಾಲ್ಯದ ದಿನಗಳಲ್ಲಿ ಕೆರೆಕೊಪ್ಪದ ಮನೆಯಲ್ಲಿ ಅವರಿಗೆ ಚರಟದ ಕಾಫಿಯೇ ದೊರೆಯುತ್ತಿದ್ದುದು. ಆದರೆ ಕೆಲವೊಮ್ಮೆ ಅಜ್ಜಯ್ಯನಿಗೆ, ಅವರ ತಂದೆ ಶಾನುಭೋಗರಿಗೆ, ಗೆಳೆಯರಾದ ಊರಿನ ಪಟೇಲರಿಗೆ ವರ್ಜಿನಲ್ ಕಾಫಿ ಪುಡಿಯಿಂದ ಮಾಡಿದ ಕಾಫಿಯನ್ನು ಕೊಡುವಾಗ ಕೆಲವೊಮ್ಮೆ ತನಗೂ ಆ ಭಾಗ್ಯ ದೊರೆಯುತ್ತಿತ್ತು ಎಂದು ಲೇಖಕರು ಮೇಲಿನಂತೆ ಹೇಳಿದ್ದಾರೆ .
ಸ್ವಾರಸ್ಯ – ಚರಟದ ಕಾಫಿಯೇ ದೊರೆತುದ್ದ ಆ ದಿನಗಳಲ್ಲಿ ಕೆಲವೊಮ್ಮೆ ಒರಿಜಿನಲ್ ಕಾಫಿ ಪುಡಿಯಿಂದ ಮಾಡಿದ ಕಾಫಿ ದೊರೆಯುತ್ತಿದ್ದ ಖುಷಿಯನ್ನು ಲೇಖಕ ಸ್ಮರಿಸಿರುವುದು ಸ್ವಾರಸ್ಯಕರವಾಗಿದೆ.

39. ಆಯ್ಕೆ: ಈ ವಾಕ್ಯವನ್ನುಡಾ|| ಯು ಆರ್ಅನಂತಮೂರ್ತಿ ಅವರು ಬರೆದಿರುವ 'ಸುರಗಿ' ಎಂಬ ಆತ್ಮಕಥನದಿಂದ ಆಯ್ದ 'ಅಮ್ಮ 'ಎಂಬ ಗದ್ಯಪಾಠದಿಂದ ಆರಿಸಲಾಗಿದೆ .
ಸಂದರ್ಭ – ಲೇಖಕರ ಬಾಲ್ಯದ ದಿನಗಳಲ್ಲಿ ಅಲೋ ಬಾರಿ ಎಲ್ಲರಿಗೂ ಕಾಫಿ ಮಾಡುವಷ್ಟು ಅನುಕೂಲ ಅವರ ಮನೆಯಲ್ಲಿ ಇರಲಿಲ್ಲ . ಕೆಲವೊಮ್ಮೆ ಅವರ ಅಮ್ಮ ಸ್ವಲ್ಪ ಕಾಫಿ ಕುಡಿಯಲ್ಲಿ

ಒಂದು ಲೋಟ ಕಾಫಿ ಮಾಡಿ ಅಪ್ಪನಿಗೆ ಕೊಟ್ಟು ,ಆ ಕಾಫಿ ಮಾಡಿದ ಚರಟದಲ್ಲಿ ತನಗೆ, ಮತ್ತು ನನ್ನ ಅಜ್ಜನಿಗೆ ಕೊಡುತ್ತಿದ್ದರು. ಅಗ ಅಜ್ಜ ಈ ಮೇಲಿನಂತೆ ಹೇಳುತ್ತಿದ್ದರು .
ಸ್ವಾರಸ್ಯ – ಲೇಖಕರ ಬಾಲ್ಯದ ದಿನಗಳು ಕಷ್ಟವೂ ಅದನ್ನು ಹಿರಿಯರು ಸಮಾಧಾನದಿಂದ ತೆಗೆದುಕೊಳ್ಳುತ್ತಿದ್ದ ರೀತಿಯೂ ಇಲ್ಲಿ ವ್ಯಕ್ತವಾಗಿದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

40. ಹುಲಿಗಳ ಕಾಟ ಮಲೆನಾಡಿನ ಊರುಗಳಲ್ಲಿ ಸಾಮಾನ್ಯವಾಗಿತ್ತು. ಲೇಖಕರ ಅಮ್ಮನಿಗೆ ದೂರದಿಂದ ಹುಲಿಯು ಕೂಗುತ್ತಿದ್ದರೆ ತಿಳಿಯುತ್ತಿತ್ತು. ಹುಲಿಗಳ ಶಬ್ದಕ್ಕೆ ಕೊಟ್ಟಿಗೆಯಲ್ಲಿದ್ದ ದನಗಳು ನಡುಗಲು ಶುರು ಮಾಡುತ್ತಿದ್ದವು. ಅವುಗಳ ಕೊರಳಿನಲ್ಲಿದ್ದ ಗಂಟೆ ಜೋರು ಶಬ್ದ ಮಾಡುತ್ತಿತ್ತು. ಚಿಮಣಿ ದೀಪದ ಬೆಳಕಿನಲ್ಲಿ ಲೇಖಕರು, ಅವರ ಅಮ್ಮ,ಅಜ್ಜ,ಹುಲಿ ಎಲ್ಲಿ ಕೊಟ್ಟಿಗೆಗೂ ನುಗ್ಗಿ ಬಿಡುತ್ತದೇನೋ ಎಂದು ಕಾಯುತ್ತಿದ್ದರು. ಮನೆಗೆ ಆಳುಗಳು ಬಂದರೂ ಯಾರ್ಯಾರ ಮನೆ ದನವನ್ನು ಹುಲಿ ಹಿಡಿಯಿತು ಎಂದು ಮಾತು ಶುರುವಾಗುತ್ತಿತ್ತು. ಹುಲಿ ಮಲೆನಾಡಿನಲ್ಲಿ ನಿಜವಾದ ಹಸಿದಕಣ್ಣುಗಳ ಕೋರೆದಾಡೆಯ ಮುಖವಾಗಿತ್ತು. ಅಜ್ಜ ಹೇಳಿಕೊಟ್ಟಿದ್ದ ಅರ್ಜುನಃಫಲ್ಗುಣೋಪಾರ್ಥ: ಕಿರೀಟೀಶ್ವೇತವಾಹನಃ ಎಂಬ ಭಯವಾದಾಗ ಅದರ ನಿವಾರಣೆಗಾಗಿ ಹೇಳುವ ಮಂತ್ರವನ್ನು ಹೇಳುತ್ತ ಲೇಖಕರು ನಿದ್ದೆ ಹೋಗುತ್ತಿದ್ದರು. ಅಮ್ಮ ಮಾತ್ರ ನಿದ್ದೆ ಮಾಡದೇ ಬೆಳಿಗ್ಗೆ ಎದ್ದು ಕೊಟ್ಟಿಗೆಯಲ್ಲಿ ಎಲ್ಲ ದನಗಳಿವೆ ಎಂಬುದನ್ನು ನೋಡಿ ಮನಸ್ಸಿಗೆ ಸಮಾಧಾನ ತಂದು ಕೊಳ್ಳುತ್ತಿದ್ದರು.
41. ಲೇಖಕರಿಗೆ ಬಾಲ್ಯದಲ್ಲಿ ದೊರೆಯುತ್ತಿದ್ದುದು ಚರಟದ ಕಾಫಿ. ಆದರೆ ಕೆಲವು ಸಾರಿ ಅಜ್ಜಯ್ಯನಿಗೆ ,ಅವರ ತಂದೆ ಶಾನುಭೋಗರಿಗೆ ಅವರ ಗೆಳೆಯರಾದ ಪಟೇಲರಿಗೆ ಒರಿಜಿನಲ್ ಕಾಫಿಪುಡಿಯ ಕಾಫಿ, ಕಾಫಿ ಬೀಜವನ್ನು ಆಗಲೇ ಹುರಿದು, ಆಗಲೇ ಪುಡಿ ಮಾಡಿ, ಆಗಲೇ ಕುದಿಯುವ ನೀರಿಗೆ ಬೆರೆಸಿ ಮುಚ್ಚಿಟ್ಟು, ಅದರ ಗಸಿ ಇಳಿಯುವಷ್ಟು ಹೊತ್ತು ಕಾದು ಅದಕ್ಕಾಗಿಯೇ ಇದ್ದ ಬಟ್ಟೆಗೆ ಸುರಿದು ಹಿಂಡಿ, ಡಿಕಾಕ್ಷನ್ ಇಳಿಯುವಾಗ ಕಳೆದುಕೊಂಡ ಉಷ್ಣಾಂಶವನ್ನು ಬಿಸಿಬಿಸಿ ಎಮ್ಮೆ ಹಾಲು ಬೆರೆಸಿ ಹದಮಾಡಿ ಕಾಪಿ ಮಾಡುವುದು ಸಾಮಾನ್ಯವಾಗಿತ್ತು. ಈ ಕಾಫಿಯನ್ನು ಫಳಫಳ ಹೊಳೆಯುವ ಒಂದು ಹಿತ್ತಾಳೆ ಲೋಟದಿಂದ ಇನ್ನೊಂದು ಲೋಟಕ್ಕೆ ನೊರೆ ಬರುವಂತೆ ಎತ್ತರದಿಂದ ಹಲವು ಸಾರಿ ಹುಯ್ದು ಕುಡಿಯಲು ಅಗತ್ಯವಾದ ಬಿಸಿಗದನ್ನು ಇಳಿಸಿ ಸೆರಗು ಮುಚ್ಚಿದ ಕೈಯ ಮೇಲೆ ಅದನ್ನುಇಟ್ಟುಕೊಂಡು ಹಸನ್ಮುಖಿಯಾಗಿ ಲೇಖಕರ ಅಮ್ಮ ಕುಡಿಯಲು ಕೊಡುತ್ತಿದ್ದರು. ಒಂದೊಂದು ಸಲ ಈ ಕಾಫಿಯ ಪುಣ್ಯ ಲೇಖಕರಿಗೆ ಸಿಗುತ್ತಿತ್ತು. ಇಲ್ಲವಾದರೆ ನಿತ್ಯ ಈ ಕಾಫಿಯ ಘಮಘಮದ ವಾಸನೆಯನ್ನು ಕೊಂಚವಾದರೂ ಉಳಿಸಿಕೊಂಡ ಅದರ ಚರಟ ಕುದಿಸಿ ಮಾಡಿದ ಕಾಫಿಯ ಸೇವನೆ ಇರುತ್ತಿತ್ತು.
42. ವಿದ್ಯಾರ್ಥಿಯ ಅನಿಸಿಕೆಗಳು ಅಂತಿಮ ಉತ್ತರವಾಗಿರಲಿ.

## 8. ಸಪ್ತಾಕ್ಷರಿ ಮಂತ್ರ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಎ) ಪೂರ್ಣವಿರಾಮ
2. (ಬಿ) ಅರ್ಧ ವಿರಾಮ
3. (ಸಿ) ಅಲ್ಪವಿರಾಮ
4. (ಎ) ಪ್ರಶ್ನಾರ್ಥಕ
5. (ಬಿ) ಭಾವಸೂಚಕ
6. (ಎ) ಉದ್ಧರಣ ಚಿಹ್ನೆ
7. (ಡಿ) ವಾಕ್ಯವೇಷ್ಟನ
8. ಎ) ಆವರಣ
9. (ಎ) ವಿವರಣಾತ್ಮಕ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

10. ಲೋಪ ಸಂಧಿ
11. ಅಚ್ಚರಿ
12. ಶ್ರೀಗಂಧ
13. ಕರ್ಮಧಾರೆಯ ಸಮಾಸ
14. ದ್ವಿಗುಸಮಾಸ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

15. ರಾಘವನ ಯಜ್ಞಾಶ್ವ ಅರಣ್ಯಕ ಮುನಿಯ ಆಶ್ರಮವನ್ನು ಹೊಕ್ಕಿತ್ತು.
16. "ಸಾವಿರ ಸಾವಿರ ಸಂಖ್ಯೆಯಲ್ಲಿದ್ದ ಸೈನಿಕರಿಗೆ ಭೋಜನವನ್ನು ಅರಣ್ಯಕ ಮುನಿಗೆ ಹೇಗೆ ಸಾಧ್ಯವಾಯಿತು" ಎಂದು ಮನೋರಮೆಗೆ ಸಂದೇಹ ಮೂಡಿತು.
17. ಬೇಡಿದ ವಸ್ತುಗಳನ್ನು ನೀಡುವ ಶಕ್ತಿ ಮುನಿಗಳಲ್ಲಿದೆ.
18. ಬೇಡಿದ ವಸ್ತುವನ್ನು ನೀಡುವ ಮಂತ್ರದ ಶಕ್ತಿ ಇರುವುದರಿಂದ ತಪಸ್ವಿಗಳಿಗೆ ಬೇರೆ ಗೋಡವೆ ಇಲ್ಲ.
19. ಮುದ್ದಣ್ಣನಿಗೆ ಸಿದ್ಧಿಸಿದ ಮಂತ್ರದ ಹೆಸರು 'ಭವತಿ ಭಿಕ್ಷಾಂದೇಹಿ'.
20. ಮುದ್ದಣ್ಣನ ಹೆಂಡತಿಯ ಹೆಸರು ಮನೋರಮೆ.
21. ರಾಘವನ ಯಜ್ಞದ ತುರಂಗವು ಅರಣ್ಯಕನ ಪುಣ್ಯಾಶ್ರಮಕ್ಕೆ ಪ್ರವೇಶಿಸಿತು.
22. ಶತ್ರುಘ್ನನು ಅರಣ್ಯಕ ಮುನಿಯ ದರ್ಶನಕ್ಕಾಗಿ ಆಶ್ರಮಕ್ಕೆ ಹೋದನು.
23. ಅರಣ್ಯಕನು ಅಭ್ಯಾಗತರನ್ನು ಆತಿಥ್ಯದಿಂದ ಸತ್ಕರಿಸಿದನು.
24. ಬಂದವರಿಗೆ ಕೈಕಾಲು ತೊಳೆಯಲು ನೀರು ನೀಡಿ, ಊಟ ನೀಡಿ, ಗೌರವದಿಂದ ನಡೆದುಕೊಳ್ಳುವುದೇ ಅತಿಥ್ಯವಾಗಿದೆ.
25. ಅರಣ್ಯಕನು ಶತ್ರುಘ್ನನ ಸೈನ್ಯಕ್ಕೆ ಇಚ್ಛೆಯಂತೆ ಮೃಷ್ಟಾನ್ನ ಭೋಜನವನ್ನು ನೀಡಿದನು.

26. ಮುನಿಗಳು ತಮ್ಮ ಜಪ-ತಪದ ಮಂತ್ರದ ಬಲದಿಂದ ಅಗತ್ಯಗಳನ್ನು ಪೂರೈಸಿಕೊಳ್ಳುತ್ತಾರೆ ಎಂದು ಮುದ್ದಣ ಹೇಳುತ್ತಾನೆ.
27. ಮನೋರಮೆ ಮುನಿಗಳು ಮಂತ್ರದ ಬಲದಿಂದ ಎಲ್ಲವನ್ನೂ ಪಡೆಯುವುದರ ಬಗ್ಗೆ ಅಚ್ಚರಿ ವ್ಯಕ್ತಪಡಿಸಿದಳು.
28. ಮುದ್ದಣನ ಪ್ರಕಾರ ಕವಿಗಳಿಗೆ "ಭವತಿ ಭಿಕ್ಷಾಂ ದೇಹಿ"  ಎಂಬ ಸಪ್ತಾಕ್ಷರಿ ಮಂತ್ರ ಸಿದ್ಧಿಸಿದೆ.
29. ಮುದ್ದಣನು ತನ್ನ ಮಂತ್ರವನ್ನು ತನ್ನ ಗುರುವಿನಿಂದ ಎಳವೆಯಲ್ಲಿಯೇ ಪಡೆದನು.
30. ಮನೋರಮೆ ಮುದ್ದಣನನ್ನು ಕವಿಯೋ ಅಥವಾ ಸರ್ವಜ್ಞನೋ ಎಂದು ಹೊಗಳಿದಳು.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು  (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

31. ಬಂದವರಿಗೆ ಕೈಗೆ, ಕಾಲಿಗೆ ನೀರು ಕೊಟ್ಟು ಕುಳ್ಳಿರಿಸಿ, ಅವರಿಗೆ ರುಚಿಯಾದ ಊಟವನ್ನುಉಣಬಡಿಸಿ,ಹೂವಿನಿಂದ ಅಲಂಕರಿಸಿ,ಪರಿಮಳ ಭರಿತವಾದ ಶ್ರೀಗಂಧವನ್ನು ಸಿಂಪಡಿಸಿ, ಜೊತೆಯಲ್ಲಿದ್ದು ಅವರೊಡನೆ ಹಿತವಾಗಿ ಮಾತನಾಡಿ ಉಪಚರಿಸಿದನು.

32. ಕವಿಗಳು ತಮಗೆ ಒಲಿದಿರುವ ಒಂದು ಮಂತ್ರದಿಂದ ಮೂರು  ಜಗವನ್ನು ನಾಶಮಾಡುವ,ಹೊಗಳುವ, ತೆಗಳುವ, ಕೊಳ್ಳುವ, ಆಳುವ, ತಾಳುವ,ಹೂಳುವ,ಹೇಳುವ, ಬಾಳುವ, ಶೃಂಗಾರವನ್ನು ವರ್ಣಿಸುವ ಶಕ್ತಿ ಇದೆ ಎಂದು ಕವಿಗಳ ಮಂತ್ರದ ಮಹಿಮೆಯನ್ನು ಕುರಿತು ಮುದ್ದಣ್ಣ ಹೇಳಿದ್ದಾನೆ.
33. ಮುದ್ದಣ್ಣನು ತನಗೆ ಒಲಿದಿರುವ ಮಂತ್ರ 'ಭವತ್ತಿ ಭಿಕ್ಷಾಂದೇಹಿ' ಎಂದು ಮನೋರಮೆಗೆ ಹೇಳಿದಾಗ ಅವಳು ಅರೆಮುನಿಸಿನಿಂದ:"ಹೋಗು, ರಮಣ. ನಿನ್ನ ಮಾತನ್ನು ಕೇಳಿ ನಾನು ನಿಜವೆಂದೇ ಭಾವಿಸಿದೆ. ನೀನು ಮೋಸದ, ಕೊಂಕಿನ ಮಾತನ್ನು ಈ ರೀತಿಯಲ್ಲಿ ಹೇಳುತ್ತಿರುವೆ ಎಂದು ನನಗೆ ತಿಳಿಯಲಿಲ್ಲ. ನೀನು ಕವಿಯೋ ಅಥವಾ ಹಾಸ್ಯಗಾರನೋ" ಎಂದು ಪ್ರತಿಕ್ರಿಯೆಸುತ್ತಾಳೆ.
34. ರಾಘವನ ಯಜ್ಞದ ತುರಂಗವು ಅರಣ್ಯಕ ಮುನಿಯ ಪುಣ್ಯಾಶ್ರಮವನ್ನು ಪ್ರವೇಶಿಸಿತು. ಶತ್ರುಘ್ನನು ಮುನಿಯ ದರ್ಶನಕ್ಕಾಗಿ ಆಶ್ರಮಕ್ಕೆ ಹೋಗಿ ಅವರಿಗೆ ನಮಸ್ಕರಿಸಿದನು.
35. ಅತಿಥ್ಯವೆಂದರೆ ಕೇವಲ ಬಾಯಿಯ ಉಪಚಾರವಲ್ಲ ಎಂದು ಮುದ್ದಣ ಹೇಳಿದನು. ಬಂದವರಿಗೆ ನೀರು ನೀಡಿ, ಊಟ ಮಾಡಿಸಿ, ಗೌರವದಿಂದ ನಡೆದುಕೊಳ್ಳುವುದೇ ನಿಜವಾದ ಆತಿಥ್ಯವೆಂದು ತಿಳಿಸಿದನು.
36. ಮುನಿಗಳು ತಮ್ಮ ಜಪ ಮತ್ತು ತಪಸ್ಸಿನ ಮಂತ್ರದ ಶಕ್ತಿಯಿಂದ ತಮಗೆ ಬೇಕಾದ ವಸ್ತುಗಳನ್ನು ಪಡೆಯುತ್ತಾರೆ ಎಂದು ಮುದ್ದಣ ಹೇಳಿದನು. ಅವರ ಜೀವನದಲ್ಲಿ ಯಾವುದೇ ಕೊರತೆ ಇರುವುದಿಲ್ಲ ಎಂದು ತಿಳಿಸಿದನು.
37. ಮುದ್ದಣನು ಕವಿಗಳಿಗೂ ಒಂದು ವಿಶೇಷ ಮಂತ್ರವಿದೆ ಎಂದು ಹೇಳಿದಾಗ ಮನೋರಮೆಗೆ ಕುತೂಹಲ ಉಂಟಾಯಿತು. ಆ ಮಂತ್ರ ಯಾವುದು ಎಂದು ತಿಳಿಯಲು ಅವಳು ಕೇಳಿದಳು.
38. "ಭವತಿ ಭಿಕ್ಷಾಂ ದೇಹಿ"  ಎಂಬುದು ಕವಿಗಳಿಗೆ ಸಿದ್ಧಿಸಿದ ಸಪ್ತಾಕ್ಷರಿ ಮಂತ್ರ ಎಂದು ಮುದ್ದಣ ಹೇಳಿದನು. ಈ ಮಂತ್ರವು ಕವಿಗಳ ವಿಶೇಷ ಶಕ್ತಿಯನ್ನು ಸೂಚಿಸುತ್ತದೆ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

39. ಮುದ್ದಣ್ಣ
ಮುದ್ದಣ್ಣನ ಪೂರ್ಣ ಹೆಸರು, ಲಕ್ಷ್ಮೀನಾರಾಯಣಪ್ಪ. ಉಡುಪಿ ಜಿಲ್ಲೆಯ ಕಾರ್ಕಳ ತಾಲೂಕಿನಲ್ಲಿರುವ ನಂದಳಿಕೆಯಲ್ಲಿ 1870 ಜನವರಿ 24ರಂದು ಜನಿಸಿದರು. ತಂದೆ: ತಿಮ್ಮಪ್ಪಯ್ಯ ಮತ್ತು ತಾಯಿ : ಮಹಾಲಕ್ಷ್ಮಿ ಈತನನ್ನು ತಾಯಿ 'ಮುದ್ದಣ್ಣ' ಎಂದು ಮುದ್ದಿನಿಂದ ಕರೆಯುತ್ತಿದ್ದಳು . ಹಾಗಾಗಿ ಕನ್ನಡ ನಾಡು ಈತನನ್ನು 'ಮುದ್ದಣ' ಎಂದೇ ಕರೆಯುತು . ಈತನ ಪ್ರಮುಖ ಕೃತಿಗಳೆಂದರೆ 'ರತ್ನಾವತಿಕಲ್ಯಾಣ' ಮತ್ತು 'ಕುಮಾರವಿಜಯ'(ಯಕ್ಷಗಾನ ಪ್ರಸಂಗಗಳು), ವಾರ್ಧಕ ಷಟ್ಪದಿಯಲ್ಲಿ ರಚಿಸಲ್ಪಟ್ಟ 'ಶ್ರೀರಾಮಪಟ್ಟಾಭಿಷೇಕಂ' ಕಾವ್ಯ, ಹಳಗನ್ನಡ ಶೈಲಿಯಲ್ಲಿ ಬರೆಯಲ್ಪಟ್ಟ 'ಅದ್ಭುತರಾಮಾಯಣ' ಮತ್ತು 'ಶ್ರೀರಾಮಶ್ವಮೇಧಂ' ಗದ್ಯಕಾವ್ಯಗಳು ಮುದ್ದಣ್ಣನಿಂದ ರಚಿತವಾದವು.'ಹೊಸಗನ್ನಡದ ಅರುಣೋದಯದ ಮುಂಗೋಳಿ' ಎಂಬ ಪ್ರಶಂಸೆಗೆ ಭಾಜನನಾಗಿದ್ದಾನೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

40. ಆಯ್ಕೆ : ಈ ವಾಕ್ಯವನ್ನು 'ಪ್ರೊ.ಜಿ. ವೆಂಕಟಸುಬ್ಬಯ್ಯ' ಅವರು ಸಂಪಾದಿಸಿರುವ ಮುದ್ದಣ ಭಂಡಾರ ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಮುದ್ದಣ್ಣನು ಮನೋರಮೆಗೆ ರಾಮಶ್ವಮೇಧದ ಕಥೆ ಹೇಳುತ್ತಾ ಯಜ್ಞದ ಕುದುರೆ ಅರಣ್ಯಕ ಮುನಿಗಳು ಆಶ್ರಮವನ್ನು ಪ್ರವೇಶಿಸಿದಾಗ ಶತ್ರುಘ್ನ ಮೊದಲಾದವರನ್ನು ಮುನಿಗಳ ಸತ್ಕರಿಸಿದ ಬಗೆಯನ್ನು ವರ್ಣಿಸಿದ ಸಂದರ್ಭದಲ್ಲಿ ಮನೋರಮೆ ಈ ಮಾತನ್ನು ಹೇಳುತ್ತಾಳೆ. ಆಶ್ರಮ ವಾಸಿಗಳಾಗಿದ್ದುಕೊಂಡು ಸಾವಿರಾರು ಜನರಿಗೆ ಸತ್ಕರಿಸಲು ಹೇಗೆ ಸಾಧ್ಯವಾಯಿತು? ಎಂದು ಅಚ್ಚರಿಗೊಂಡು ಅವಳು ಹೇಗೆ ಕೇಳುತ್ತಾಳೆ.
ಸ್ವಾರಸ್ಯ : ಮುನಿಯಾದವರು ಸಾವಿರಾರು ಜನರಿಗೆ ಸತ್ಕಾರ ಮಾಡಿದ ಪ್ರಸಂಗವನ್ನು ಕೇಳಿದ ಮನೋರಮೆ ಅಚ್ಚರಿಪಟ್ಟಿರುವುದು ಇಲ್ಲಿ ಸ್ವಾರಸ್ಯವಾಗಿದೆ.

41. ಆಯ್ಕೆ: ಈ ವಾಕ್ಯವನ್ನು ಪ್ರೊ.ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ ಮುದ್ದಣ ಭಂಡಾರ ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಸಾವಿರಾರು ಜನರಿಗೆ ಸತ್ಕಾರ ಮಾಡಲು ಅರಣ್ಯಕ ಮುನಿಗೆ ಹೇಗೆ ಸಾಧ್ಯವಾಯಿತು ಎಂದು ಮನೋರಮೆ ಮುದ್ದಣ್ಣನನ್ನು ಕೇಳಿದಾಗ ಮುನಿಗಳಿಗೆ ಹಲವಾರು ಮಂತ್ರಗಳ ಶಕ್ತಿ ಇದೆ ಎಂದು ಮುದ್ದಣ ಹೇಳುತ್ತಾನೆ. ಆಗ ಮನೋರಮೆ " ಓಹೋ ಆದ್ದರಿಂದಲೇ ತಪಸ್ವಿಗಳಿಗೆ ಯಾವುದೇ ಚಿಂತೆ ಇಲ್ಲ" ಎಂದು ಹೇಳಿದ ಸಂದರ್ಭದಲ್ಲಿ ಮುದ್ದಣ್ಣನೂ ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ : ಮುನಿಯಾದವರಿಗೆ ಮಂತ್ರಗಳ ಶಕ್ತಿ ಇರುವುದರಲ್ಲಿ ತಪ್ಪೇನಿದೆ? ಎಂದು ಮುದ್ದಣ್ಣ ಸಮರ್ಥಿಸಿರುವುದು ಇಲ್ಲಿ ಸ್ವಾರಸ್ಯವಾಗಿದೆ.

42. ಆಯ್ಕೆ: ಈ ವಾಕ್ಯವನ್ನು ಪ್ರೋ.ಜಿ. ವೆಂಕಟಸುಬ್ಬಯ್ಯ ಅವರು ಸಂಪಾದಿಸಿರುವ ಮುದ್ದಣ ಭಂಡಾರ ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ : ಅರಣ್ಯಕ ಮುನಿಗಳು ತಮಗಿರುವ ಮಂತ್ರ ಶಕ್ತಿಯಿಂದ ಅತಿಥಿಗಳಿಗೆ ಸತ್ಕಾರ ಮಾಡಲು ಸಾಧ್ಯವಾಯಿತು ಎಂದು ಹೇಳಿದಾಗ ಮನೋರಮೆಯೂ ' ತಪಸ್ವಿಗಳಿಗೇನು ಸಂಸಾರದ ಚಿಂತೆಯೇ? ನಿಮ್ಮಂತಹ ಕವಿಗಳು ಸಂಸಾರದ ಗೊಡವೆ ಇಲ್ಲದೆ ಹಾಳು ಕಥೆ ಬರೆದುಕೊಂಡಿರುವಿರಿ. ನೀವು ಕೂಡ ಹಿರಿಯ ಮುನಿಗಳಿಂದ ಮಂತ್ರಶಕ್ತಿ ಉಪದೇಶ ಪಡೆದುಕೊಂಡರಾಗದೆ?' ಎಂದು ಛೇಡಿಸಿದ ಸಂದರ್ಭದಲ್ಲಿ ಮುದ್ದಣ್ಣನು ಈ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ : ಹಿಂದೆ ಕವಿ-ಸಾಹಿತಿಗಳು ಸಾಹಿತ್ಯರಚನೆಯಲ್ಲಿ ಮುಳುಗಿದ್ದು ಬಡತನದಿಂದ ಸಂಸಾರವನ್ನು ನಡೆಸುತ್ತಿದ್ದ ಬಗೆಇಲ್ಲಿ ಸ್ವಾರಸ್ಯಕರವಾಗಿ ವ್ಯಕ್ತವಾಗಿದೆ.

43. ಆಯ್ಕೆ : ಈ ವಾಕ್ಯವನ್ನು 'ಪ್ರೋ.ಜಿ. ವೆಂಕಟಸುಬ್ಬಯ್ಯ' ಅವರು ಸಂಪಾದಿಸಿರುವ 'ಮುದ್ದಣ್ಣ ಭಂಡಾರ' ಕೃತಿಯಿಂದ ಆರಿಸಲಾದ 'ಸಪ್ತಾಕ್ಷರಿ ಮಂತ್ರ' ಎಂಬ ಗದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಸಂದರ್ಭ: ಮುದ್ದಣ್ಣನು ತನಗೆ ಒಲಿದಿರುವ ಮಂತ್ರ 'ಭವತಿ ಭಿಕ್ಷಾಂದೇಹಿ' ಎಂದು ಹೇಳಿದಾಗ ಮನೋರಮೆ ಹುಸಿಮುನಿಸಿನಿಂದ "ನಿನ್ನ ಮಾತನ್ನು ನಿಜವೆಂದೇ ನಂಬಿದೆ. ನೀನೇನು ಕವಿಯೋ ಹಾಸ್ಯಗಾರನು ಎಂದು ಹೇಳುತ್ತಾಳೆ. ಆಸಂದರ್ಭದಲ್ಲಿಮುದ್ದಣ್ಣನು "ಈ ಹಾಸ್ಯ ಇಲ್ಲಿಗೆ ಸಾಕ. ಮುಂದಿನ ಕಥೆಯನ್ನು ಕೇಳು' ಎಂದು ಕತೆ ಮುಂದುವರೆಸುತ್ತಾನೆ.
ಸ್ವಾರಸ್ಯ : ಇಲ್ಲಿ ಮುದ್ದಣ್ಣನ ಹಾಸ್ಯ ಪ್ರಜ್ಞೆ, ಮುದ್ದಣ್ಣ ಮತ್ತು ಆತನ ಪತ್ನಿಯ ನಡುವಿನ ಸರಸ-ಸಲಾಪಗಳು ಸ್ವಾರಸ್ಯಕರವಾಗಿ ಮೂಡಿಬಂದಿದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

44. ರಾಘವನ ಯಜ್ಞಾಶ್ವವು ಅರಣ್ಯಕ ಎಂಬ ತಪಸ್ವಿಯ ಪವಿತ್ರ ಆಶ್ರಮಕ್ಕೆ ಪ್ರವೇಶಿಸುತ್ತಿರುವುದನ್ನು ಕಂಡು ಶತ್ರುಘ್ನ ಮೊದಲಾದವರು ಮುನಿಗಳ ದರ್ಶನಕ್ಕೆಂದು ಆಶ್ರಮದ ಒಳಗೆ ಹೋದರು. ಆಗಮಿಸಿದ ಈ ಅತಿಥಿಗಳನ್ನು ಅರಣ್ಯಕ ಮುನಿಗಳು ಬಹಳ ಗೌರವದಿಂದ ಬರಮಾಡಿಕೊಂಡು ತಮ್ಮ ಆತಿಥ್ಯದಿಂದ ಸತ್ಕರಿಸಿದರು. ಆಗ ಮನೋರಮೆಯೂ "ನನ್ನ ಚೆಲುವ! ಆತಿತ್ಯವೆಂದರೇನು? ಬರಿಯ ಬಾಯುಪಚಾರವೇ"? ಎಂದಾಗ ಮುದ್ದಣ:"ಅಲ್ಲ ಅಲ್ಲ, ಬರಿಯ ಬಾಯುಪಚಾರವಲ್ಲ. ಬಂದವರಿಗೆ ಕೈಗೆ, ಕಾಲಿಗೆ ನೀರು ಕೊಟ್ಟು ಕೊಳ್ಳಿರಿಸಿ, ಅವರಿಗೆ ರುಚಿಯಾದ ಊಟವನ್ನು ಉಣಬಡಿಸಿ ಜೊತೆಯಲ್ಲಿದ್ದು ಅವರೊಡನೆ ಹಿತವಾಗಿ ಮಾತನಾಡಿ, ಗೌರವಿಸಿವುದು".ಎನ್ನುತ್ತಾನೆ. ಆಗ ಆಶ್ಚರ್ಯಗೊಂಡ ಮನೋರಮೆ:"ಹಾಗಿದ್ದರೆ, ಸಾವಿರ ಸಾವಿರ ಲೆಕ್ಕದಲ್ಲಿದ್ದ ಅಷ್ಟೊಂದು ದೊಡ್ಡ ಸೈನ್ಯಕ್ಕೆ ಊಟಕೊಟ್ಟು ತೃಪ್ತಿಪಡಿಸಿದನೆ? ಅವನಿಗೆ ಇದು ಹೇಗೆ ಸಾಧ್ಯವಾಯಿತು"? ಎನ್ನುತ್ತಾಳೆ. ಅದಕ್ಕೆ ಮುದ್ದಣ್ಣನು "ಮತ್ತೇನು! ಮುನಿಗಳ ಒಂದು ಜಪ-ತಪ -ಮಂತ್ರದ ಶಕ್ತಿಯೇನು ಕಿರಿದೇ?ಬೇಡಿದ ದ್ರವ್ಯವನ್ನು ಕೂಡಲೆತಂದುಕೊಡುವುದು".ಎಂದು ಸಮರ್ಥಿಸುತ್ತಾನೆ.

45. ರಾಮಶ್ವಮೇಧ ಕಥೆಯನ್ನು ಹೇಳ ಹೊರಡುವ ಕವಿ ಕಾವ್ಯದ ಮಧ್ಯದಲ್ಲಿ ತಮ್ಮ ಜೀವನದ ವಾಸ್ತವತೆಯನ್ನು ಬಿಚ್ಚಿಡುವುದು ಒಂದು ವೈಶಿಷ್ಟ್ಯವೇ ಸರಿ. ಇದು ಮುದ್ದಣ್ಣ ಮನೋರಮೆಯರ ಸಲ್ಲಾಪವೆಂದೇ ಖ್ಯಾತಿ ಪಡೆದಿದೆ. ಕಾವ್ಯಧರ್ಮದೊಳಗೆ ಜೀವನ ಧರ್ಮವನ್ನು ಬೆರೆಸಿ ಹೇಳುವ ಕವಿಯ ಕಲೆಗಾರಿಕೆಯನ್ನು ಮುದ್ದಣ್ಣನಲ್ಲಿ ಕಾಣಬಹುದಾಗಿದೆ. ಎಷ್ಟೇ ಕಷ್ಟಗಳಿದ್ದರೂ ಮನಸ್ಸನ್ನೇ ಸುಡುವ ಚಿಂತೆಯಿದ್ದರೂ ನವಿರಾದ ಹಾಸ್ಯ ಅವುಗಳನ್ನು ಸ್ವಲ್ಪಕಾಲ ಮರೆಯುವಂತೆ ಮಾಡುತ್ತದೆ.' ಶ್ರೀರಾಮಶ್ವಮೇಧ' ಕೃತಿಯಲ್ಲಿ ಮಡದಿ ಮನೋರಮೆ ಯೊಡನೆ ಸಂವಾದದಲ್ಲಿ ನಿರತನಾದಾಗ ವ್ಯಕ್ತವಾಗುವ ಮಾತುಗಳು ಮುದ್ದಣ್ಣನ ಕಷ್ಟ ಜೀವನದ ಪ್ರತಿಕವೇ ಆಗಿವೆ. ಪ್ರಕೃತ ಗದ್ಯಭಾಗದಲ್ಲಿ 'ಸಪ್ತಾಕ್ಷರಿ ಮಂತ್ರದ' ಶ್ರೇಷ್ಠತೆಯನ್ನು ನೆಪದೊಂದಿಗೆ ತನ್ನ ಹಾಗೂ ಅಂದಿನ ಕವಿಗಳ ದಾರಿದ್ರ್ಯವನ್ನು ಪರೋಕ್ಷವಾಗಿ ಮುದ್ದಣ ವ್ಯಕ್ತಪಡಿಸಿದ್ದಾನೆ. ಹೊರನೋಟಕ್ಕೆ ಕುತೂಹಲಕಾರಿಯೂ ಹಾಸ್ಯಮಯವೂ ಆಗಿದ್ದರೆ ಒಳಗೆ ದಾರುಣ ವ್ಯಥೆಯ ಕಥೆಯಲ್ಲಿ ಅಡಗಿರುವುದನ್ನು ಇಲ್ಲಿ ಕಾಣಬಹುದು.

---

# ಪದ್ಯಭಾಗ
## 5. ಬಹುಮಾನ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. **(**ಬಿ) ಕೋಗಿಲೆ
2. **(**ಎ) ತೀರ್ಥರೂಪ
3. **(**ಡಿ) ಮಾತೃಶ್ರೀ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

4. ಕೋಗಿಲೆ
5. ವ್ಯಾವಹಾರಿಕ ಪತ್ರ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

6. ಜಗತ್ತು ಜುಮ್ಮೆನ್ನುವುದು ಕೋಗಿಲೆಯ ಧ್ವನಿಗೆ
7. ಕೋಗಿಲೆಯ ಕೂಗನ್ನು ನೀರವ ಪರ್ವತ ಕಾನನ ಶ್ರೇಣಿಗಳು ಮಾರ್ಧನಿಸಿತು
8. ಗಾನವನು ಕೇಳಿದ ನೀಲಾಕಾಶ ಸುಮ್ಮನೆ ಮಾತನಾಡದೆ ಬಣ್ಣಿಸುತ್ತಿತ್ತು
9. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ತನ್ನ ತೆರೆಗಳಿಂದಚ ಪ್ಪಾಳೆ ತಟ್ಟಿತು
10. ಕೋಗಿಲೆಯ ಗಾನವನ್ನು ಆಲಿಸಿದ ಮನುಷ್ಯ“ಮಲೆಗಳಲಿಲಿಯುವ ಓ ಕೋಗಿಲೆಯೇ, ಬಲು ಚಲುವಿದೆ ನಿನ್ನೀಗಾನ !ಗಾನವು ಇಂಗ್ಲೀಷಿಗೆ ತರ್ಜುಮೆ ಮಾಡಿದರೆ ದೊರೆಯುವುದು ನೊಬೆಲ್ ಬಹುಮಾನ. “ಅರಣ್ಯ ರೋಧನವು ಸುಮ್ಮನೆ ಹಾಡುವೆ !ಕೇಳುವರಾರಿಲ್ಲಿ ?ಎಂದುಹೇಳಿದನು
11. ಮನುಷ್ಯನ ಮಾತಿಗೆ ಕೋಗಿಲೆ ಕುಹೂ ಎಂದು ಹಾಡಿ ಉತ್ತರಿಸಿತು

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

12. ಕೋಗಿಲೆಯ ಗಾನಕ್ಕೆ ಕುಹೂ ಎಂಬ ಕುಕಿಲವಾಣಿಯ ಶಬ್ದ ಕೇಳಿರೋ ಮಾಂಚನದಿಂದ ಜಗ ಜುಮ್ಎಂದಿತು. ಅದರ ಗಾನವ ಕೇಳಿ ಮಹಾದಾಕಾಶ ಮೂಕ ವಿಸ್ಮಿತವಾಗಿ ಬಣ್ಣಿಸತೊಡಗಿತು. ಹೀಗೆ ಬಗೆಬಗೆಯ ಕಂದಕದಲ್ಲಿದ್ದ ಸರೋವರ ತನ್ನ ತೆರೆಯ ಮೂಲಕ ಚಪ್ಪಾಳೆ ತಟ್ಟಿತು. ಹೀಗೆ ಬಗೆಬಗೆಯಾಗಿ ಕೋಗಿಲೆಯ ಗಾನಕ್ಕೆ ಪ್ರಕೃತಿ ಸ್ಪಂದಿಸಿತು.
13. ಕೋಗಿಲೆ ಯಗಾನವನ್ನು ಆಲಿಸಿ ನೊಂದು ಮನುಷ್ಯನು ಮಲೆಗಳಲ್ಲಿಲುಯ್ಯುವ ಓಕೋಗಿಲೆಯೇ ಬಲುಚಂದ. ನಿನ್ನೆ ಗಾನವು ಇಂಗ್ಲೀಷಿಗೆ ತರ್ಜುಮೆ ಮಾಡಿದರೆ ದೊರೆಯುವುದು ನೊಬೆಲ್ ಬಹುಮಾನ. ಅರಣ್ಯರೋಧನವು ಸುಮ್ಮನೆ ಹಾಡುವೆ ಹೇಳುವವರಾರಿಲ್ಲಿ ಎಂದನು.

14. ಕೋಗಿಲೆಯ ಮಧುರವಾದ ಗಾನವನ್ನು ಕೇಳುವವರಿಲ್ಲದ ಕಾಡಿನಲ್ಲಿ, ಅದರಗಾನ ಅರಣ್ಯ ರೋಧನವೆಂದ, ಮಾನವನ ಮಾತಿಗೆ ಯಾವ ಪ್ರತಿಕ್ರಿಯೆಯು ನೀಡದೆಕು ಹೂ ಎಂದಷ್ಟೇ ಕೂಗಿ ಹಾಡುತ್ತದೆ. ಹಾಡುವುದು ನನ್ನ ಕರ್ಮ ಯಾರು ಕೇಳಲಿ ಕೇಳದಿರಲಿ ಎನ್ನುವಂತಿತ್ತು. ಮನುಷ್ಯನ ಮಾತಿಗೆ ಕೋಗಿಲೆಯ ಪ್ರತಿಕ್ರಿಯೆಯಾಗಿತ್ತು.

15. ಕೋಕಿಲೆಯ “ಕುಹೂ! ಕುಹೂ!” ಎಂಬ ಮಧುರ ಧ್ವನಿಯನ್ನು ಕೇಳಿ ಜಗತ್ತು ಜುಮ್ಮೆಂದು ಪ್ರತಿಕ್ರಿಯಿಸಿತು. ನೀರವವಾಗಿದ್ದ ಪರ್ವತ ಮತ್ತು ಕಾಡುಗಳು ಸಂತೋಷದಿಂದ ತುಂಬಿದವು.
16. ಕೋಕಿಲೆಯ ಗಾನವನ್ನು ಕೇಳಿದ ಮಹಾಂಬರವು ಮೌನವಾಗಿ ಅದರ ಸೌಂದರ್ಯವನ್ನು ವರ್ಣಿಸಿತು. ಅದರ ಗಾನದಿಂದ ಪ್ರಕೃತಿಯೆಲ್ಲಾ ಮುದಗೊಂಡಿತು.
17. ಕೋಗಿಲೆಯ ಗಾನವು ತುಂಬಾ ಸುಂದರವಾಗಿದೆ ಎಂದು ಅವನು ಹೇಳಿದನು. ಅದನ್ನು ಇಂಗ್ಲಿಷಿಗೆ ಅನುವಾದಿಸಿದರೆ ನೋಬೆಲ್ ಬಹುಮಾನ ದೊರೆಯಬಹುದು ಎಂದು ಅಭಿಪ್ರಾಯಪಟ್ಟನು.
18. ಕೋಗಿಲೆಯ ಹಾಡನ್ನು ಕೇಳಲು ಯಾರೂ ಇಲ್ಲದ ಕಾಡಿನಲ್ಲಿ ಹಾಡುವುದು ವ್ಯರ್ಥ ಎಂದು ಆಲಿಸಿದವನು ಭಾವಿಸಿದನು. ಆದ್ದರಿಂದ ಅದನ್ನು ಅರಣ್ಯ ರೋದನ ಎಂದು ಕರೆದನು.
19. ಕೋಗಿಲೆ ತನ್ನ ಮಧುರವಾದ “ಕುಹೂ” ಧ್ವನಿಯಿಂದಲೇ ಉತ್ತರಿಸಿತು. ಅದರ ಗಾನದಿಂದ ಜಗತ್ತು ಮತ್ತೆ ತಲ್ಲಣಗೊಂಡಿತು.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

20. ಕುವೆಂಪು
ಕುವೆಂಪು ರವರು 1904 ಡಿಸೆಂಬರ್ 29ರಂದು ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು.ಇವರು ಬರೆದಿರುವ ಕೃತಿಗಳೆಂದರೆ ಶ್ರೀರಾಮಾಯಣದರ್ಶನಂ, ಪಾಂಚಜನ್ಯ, ನವಿಲು, ಕಲಾಸುಂದರಿ, ಅಗ್ನಿಹಂಸ ,ಪಕ್ಷಿಕಾಶಿ, ಅನಿಕೇತನ, ಕಾನೂನು ಸುಬ್ಬಮ್ಮ ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಇವರಿಗೆ ದೊರೆತ ಪ್ರಶಸ್ತಿಗಳೆಂದರೆ ಜ್ಞಾನಪೀಠ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ,ಪಂಪ ಪ್ರಶಸ್ತಿ ,ಪದ್ಮಭೂಷಣ ಪ್ರಶಸ್ತಿ, ಇನ್ನೂ ಮುಂತಾದ ಪ್ರಶಸ್ತಿಗಳು ಲಭಿಸಿವೆ

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

21. ಆಯ್ಕೆ : ಕುವೆಂಪು ರವರ ನವಿಲು ಕವನ ಸಂಕಲದಿಂದ ಆರಿಸಿದ ಬಹುಮಾನ ಎಂಬ ಪದ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ
ಸಂದರ್ಭ: ಕೋಗಿಲೆಯ ಕುಹು ಎಂಬ ಸುಮಧುರವಾಣಿಯನ್ನು ಕೇಳಿದ ಜಗವೇ ರೋಮಾಂಚನಗೊಂಡಿತು. ಅದರ ಇಂಪಾದಗಳಿಗೆ ನೀರವ ಪರ್ವತ ಕಾನೂನಗಳೆಲ್ಲವೂ ಅತ್ಯಂತ ಮುಗದಿಂದ ಮರುದ್ವನಿ ನೀಡಿದವು ಎಂದು ಹೇಳುವ ಸಂದರ್ಭದಲ್ಲಿಈ ಮಾತು ಬಂದಿದೆ
ಸ್ವಾರಸ್ಯ : ಜನ ಪ್ರದೇಶದಲ್ಲಿ ಮರುದ್ವನಿ ಸಹಜವಾದ ರೂ ಕವಿಯ ಕೋಗಿಲೆಯ ಇಂಪಾದ ನಾದಕ್ಕೆ ಸಂತೋಷಗೊಂಡು ಪ್ರತಿನಿಧಿಸುವುದುಇ ಲ್ಲಿನ ಸ್ವಾರಸ್ಯವಾಗಿದೆ

22. ಆಯ್ಕೆ : ಕುವೆಂಪು ರವರ ನವಿಲು ಕವನ ಸಂಕಲದಿಂದ ಆರಿಸಿದ ಬಹುಮಾನ ಎಂಬ ಪದ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ
ಸಂದರ್ಭ: ಕೋಗಿಲೆಯು ತನ್ನನ್ನೇ ಮರೆತು ಸುಮಧುರವಾಗಿ ಕುಹೂಕುಹೂ ಎಂದು ಹಾಡುತ್ತಿದ್ದಾಗ ಅದನ್ನು ಆಲಿಸಿದ ವ್ಯಕ್ತಿ ಓರ್ವ ಕೋಗಿಲೆಯ ಗಾನ ಮಾಧುರ್ಯದ ಬಗ್ಗೆ ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ
ಸ್ವಾರಸ್ಯ : ಕೋಗಿಲೆಯ ಗಾನ ಮಾಧುರ್ಯ ಎಷ್ಟು ಸೊಗಸಾಗಿತ್ತು ಎಂಬುದನ್ನು ಕೊಂಡಾಡುವುದು ಇಲ್ಲಿನ ಸ್ವಾರಸ್ಯವಾಗಿದೆ

23. ಆಯ್ಕೆ : ಕುವೆಂಪು ರವರ ನವಿಲು ಕವನ ಸಂಕಲದಿಂದ ಆರಿಸಿದ ಬಹುಮಾನ ಎಂಬ ಪದ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ
ಸಂದರ್ಭ : ಕಾನನ ಪರ್ವತ ಶ್ರೇಣಿಯಲ್ಲಿ ಮೈಮರೆತು ಕುಹೂಕುಹೂ ಎಂದು ಆಡುತ್ತಿದ್ದ ಕೋಗಿಲೆಯ ಇಂಪಾದ ಧ್ವನಿಯನ್ನು ಆಲಿಸಿದ ಮಾನವ ಮನನೊಂದು ಕೋಗಿಲೆಗೆ ನಿನ್ನ ಗಾನ ಸುಮಧುರವಾಗಿದೆ. ಅದ್ಭುತವಾಗಿದೆ. ಇದನ್ನು ಇಂಗ್ಲಿಷ್ನಲ್ಲಿ ಹಾಡಿದರೆ ನೊಬೆಲ್ ಬಹುಮಾನ ದೊರೆಯುತ್ತಿತ್ತು ಎಂದು ಹೇಳುವ ಸಂದರ್ಭದಲ್ಲಿ ಈ ಮಾತು ಬಂದಿದೆ
ಸ್ವಾರಸ್ಯ : ಯಾರು ಕೇಳದ ಯಾರು ಇಲ್ಲದ ಜಾಗದಲ್ಲಿ ಹಾಡುವುದು ಅತ್ಯಂತ ನಿರರ್ಥಕ ಎಂಬುದು ಇಲ್ಲಿ ಸ್ವಾರಸ್ಯಕರವಾಗಿ ಮೂಡಿಬಂದಿದೆ

24. ಆಯ್ಕೆ : ಕುವೆಂಪು ರವರ ನವಿಲು ಕವನ ಸಂಕಲದಿಂದ ಆರಿಸಿದ ಬಹುಮಾನ ಎಂಬ ಪದ್ಯಭಾಗದಿಂದ ಈ ಮೇಲಿನ ವಾಕ್ಯವನ್ನು ಆರಿಸಿಕೊಳ್ಳಲಾಗಿದೆ
ಸಂದರ್ಭ : ಕೋಗಿಲೆಯ ಗಾನವನ್ನು ಆಲಿಸಿದ ಮಾನವ ನೀನು ಇಂಗ್ಲೀಷಿನಲ್ಲಿ ಹಾಡಿದರೆ ನೊಬೆಲ್ ಬರುತ್ತಿತ್ತು ಎಂದು ಹೇಳಿದ ಮಾತಿಗೆ ಕೋಗಿಲೆ ಏನನ್ನು ಮತ್ತೊಮ್ಮೆ ಕುಹೂ ಎಂದು ಹಾಡತೊಡಗಿತು. ಅದರ ಆ ಧ್ವನಿ ಪರಿಸರದಲ್ಲಿ ಒಂದು ಸಂಚಲವನ್ನು ಉಂಟು ಮಾಡಿತು. ಕೋಗಿಲೆಯ ಅಂತರಂಗದ. ಈ ಸಂದರ್ಭದಲ್ಲಿ. ಈ ಮಾತು ಬಂದಿದೆ.
ಸ್ವಾರಸ್ಯ : ಕೃತಕವಲ್ಲದ ಸ್ವಾಭಾವಿಕ ಕ್ರಿಯೆಯು ಅಭಿವ್ಯಕ್ತಿಗೆ ಪೂರಕ ಮತ್ತು ಜಗತ್ತು ತಾನಾಗಿಯೇ ಸಂತೋಷವಾಗಿ ಒಪ್ಪುತ್ತದೆ ಎಂಬುದು ಇಲ್ಲಿನ ಸ್ವಾರಸ್ಯವಾಗಿದೆ

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

25. ಕುಹೂ ಕುಹೂ ಎಂದು ಹಾಡುವ ಕೋಗಿಲೆಯ ದಾನಕ್ಕೆ ಜಗವೇ ರೋಮಾಂಚನದಿಂದ ಜುಮ್ಮೆಂದಿತು . ಪರ್ವತ ಕಾನನ ಶ್ರೇಣಿಗಳು ಮಾರ್ಧನಿಸಿದವು. ಅದರ ಗಾನವ ಕೇಳಿ ಮಹದಾಕಾಶ ಮೂಕವಿಸ್ಮಿತವಾಗಿ ಬಣ್ಣಿಸತೊಡಗಿತು. ಹೀಗೆ ಬಗೆಬಗೆಯ ಕಂದಕದಲ್ಲಿದ್ದ ಸರೋವರತನ್ನ ತೆರೆಯ ಮೂಲಕ ಚಪ್ಪಾಳೆ ತಟ್ಟಿತು. ತನ್ನನ್ನು ತಾನೇ ಮರೆತು ತನ್ನ ಮಧುರ ದನಿಯಲ್ಲಿ ಕೋಗಿಲೆಯು ಆಡುತ್ತಿತ್ತು. ಇಂತಹ ಸುಮಧುರ ದನಿಯನ್ನು ಆಲಿಸಿದ ಮಾನವನೊಬ್ಬ" ಮಾಲೆಗಳಲುಲಿಯುವ ಒಗೆಳೆಯ ನಿನ್ನೀಗಾನವು ಇಂಗ್ಲೀಷಿಗೆ ತರ್ಜುಮೆ ಮಾಡಿದರೆ ದೊರೆಯುವುದು ನೊಬೆಲ್ಬಹುಮಾನ ಅರಣ್ಯ ರೋಧನ ಸುಮ್ಮನೆ ಹಾಡುವೆ ಕೇಳುವರಾರಿಲ್ಲಿ" ಎಂದನು ಈ ರೀತಿಯಾಗಿ ಕೋಗಿಲೆಯ ಗಾನಕ್ಕೆ ಮನುಷ್ಯ ಮತ್ತು ಪ್ರಕೃತಿ ಪ್ರತಿಕ್ರಿಯೆಗಳನ್ನು ಮಾಡುತ್ತಾ ಇದ್ದವು

26. ನಿಸರ್ಗದತ್ತವಾದ ಕೋಗಿಲೆಯ ಗಾನಕ್ಕೆ ಮರುಳಾಗದವರಿಲ್ಲ. ಅದು ತನ್ನ ಪಾಡಿಗೆ ತಾನು ಕಾಡುಮೇಡುಗಳಲ್ಲಿ ಆಡಿಕೊಂಡಿರುತ್ತದೆ ಅದಕ್ಕೆ ಯಾವುದೇ ಗೊಡವೆ ಇಲ್ಲ ಯಾರೇ ಕೇಳಲಿ ಕೇಳದಿರಲಿ ಹಾಡುವುದು ತನ್ನ ಕರ್ಮವೆಂದು ಅರಿತು ಆಡುತ್ತಿರುತ್ತದೆ. ಇದನ್ನು ಆಲಿಸಿದ ಮಾನವ ನೀನು ಇಂಗ್ಲೀಷಿನಲ್ಲಿ ಹಾಡಿದರೆ ನಿನಗೆನೋಬೆಲ್ಬಹುಮಾನ ಬರುತ್ತದೆ ಎಂದು ಹೇಳುತ್ತಾನೆ ಆದರೆ ಆ ಮಾತಿಗೆ ಕೋಗಿಲೆಯೋ ಯಾವ ಪ್ರತಿಕ್ರಿಯೆಯನ್ನು ಕೊಡದೆ ಮತ್ತೊಮ್ಮೆ ಎಂದಷ್ಟೇ ಕೇಳುತ್ತದೆ. ಆದರೆ ಆ ಧ್ವನಿಯು ಇಡಿ ಪರಿಸರದಲ್ಲಿ ಒಂದು ಸಂಚಲನವನ್ನು ನಿರ್ಮಿಸುತ್ತದೆ. ನಾವು ಯಾವ ಕೆಲಸದಲ್ಲಿ ಪರಿಣಿತರು ಅದನ್ನು ಅತ್ಯಂತ ವಿಶ್ವಾಸದಿಂದ

ಪ್ರಾಮಾಣಿಕತೆಯಿಂದ ಮಾಡಬೇಕು ಎಂಬುದು ಈ ಕವಿಯ ಆಶಯ ಲೋಕದ ಟೀಕೆ ಟಿಪ್ಪಣಿಗಳಿಗೆ ತಲೆಕೆಡಿಸಿಕೊಳ್ಳಬಾರದು ಎಂಬ ಧ್ವನಿಯು ಹೊರಡುತ್ತದೆ. ನಮ್ಮ ಅಭಿವ್ಯಕ್ತಿಯನ್ನು ಸಹಜ ಭಾಷೆ ಮಾತೃಭಾಷೆ ಹಾಡು ಭಾಷೆಯಲ್ಲಿ ಮಾಡಿದರೆ ಹಾಗೂ ಜೀವಂತಿಕೆಯಿಂದ ಕೂಡಿರುತ್ತದೆ. ಅನ್ಯಭಾಷೆಯಲ್ಲಿ ಅಭಿವ್ಯಕ್ತಿ ಎಷ್ಟೆಂದರೂ ಕೃತಕ . ಇದು ಕೋಗಿಲೆಯ “ಕುಹೂ” ವಾಣೀಯಿಂದ ನಾವು ಅರ್ಥೈಸಿಕೊಳ್ಳಬೇಕಾದದ್ದು.

27. ನಿಮ್ಮನ್ನು ಮಾಗಡಿಯ ಲಕ್ಷ್ಮೀನಗರದ ನಿವಾಸಿ ‘ಅಂಜಲಿ’ ಎಂದು ಭಾವಿಸಿಕೊಂಡು’ ನಿಮ್ಮ ಕಾಲೋನಿಗೆ ‘ಸಾರ್ವಜನಿಕ ಗ್ರಂಥಾಲಯ’ ಮಂಜೂರು ಮಾಡುವಂತೆ ಕೋರಿ ತಹಶೀಲ್ದಾರರಿಗೊಂದು ಮನವಿ ಪತ್ರ ಬರೆಯಿರಿ

ಅಥವಾ

ನಿಮ್ಮನ್ನು ರಾಮನಗರದ ಗಾಂಧಿನಗರದ ಸರ್ಕಾರಿ ಪ್ರೌಢಶಾಲೆಯ ‘ಸಚಿನ್’ ಎಂದು ಭಾವಿಸಿಕೊಂಡು**,** ಚನ್ನಪಟ್ಟಣದ ಚೈತನ್ಯನಗರದಲ್ಲಿ ವಾಸವಿರುವ ನಿಮ್ಮ ತಂದೆಗೆ ಶೈಕ್ಷಣಿಕ ಪ್ರವಾಸಕ್ಕೆ ತೆರಳಲು ಐದು ಸಾವಿರ ರೂಪಾಯಿಗಳನ್ನು ಕಳಿಸಿಕೊಡುವಂತೆ ಕೋರಿ ಪತ್ರ ಬರೆಯಿರಿ

**ವ್ಯಾವಹಾರಿಕ/ ಮನವಿ ಪತ್ರ :**

| | |
|---|---|
| ಇಂದ , ಗೆ, ಸಂಬೋದನೆ, ವಿಷಯ | 1 ಅಂಕ |
| ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| ವಂದನೆಯೊಂದಿಗೆ ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| **ಒಟ್ಟು** | **5 ಅಂಕಗಳು** |

ಅಥವಾ

**ಖಾಸಗಿ/ವೈಯಕ್ತಿಕ ಪತ್ರ :**

| | |
|---|---|
| ಇಂದ ವಿಳಾಸ , ದಿನಾಂಕ, ಸಂಬೋದನೆ,, ಕ್ಷೇಮ ವಿಚಾರ | 1 ಅಂಕ |
| ಪತ್ರದ ಒಡಲು, ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ,, ಸಹಿ, ಹೊರ ವಿಳಾಸ | 1 ಅಂಕ |
| ಭಾಷಾಶೈಲಿಗೆ, ಪದಬಳಕೆ, ವಿನ್ಯಾಸ | 1 ಅಂಕ |
| **ಒಟ್ಟು** | **5 ಅಂಕಗಳು** |

# 6. ಗೆಳೆತನ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. **(ಸಿ)** ಪರಲೋಕ
2. **(ಸಿ)** ಪ್ರೀತಿ

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

3. ಕಬ್ಬ
4. ಸೂರ್ಯ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

5. ಗೆಳೆತನದ ಸುವಿಶಾಲ ಆಲದಡಿ ಪಸರಿಸಿಹ ನೆರಳಿನ ತಂಪಿನಲ್ಲಿ ಕವಿ ತಂಗಿದ್ದಾರೆ
6. ಜೀವನದ ಮುಗಿಯದ ಕಷ್ಟ ನೋವುಗಳ ಕಾವನ್ನು ಕವಿ ಮೌನದಲ್ಲಿ ನುಂಗಿದ್ದಾರೆ
7. ಜೀವನದ ಮನಸ್ಸಿನ ಭಾವನೆ ಬಾನಿನಂತೆ ಅಗಲವಾಗಿದೆ
8. ಉಪ್ಪಿಗಿಂತಲು ರುಚಿಯು ತಾಯಿಗಿಂತ ಲುಬಂಧುವಿಲ್ಲ ಎಂಬುದು ಉಪ್ಪು ಮತ್ತು ತಾಯಿಯ ಬಗೆಗಿರುವ ಗಾದೆ
9. ಇಹಲೋಕಕ್ಕಿರುವ ಅಮೃತ ಗೆಳೆತನ
10. ಶಿಕ್ಷಕರು "**ಸ್ಮಾರ್ಟ್‌ಫೋನ್‌ನ ಸದುಪಯೋಗ**" ಎಂಬ ವಿಷಯದ ಕುರಿತು ಪ್ರಾಜೆಕ್ಟ್ ನೀಡಿದರು . ಅನನ್ಯಾ ಅದನ್ನು .ಜವಾಬ್ದಾರಿಯಿಂದ ಮಾಡಲು ನಿರ್ಧರಿಸಿದಳು
11. **Google Chrome** ಮೂಲಕ ಅಗತ್ಯ ಮಾಹಿತಿಯನ್ನು ಹುಡುಕಿದಳು .**YouTube** ನಲ್ಲಿ ಪಾಠದ ವಿಡಿಯೊಗಳನ್ನು ನೋಡಿ ವಿಷಯವನ್ನು ಸುಲಭವಾಗಿ ಅರ್ಥಮಾಡಿಕೊಂಡಳು.
12. **WhatsApp** ಮೂಲಕ ಸ್ನೇಹಿತರೊಂದಿಗೆ ಸಂದೇಶಗಳನ್ನು ಹಂಚಿಕೊಂಡು ಸಂದೇಹಗಳನ್ನು ನಿವಾರಿಸಿಕೊಂಡಳು .**Telegram** ಮೂಲಕ ಹೆಚ್ಚುವರಿ ಅಧ್ಯಯನ ಸಾಮಗ್ರಿಗಳನ್ನು ಪಡೆದುಕೊಂಡಳು.
13. **Facebook** ನಲ್ಲಿ ಪ್ರಾಜೆಕ್ಟ್‌ಗೆ ಬೇಕಾದ ಮಾಹಿತಿಯನ್ನು ಕಂಡುಹಿಡಿದಳು .**Instagram** ನಲ್ಲಿ ತನ್ನ ಚಿತ್ರಗಳನ್ನು ಹಂಚಿಕೊಂಡರೂ ವೈಯಕ್ತಿಕ ಮಾಹಿತಿಯನ್ನು ಸುರಕ್ಷಿತವಾಗಿಟ್ಟಳು.
14. **Gmail** ಮೂಲಕ ಶಿಕ್ಷಕರ ಟಿಪ್ಪಣಿಗಳನ್ನು ಸ್ವೀಕರಿಸಿದಳು .**Google Maps** ಸಹಾಯದಿಂದ ಗ್ರಂಥಾಲಯದ ಸರಿಯಾದ ಮಾರ್ಗವನ್ನು ಕಂಡುಹಿಡಿದಳು.
15. ಗ್ರಂಥಾಲಯದಲ್ಲಿ ಅಗತ್ಯ ಪುಸ್ತಕಗಳನ್ನು ಖರೀದಿಸಲು **Google Pay** ಮೂಲಕ ಸುರಕ್ಷಿತವಾಗಿ ಹಣ ಪಾವತಿಸಿದಳು.
16. **Spotify** ನಲ್ಲಿ ಮಧುರ ಸಂಗೀತವನ್ನು ಕೇಳಿ ಮನಸ್ಸಿಗೆ ವಿಶ್ರಾಂತಿ ನೀಡಿದಳು .**Netflix** ನಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಸಾಕ್ಷ್ಯಚಿತ್ರವನ್ನು ವೀಕ್ಷಿಸಿ ತನ್ನ ಜ್ಞಾನವನ್ನು ಹೆಚ್ಚಿಸಿಕೊಂಡಳು.
17. ಸ್ಮಾರ್ಟ್‌ಫೋನ್ ಅನ್ನು ಶಿಕ್ಷಣ ಮತ್ತು ಒಳ್ಳೆಯ ಉದ್ದೇಶಗಳಿಗೆ ಜವಾಬ್ದಾರಿಯಿಂದ ಬಳಸಿದ್ದಕ್ಕಾಗಿ ಶಿಕ್ಷಕರು ಅವಳನ್ನು ಪ್ರಶಂಸಿಸಿದರು.
18. ಸ್ಮಾರ್ಟ್‌ಫೋನ್ ಶಿಕ್ಷಣ, ಸಂವಹನ, ಮಾಹಿತಿ ಹುಡುಕುವುದು, ಸುರಕ್ಷಿತ ಹಣ ಪಾವತಿ ಮತ್ತು ದೈನಂದಿನ ಕೆಲಸಗಳನ್ನು ಸುಲಭಗೊಳಿಸಲು ಸಹಾಯಕವಾಗಿದೆ.

19. ಸ್ಮಾರ್ಟ್‌ಫೋನ್ ಅನ್ನು ಸಮಯದ ಮಿತಿಯಲ್ಲಿ, ಜವಾಬ್ದಾರಿಯಿಂದ ಹಾಗೂ ಉತ್ತಮ ಉದ್ದೇಶಗಳಿಗೆ ಬಳಸಿದರೆ ಅದು ನಮ್ಮ ಜೀವನದ ಅತ್ಯುತ್ತಮ ಸ್ನೇಹಿತನಾಗುತ್ತದೆ.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

20. ಗೆಳೆತನದಲ್ಲಿ ವಂಚನೆ ಇಲ್ಲ ಚಂಚಲತೆ ಎಳ್ಳಷ್ಟೂ ಇಲ್ಲ ಮೇಲು ಕೀಳುಗಳು ಎನ್ನುವ ಬೇದವು ಇಲ್ಲ ಆಹಂಮಿಕೆಯ ನೆಪವಿಲ್ಲ ದ್ವೇಷಗುಣಕ್ಕೆ ಆಸ್ಪದವಿಲ್ಲ ಸಣ್ಣತನಕ್ಕೆ ಸಂಕೋಚಕ್ಕೆಅವಕಾಶವಿಲ್ಲ

21. ಉಪ್ಪಿಗಿಂತಲು ರುಚಿಯಿಲ್ಲ ತಾಯಿಗಿಂತಲೂ ಬಂದುವಿಲ್ಲ ಎನ್ನುವ ಗಾದೆ ಮಾತಿದೆ ಗೆಳೆತನದ ಶುಚಿ ರುಚಿಯು ಇದಕ್ಕೂ ಮಿಗಿಲಾಗಿರುವಂಥದ್ದು. ಎಲ್ಲರಿಗೂ ಇದು ಅರ್ಥವಾಗಲಾರದು ಯಾರು ಈ ಸವಿಯನ್ನು ಸವಿದಿರುವರು ಅಂಥವರಿಗೆ ಮಾತ್ರವೇ ಇದರ ಅರಿವಾಗಲು ಸಾಧ್ಯ.

22. ಸ್ನೇಹಿತರು ಪರಸ್ಪರ ಪ್ರೀತಿಯಿಂದ ನಡೆದುಕೊಳ್ಳಬೇಕು ಜೀವನದ ಆಗುಹೋಗುಗಳಿಗೆ ಭಾಗದಂತೆ ಕುಗ್ಗದಂತೆ ಒಬ್ಬರಿಗೊಬ್ಬರು ಹೆಗಲು ಕೊಟ್ಟು ಬದುಕಬೇಕು. ಸುಖದಲ್ಲಿ ಸಂತಸ ಪಟ್ಟು ದುಃಖದಲ್ಲಿ ಪರಸ್ಪರ ನೆರವಾಗಿ ಸಹಭಾಗಿಗಳಾದರೆ ಜೀವನ ರಸ ಪಾಕವಾಗುವುದು

23. ಗೆಳೆತನವು ವಿಶಾಲವಾದ ಆಲದ ಮರವಿದ್ದಂತೆ ಇಲ್ಲಿ ಪ್ರೀತಿ ವಿಶ್ವಾಸದ ತಂಪಾದ ನೆರಳು ಇರುವುದು ಜೀವನದ ಕೊನೆಯಿಲ್ಲದ ಭವಣೆ ನೋವುಗಳನ್ನು ಗೆಳೆತನದ ಸ್ಪರ್ಶದಿಂದ ಮರೆಯಬಹುದು ಗೆಳೆತನವು ಇಹಲೋಕದಲ್ಲಿರುವ ಅಮೃತದ ಹಾಗೆ ಇರುವುದು ಗೆಳೆತನವನ್ನು ತೊರೆದರೆ ಜೀವನ ಮರಣದಂತೆ

24. ಗೆಳೆತನದಲ್ಲಿ ಗೆಳೆಯರಿಬ್ಬರ ಮನಸ್ಸಿನ ಭಾವವು ಸ್ಫಟಿಕದಂತೆ ಶುದ್ಧವಾಗಿರುತ್ತದೆ ಎದೆಯು ಕಲ್ಮಶಗಳಿಲ್ಲದ ತಿಳಿಯಾದ ಹೊಳದಂತಿರುತ್ತದೆ. ಮನವು ಬಾನಿನಂತೆ ಅಗಲವಾಗಿರುತ್ತದೆ. ಬೆಳದಿಂಗಳಿನಂತೆ ತಂಪಾಗಿರುತ್ತದೆ. ನಿಜವಾದ ಗೆಳೆಯರಲ್ಲಿ ವಂಚನೆ ಚಂಚಲತೆ ಮೇಲುಕೀಳುಗಳೆನ್ನುವ ಭೇದಭಾವನೆಗೆ ಅವಕಾಶವಿಲ್ಲ ಅಹಂಕಾರ ದ್ವೇಷದಭಾವನೆಗೆ ಆಸ್ಪದವಿಲ್ಲ

25. ಜೀವನದ ಆಗು ಹೋಗುಗಳನ್ನು ಸಹಿಸಿಕೊಳ್ಳುವ ಮನೋಭಾವನೆ ಗೆಳೆಯರಲ್ಲಿರುತ್ತದೆ. ಗೆಳೆಯರು ಪರಸ್ಪರ ಸಂತಸ ಹಾಗೂ ದುಃಖಗಳಲ್ಲಿ ಸಹಭಾಗಿಗಳಾಗಿರುತ್ತಾರೆ. ಹಾಗಾದಾಗ ಜೀವನವು ರಸದ ಪಾಕದಂತಿರುತ್ತದೆ. ಗೆಳೆಯರು ಸರಸ ವಿರಸವನ್ನು ಸ್ವೀಕರಿಸಿ ಗಂಧದ ರೀತಿ ಜೀವತೆಯ್ದು ಪರಸ್ಪರರಿಗಾಗಿ ಬದುಕುತ್ತಾರೆ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

26. ಚನ್ನವೀರ ಕಣವಿ

ಚನ್ನವೀರ ಕಣವಿಯವರು 1928 ರಲ್ಲಿ ಗದಗ ಜಿಲ್ಲೆಯ ಹೊಂಬಳದಲ್ಲಿ ಜನಿಸಿದರು. ಇವರ ಪ್ರಮುಖ ಕೃತಿಗಳೆಂದರೆ ಆಕಾಶಬುಟ್ಟಿ ಭಾವಜೀವಿ, ಮಧುಚಂದ್ರ, ದೀಪದಾರಿ, ಮಣ್ಣಿನ ಮೆರವಣಿಗೆ, ನೆಲಮುಗಿಲು, ಕಾವ್ಯಾಕ್ಷಿ ಮುಂತಾದವು ಇವರಿಗೆ ಕರ್ನಾಟಕ ಅಕಾಡೆಮಿ ಗೌರವ ಪ್ರಶಸ್ತಿ 1981ರಲ್ಲಿ ಜೀವಧ್ವನಿ ಕವನ ಸಂಗ್ರಹಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರಕಿವೆ.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

27. ಆಯ್ಕೆ - ಈ ಮೇಲಿನ ವಾಕ್ಯವನ್ನು ಚೆನ್ನವೀರಕಣವಿಯವರು ಬರೆದ ಆಕಾಶಬುಟ್ಟಿ ಕವನ ಸಂಕಲನದಿಂದ ಆಯುಧ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ - ಗೆಳೆತನವು ಈ ಲೋಕದಲ್ಲಿ ಮಾನವನಿಗೆ ದೊರೆತ ಅಮೃತದಂತೆ ಅದನ್ನು ಬಿಟ್ಟರೆ ಜೀವನದಲ್ಲಿ ಇನ್ನೇನು ಇರಲು ಸಾಧ್ಯ ಗೆಳೆತನವಿಲ್ಲದ ಬದುಕು ಮರಣದಂತೆ ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ

ಸ್ವಾರಸ್ಯ- ಗೆಳೆತನದ ಭಾವವು ಅಮೃತದ ಹಾಗೆ ಬದುಕಲು ಸ್ಪೂರ್ತಿಯನ್ನು ನೀಡುವುದು ಎಂಬುದು ಕವಿಯ ನಿಲುವಾಗಿದೆ

28. ಆಯ್ಕೆ - ಈ ಮೇಲಿನ ವಾಕ್ಯವನ್ನು ಚೆನ್ನವೀರಕಣವಿಯವರು ಬರೆದ ಆಕಾಶಬುಟ್ಟಿ ಕವನ ಸಂಕಲನದಿಂದ ಆಯುಧ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ- ಗೆಳೆತನದಲ್ಲಿ ವಂಚನೆ ಚಂಚಲತೆ ಅಹಂಮಿಕೆ ಸಣ್ಣತನ ಮೊದಲಾದ ದುರ್ಗುಣಗಳಿಗೆ ಅವಕಾಶವಿಲ್ಲ. ಮನವು ಬಾನಿನಷ್ಟು ವಿಶಾಲ ಸ್ಪಟಿಕದಂತೆ ಶುದ್ದ ಭಾವನೆಗಳು ಬೆಳದಿಂಗಳಂತೆ ತಂಪು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ

ಸ್ವಾರಸ್ಯ - ಗೆಳೆತನವು ನಿರ್ವಂಚನೆಯಿಂದ ಕೂಡಿರುವಂಥದ್ದು ಕಪಟಕ್ಕೆ ಅಲ್ಲಿಆಸ್ಪದವಿಲ್ಲ

29. ಆಯ್ಕೆ - ಈ ಮೇಲಿನ ವಾಕ್ಯವನ್ನು ಚೆನ್ನವೀರಕಣವಿಯವರು ಬರೆದ ಆಕಾಶಬುಟ್ಟಿ ಕವನ ಸಂಕಲನದಿಂದ ಆಯುಧ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ - ಗೆಳೆತನವು ಪರಿಶುದ್ದವಾದುದು ಉಪ್ಪಿಗಿಂತ ರುಚಿಯಿಲ್ಲ ತಾಯಿಗಿಂತ ಬಂಧುವಿಲ್ಲ ಎಂಬ ಗಾದೆ ಮಾತಿದೆ. ಗೆಳೆತನದ ಸುಚಿರುಚಿಯು ಇದಕ್ಕೂ ಮಿಗಿಲಾದುದು ಯಾರು ಇದನ್ನು ಸವಿದಿದ್ದಾರೋ ಅವರಿಗೆ ಮಾತ್ರ ಇದರ ಅರಿವಾಗುವುದು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ

ಸ್ವಾರಸ್ಯ - ಗೆಳೆತನದ ಸವಿಯನ್ನು ಅನುಭವಿಸಿದವರಿಗೆ ಅದರ ಮಹತ್ವ ಅರ್ಥವಾಗುವುದು ಅನುಭವಿಸಲಾರದವರಿಗೆ ಅದು ಅರ್ಥವಾಗದು ಎಂದು ಕವಿ ಹೇಳಿದ್ದಾರೆ

30. ಆಯ್ಕೆ - ಈ ಮೇಲಿನ ವಾಕ್ಯವನ್ನು ಚೆನ್ನವೀರಕಣವಿಯವರು ಬರೆದ ಆಕಾಶಬುಟ್ಟಿ ಕವನ ಸಂಕಲನದಿಂದ ಆಯುಧ ಗೆಳೆತನ ಎನ್ನುವ ಪದ್ಯಭಾಗದಿಂದ ಆಯ್ದುಕೊಳ್ಳಲಾಗಿದೆ

ಸಂದರ್ಭ - ಗೆಳೆಯರು ಪರಸ್ಪರ ಸುಖ-ದುಃಖದಲ್ಲಿ ಭಾಗಿಗಳಾಗುವವರು ಗಂಧದ ಹಾಗೆ ಪರಸ್ಪರರಿಗಾಗಿ ಜೀವ ಜೀವ ತೆಯುವರು ಒಬ್ಬರ ಅಗತ್ಯತೆಗೆ ಇನ್ನೊಬ್ಬರು ಒದಗುವರು ಎಂದು ಹೇಳುವ ಸಂದರ್ಭದಲ್ಲಿ ಕವಿ ಈ ಮಾತನ್ನು ಹೇಳಿದ್ದಾರೆ

ಸ್ವಾರಸ್ಯ - ನಿಜವಾದ ಗೆಳೆಯರು ಪರಸ್ಪರರಿಗಾಗಿ ಬಾಳುವರು ತಮ್ಮ ಸ್ವಾರ್ಥಕ್ಕೆ ಗೆಳೆತನದಲ್ಲಿ ಅವಕಾಶವಿಲ್ಲ ಎಂಬುದು ಕವಿಯ ಅಭಿಪ್ರಾಯವಾಗಿದೆ

**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

31. ಉಪ್ಪಿಗಿಂತಲು ರುಚಿಯು ತಾಯಿಗಿಂತಲು ಬಂಧು
ಇಲ್ಲೆಂಬ ಗಾದೆ ನುಡಿ ಕೇಳಿರುವೆನು
ಗೆಳೆತನದ ಶುಚಿ-ರುಚಿಯುಇದಕು ಮಿಗಿಲಾಗಿಹುದು
ಎಂಬ ಸಾಹಸಮಾಡೆ ದೋಷವೇನು ?
ಕಂಡ ಕಂಡವರೇನು ಬಲ್ಲರಿದನು
ಉಂಡವನು ಕಂಡಿಹನು ಇದರ ಹದನು.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪಠ್ಯಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

32. ಗೆಳೆತನದ ಕವನದಲ್ಲಿ ಕವಿ ಚನ್ನವೀರ ಕಣವಿಯವರು ಗೆಳೆತನ ಅದರ ಸವಿ ಮಹತ್ವ ಹಾಗೂ ಅನೋನ್ಯತೆಯ ಬಗ್ಗೆ ತಾತ್ವಿಕ ನೆಲೆಯಲ್ಲಿ ಪ್ರಸ್ತಾಪಿಸಿದ್ದಾರೆ. ಗೆಳೆತನಕ್ಕೆ ಪೌರಾಣಿಕ ಐತಿಹಾಸಿಕ ಹಾಗೂ ಸಮಕಾಲೀನ ಬದುಕಿನಲ್ಲಿ ಮಿಗಿಲಾದ ಸ್ಥಾನವಿರುವುದನ್ನು ತಿಳಿಸಿಕೊಟ್ಟಿದ್ದಾರೆ. ಕವಿಗೆಳೆ ತನವು ಇಹಲೋಕಕ್ಕಿರುವ ಅಮೃತ ಎಂದು ಹೇಳುತ್ತಾರೆ. ನಿಜವಾದ ಗೆಳೆತನವಿದ್ದರೆ ಗೆಳೆಯರಿದ್ದರೆ ಜೀವನದ ಕಷ್ಟನಷ್ಟಗಳನ್ನು ಮರೆತು ಬಾಳಬಹುದು ಎಂಬುದು ಕವಿಯ ಅಭಿಪ್ರಾಯವಾಗಿದೆ. ಗೆಳೆತನದಲ್ಲಿ ವಂಚನೆ ಚಂಚಲತೆ ಮೇಲುಕೀಳು ಎಂಬ ಭಾವನೆಗೆ ಅವಕಾಶವಿಲ್ಲ. ಅಹಂಕಾರದ ಭಾವನೆಗೆ ಆಸ್ಪದವಿಲ್ಲ. ದ್ವೇಷವಾಗಲಿ, ಸಣ್ಣತನವಾಗಲಿ, ಸಂಕೋಚವಾಗಲಿ ಇವು ಯಾವುದೇ ಭಾವಗಳೂ ಅಲ್ಲಿ ಪ್ರವೇಶಿಸುವುದಿಲ್ಲ. ಗೆಳೆತನದಲ್ಲಿ ಗೆಳೆಯರ ಮನವು ಬಾನಿನಂತೆ ವಿಶಾಲವಾದ ಉತ್ತಮ ಗುಣಗಳನ್ನು ಹೊಂದಿದ್ದು ಎದೆಯಲ್ಲಿ ಯಾವುದೇ ಕಲ್ಮಶ ಭಾವನೆಗಳಿಲ್ಲದೆ ತಿಳಿಯಾಗಿರುವುದು. ಬೆಳದಿಂಗಳಿನ ತಂಪನ್ನು ಗೆಳೆತನವು ನೀಡುವುದು. ಉಪ್ಪಿಗಿಂತ ರುಚಿಯಿಲ್ಲ, ತಾಯಿಗಿಂತ ಬಂಧುವಿಲ್ಲ ಎನ್ನುವ ಹಾಗೆ ಗೆಳೆತನವು ಇವೆಲ್ಲ ಭಾವಗಳನ್ನು ಮೀರಿಸುವಂಥದ್ದು .ಯಾರು ಗೆಳೆತನದ ಸವಿಯನ್ನು ಅನುಭವಿಸಿರುವರೋ ಅಂಥವರಿಗಷ್ಟೇ ಗೆಳೆತನದ ಮಹತ್ವ ಅರಿವಾಗುವುದು, ನಿಜವಾದ ಗೆಳೆಯರು ಕಷ್ಟದಲ್ಲಿ ಪರಸ್ಪರ ಸಹಭಾಗಿಗಳಾಗಿ ,ವಿರಸವನ್ನು ಮರೆತು ಬಾಳುವರು ಎಂದು ಕವಿ ಗೆಳೆತನದ ಮಹತ್ವವನ್ನು ವಿವರಿಸಿದ್ದಾರೆ.
33. ನಿಮ್ಮ ಆತ್ಮೀಯ ಗೆಳೆಯನಲ್ಲಿ ಕಂಡ ಒಳ್ಳೆಯ ಗುಣ ವಿಚಾರಗಳ ಕುರಿತು ನಿಮ್ಮ ಮಾತುಗಳಲ್ಲಿ ಬರೆಯಿರಿ. (ಮಕ್ಕಳ ವಿಚಾರಗಳನ್ನು ಗಮನಿಸಿ ಮೌಲ್ಯಮಾಪನ ಮಾಡುವುದು)

## 7. ವಚನಾಮೃತ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಎ) ಕೋಕಿಲ
2. (ಡಿ) ಸ್ಥಾವರ
3. (ಸಿ) ಅಸೂಯೆ ಪಡುವುದು
4. (ಬಿ) ಗಮನದಿಂದ ಕೇಳು
5. ಬಿ) ಸಹಾಯ ಮಾಡು
6. ಎ) ಕೆಲಸ ಮಾಡದೆ ಇರು

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

7. ಋಣ
8. ಒಳ್ಳೆಯ ನಡತೆ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು**

9. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ವಂದಿಸಿ ಬುದ್ಧಿಯನ್ನು ಹೇಳಬೇಕಾಗಿದೆ.
10. ಕಾಯಕದಲ್ಲಿ ನಿರತನಾದವನು ಗುರು, ಲಿಂಗ, ಜಂಗಮರನ್ನು ಮರೆಯಬೇಕು.
11. ಆಯ್ದಕ್ಕಿಮಾರಯ್ಯನ ಪ್ರಕಾರ ಕಾಯಕವೇ ಕೈಲಾಸ.
12. ಕಾಗೆಯು ಕೋಗಿಲೆಯಾಗಲು ಸಾಧ್ಯವಿಲ್ಲ.
13. ಅಮುಗೆರಾಯಮ್ಮಅವರು "ಅರಿವು ಆಚಾರ ಸಮ್ಯಜ್ಞಾನವನರಿಯದೆ ನಾಮವ ಹೊತ್ತುಕೊಂಡು ತಿರುಗುವ ಗಾವಿಲರ" ಮುಖವನ್ನು ನೋಡಲಾಗದು ಎಂದು ಹೇಳಿದ್ದಾರೆ.
14. ಶರಣರು ಕೆಡಿಸುವ ನಿದ್ದೆಯನ್ನು ಯೋಗಸಮಾಧಿಯನ್ನು ಮಾಡಿ ಗೆದ್ದಿದ್ದಾರೆ.
15. ಕೃತಯುಗದಲ್ಲಿ ಗುರು ಶಿಷ್ಯನಿಗೆ ಬಡಿದು ಬುದ್ಧಿಯನ್ನು ಕಲಿಸಿದರು
16. ಸೀಳು ನಾಯಿ ಸಿಂಹದ ಮರಿಯಾಗಲು ಸಾಧ್ಯವಿಲ್ಲ

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

17. ಅಲ್ಲಮಪ್ರಭು ಅವರು ತಮ್ಮ ವಚನದಲ್ಲಿ ಶ್ರೀಗುರು ಯಾವ ಯಾವ ಕಾಲದಲ್ಲಿ ಯಾವ ಯಾವ ರೀತಿ ಶಿಷ್ಯನಿಗೆ ಬುದ್ಧಿಯನ್ನು ಕಲಿಸಬೇಕು ಎಂದಿದ್ದಾರೆ. ಎಂದರೆ : ಕೃತಯುಗದಲ್ಲಿ ಶ್ರೀ ಗುರುವು ಶಿಷ್ಯನಿಗೆ ಬಡಿದು ಬುದ್ಧಿಯನ್ನು ಕಲಿಸುತ್ತಿದ್ದನು. ತ್ರೇತಾಯುಗದಲ್ಲಿ ಶ್ರೀಗುರುವು ಶಿಷ್ಯನಿಗೆ ಬೈದು ಬುದ್ಧಿಯನ್ನು ಕಲಿಸುತ್ತಿದ್ದನು. ದ್ವಾಪರಯುಗದಲ್ಲಿ ಶ್ರಿಗುರುವು ಶಿಷ್ಯನಿಗೆ ಝಂಕಿಸಿ ಬುದ್ಧಿಯನ್ನು ಕಲಿಸುತ್ತಿದ್ದನು. ಆದರೆ ಕಲಿಯುಗದಲ್ಲಿ ಶ್ರೀಗುರು ತನ್ನ ಶಿಷ್ಯನಿಗೆ ವಂದಿಸಿ ಬುದ್ಧಿಯನ್ನು ಕಲಿಸಬೇಕಾಗಿದೆ. ಈ ರೀತಿ ಗುರುವು ಶಿಷ್ಯನಿಗೆ ಬುದ್ಧಿಯನ್ನು ಕಲಿಸುವುದು ಕಾಲಕಟ್ಟಳೆಗೆ ಒಳಪಟ್ಟಿದೆ.
18. ನಾವು ಮಾಡುವ ಕಾಯಕದಲ್ಲಿ ನಿಷ್ಠೆ ಹೇಗಿರಬೇಕೆಂದರೆ, ಕಾಯಕದಲ್ಲಿ ನಿರತನಾದಾಗ ಗುರುದರ್ಶನವಾದರೂ ಮರೆಯಬೇಕು. ಲಿಂಗ ಪೂಜೆ ಮಾಡುವುದನ್ನು ಮರೆಯಬೇಕು. ಜಂಗಮ

ಮುಂದೆ ಬಂದು ನಿಂತರು. ಅವನ ಹಂಗು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ ಕೆಲಸಕ್ಕಿಂತ ಬೇರೆ ದೇವರಿಲ್ಲ. ಕಾಯಕಕ್ಕೆ ಮೊದಲ ಸ್ಥಾನ ಕೊಡಬೇಕು ಎಂದು ಆಯ್ದಕ್ಕಿಮಾರಯ್ಯನು ಕಾಯಕದ ಮಹತ್ವವನ್ನು ತಿಳಿಸಿದ್ದಾರೆ.

19. ಕಾಗೆಯ ಮರಿ ಕೋಗಿಲೆಯಾಗಲು ಸಾಧ್ಯವಿಲ್ಲ. ಆಡಿನ ಮರಿ ಆನೆಯಾಗಲು ಸಾಧ್ಯವಿಲ್ಲ. ಸೀಳು ನಾಯಿ ಸಿಂಹದ ಮರಿಯಾಗಲು ಸಾಧ್ಯವಿಲ್ಲ. ಅದೇ ರೀತಿ ಅರಿವು, ಆಚಾರ, ಸಮ್ಯಜ್ಞಾನವನ್ನುಅರಿಯದ ಗಾವಿಲರು ಹಣೆಯ ತುಂಬಾ ಬುದ್ಧಿವಂತರು ಎಂಬ ನಾಮವ ಹೊತ್ತುಕೊಂಡು ತಿರುಗುವವ ರಕೈಯಲ್ಲಿ ದೇವರನ್ನು ಕಾಣಲು ಸಾಧ್ಯವಿಲ್ಲ" ಎಂದು ಅಮುಗೆರಾಯಮ್ಮಅವರ ಅನಿಸಿಕೆಯಾಗಿದೆ.

20. ತಮ್ಮ ಮನವ ಗೆದ್ದವೆಂದು ಯೋಗಿಯ ಸೋಗು ಹಾಕುವ ಬುದ್ಧಿಹೀನರಿಗೂ ನಿಜವಾಗಿ ತಮ್ಮ ಮನವನ್ನು ಗೆದ್ದ ಜಂಗಮರಿಗೂ ಇರುವ ವ್ಯತ್ಯಾಸವನ್ನು ಶಿವಶರಣೆ ಲಿಂಗಮ್ಮ ತಿಳಿಸುತ್ತಾ ಬುದ್ಧಿಹೀನರು ಅರಿಷಡ್ವರ್ಗಗಳನ್ನು ಗೆಲ್ಲಲಾರದೆ ಮನವನ್ನು ಗೆದ್ದಿರುವೆಂದು ಹೇಳುತ್ತಾರೆ. ಜಗದ ಪಾಶವನ್ನು ಬಿಡದೆ ,ಕಾಯಕವನ್ನು ಮಾಡದೆ, ತನುವನ್ನು ಕರಗಿಸಿ, ಕಾಯವ ಮರುಗಿಸುತ್ತಾರೆ. ಯೋಗಸ ಮಾಧಿಯನ್ನು ಮಾಡದೆ ಕೇವಲ ದೈಹಿಕ ದಂಡನೆ ಮಾಡಿ, ಮನವನ್ನು ಶುದ್ಧ ಮಾಡಿಕೊಳ್ಳದೆ; ನಿದ್ದೆಗೆಟ್ಟುವಿ ದ್ಯೆಯನ್ನು ಸಂಪಾದಿಸುತ್ತಾರೆ .

21. ಶಿವಶರಣರು "ಕಾಮ ಕ್ರೋಧವನ್ನು ನೀಗಿ ಲೋಭ, ಮೋಹವನ್ನು ಬಿಟ್ಟು, ಮದ, ಮತ್ಸರವನ್ನು ಛೇದಿಸಿ ಮನವನ್ನು ಗೆಲ್ಲುತ್ತಾರೆ. ಆಸೆ, ರೋಷಗಳನ್ನು ತೊರೆದು ಕಾಯಕವನ್ನೇ ಪ್ರಸಾದವೆಂದು ತಿಳಿದು; ನಿದ್ರೆಯನ್ನೇ ಯೋಗಸಮಾಧಿಯನ್ನಾಗಿ ಮಾಡಿಕೊಂಡು ಸುಖವನ್ನು ತೊರೆದು ಜಗತ್ತನ್ನೇ ಗೆದ್ದವರೆಂದರೆ ಶರಣರು. ಅಂತಹವರನ್ನು ಬುದ್ಧಿಹೀನರು ಹೇಗೆ ತಾನೆ ಅರಿಯಲು ಸಾಧ್ಯ ಎಂದು ಲಿಂಗಮ್ಮನವರು ಅಭಿಪ್ರಾಯ ಪಟ್ಟಿದ್ದಾರೆ.

22. ಕಲಿಯುಗದಲ್ಲಿ ಗುರುವು ಶಿಷ್ಯನಿಗೆ ವಂದಿಸಿ ಬುದ್ಧಿ ಕಲಿಸುತ್ತಾನೆ ಎಂದು ಕವಿ ಹೇಳುತ್ತಾನೆ. ಕಾಲ ಬದಲಾದಂತೆ ಗುರು-ಶಿಷ್ಯರ ಸಂಬಂಧದಲ್ಲೂ ಬದಲಾವಣೆ ಬಂದಿದೆ.
23. ಪ್ರಾಮಾಣಿಕವಾಗಿ ಮಾಡುವ ಕೆಲಸವೇ ದೇವರ ಆರಾಧನೆಗೆ ಸಮಾನ ಎಂಬುದೇ ಕಾಯಕವೇ ಕೈಲಾಸ ಎಂಬುದರ ಅರ್ಥ. ಕೆಲಸದಲ್ಲಿ ನಿಷ್ಠೆ ಇರಬೇಕು ಎಂದು ಈ ವಚನ ತಿಳಿಸುತ್ತದೆ.
24. ಕಾಯಕದಲ್ಲಿ ನಿರತನಾದವನು ಗುರುದರ್ಶನ, ಲಿಂಗಪೂಜೆ ಮತ್ತು ಜಂಗಮರ ಸಾನ್ನಿಧ್ಯವನ್ನೂ ಮರೆತು ತನ್ನ ಕೆಲಸದಲ್ಲಿ ತೊಡಗಿರಬೇಕು ಎಂದು ಹೇಳಲಾಗಿದೆ. ಕಾಯಕಕ್ಕೆ ಮೊದಲ ಆದ್ಯತೆ ನೀಡಬೇಕು ಎಂಬುದು ಇದರ ಆಶಯ.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

25. **ಅಲ್ಲಮಪ್ರಭು :** ಅಲ್ಲಮಪ್ರಭು ೧೨ನೇ ಶತಮಾನದ ಪ್ರಸಿದ್ಧ ಚಿಂತಕ, ತತ್ವಜ್ಞಾನಿ, ಶಿವಶರಣ ಮತ್ತು ವಚನಕಾರ. ಈತನು ಜನಿಸಿದ್ದು ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಬಳ್ಳಿಗಾವಿಯಲ್ಲಿ. ಈತನ ತಂದೆ ನಿರಹಂಕಾರ ಮತ್ತು ತಾಯಿ ಸುಜ್ಞಾನಿ. ಈತ ಕಲ್ಯಾಣದಲ್ಲಿ ಬಸವಣ್ಣ ಸ್ಥಾಪಿಸಿದ 'ಶೂನ್ಯಪೀಠ'ದ ಅಧ್ಯಕ್ಷನಾಗಿ ಅನೇಕರಿಗೆ ಮಾರ್ಗದರ್ಶನ ನೀಡಿದವನು. 'ಗುಹೇಶ್ವರಾ' ಎಂಬುದು ಈತನ ವಚನಗಳ ಅಂಕಿತ

26. **ಆಯ್ದಕ್ಕಿ ಮಾರಯ್ಯ**: ಈತನ ಕಾಲ ಕ್ರಿ.ಶ.ಸು 1160. ಶಿವಶರಣ ಹಾಗೂ ವಚನಕಾರ, ರಾಯಚೂರು ಜಿಲ್ಲೆಯ ಅಮರೇಶ್ವರದ ಆಯ್ದಕ್ಕಿಲಕ್ಕಮ್ಮನ ಪತ್ನಿ. ಆಯ್ದಕ್ಕಿಮಾರಯ್ಯ ಎಂದೇ ಪ್ರಸಿದ್ಧ. ಈವರೆಗೆ ಈತನ ಸುಮಾರು ೩೨ವ ಚನಗಳು ದೊರೆತಿವೆ. ಈತನ ಅಂಕಿತ 'ಅಮರೇಶ್ವರಲಿಂಗ' ಬೀದಿಯಲ್ಲಿ ಬಿದ್ದ ಅಕ್ಕಿಯನ್ನು ಆಯ್ದು ತಂದು ದಾಸೋಹ ಮಾಡುವುದೇ ಅವರ ಕಾಯಕವಾಗಿತು.

27. **ಅಮುಗೆರಾಯಮ್ಮ:** ಈಕೆಯ ಕಾಲಕ್ರಿ.ಶ. ಸುಮಾರು 1160. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಈಕೆ ಸೊನ್ನಲಿಗೆಯವಳು (ಈಗಿನ ಸೋಲ್ಲಾಪುರ) ಪತಿ ಅಮುಗೆದೇವಯ್ಯ ನೇಯ್ಗೆ ಇವರ ಕಾಯಕ. ಈಕೆಯ ಅಂಕಿತನಾಮ 'ಅಮುಗೇಶ್ವರ'. ತಮ್ಮ ವೈಚಾರಿಕ ಪ್ರಖರತೆ ಹಾಗೂ ಸಾಮಾಜಿಕ ಕಳಕಳಿಯಿಂದ ಜೀವನವನ್ನು ವಿಭಿನ್ನ ದೃಷ್ಟಿಕೋನದಿಂದ ದರ್ಶಿಸಿ, ಚಿಂತನಗೈದು ವಚನ ರಚನೆಯ ಮಹಾ ಕಾಯಕವನ್ನು ರೂಢಿಸಿಕೊಂಡವರು

28. **ಶಿವಶರಣೆಲಿಂಗಮ್ಮ:** ಈಕೆಯ ಕಾಲಕ್ರಿ.ಶ. ಸುಮಾರು 1160. ಹನ್ನೆರಡನೆಯ ಶತಮಾನದ ವಚನಕಾರ್ತಿಯರಲ್ಲಿ ಒಬ್ಬಳು. ಕ್ಷೌರಿಕ ವೃತ್ತಿಯ ಹಡಪದ ಅಪ್ಪಣ್ಣ ನವರ ಧರ್ಮಪತ್ನಿ. ಈಕೆಯ ಅಂಕಿತನಾಮ 'ಅಪ್ಪಣ್ಣಪ್ರಿಯ ಚನ್ನಬಸವಣ್ಣ' ಎಂಬುದು. ವ್ಯಕ್ತಿಯ ಹುಟ್ಟಿಗೂ ಅವನ ಸಾಧಿಸುವ ಸಾಧನೆಗೂ ಏನೇನು ಸಂಬಂಧವಿಲ್ಲ ಎಂಬುದನ್ನು ನಿರೂಪಿಸಿದವಳು.

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪಠ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

29. ಆಯ್ಕೆ : ಅಲ್ಲಮಪ್ರಭುವಿನ ವಚನದ ಈ ವಾಕ್ಯವನ್ನು ಎಂ.ಎಂಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರ ವಚನ ಸಂಪುಟ' ಕೃತಿಯಿಂದ ಆಯ್ದ 'ವಚನಾಮೃತ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
ಸಂದರ್ಭ : ವಿವಿಧ ಕಾಲಗಟ್ಟದಲ್ಲಿ ಶ್ರೀಗುರು ತನ್ನ ಶಿಷ್ಯನಿಗೆ ಯಾವ ರೀತಿ ಬುದ್ದಿಯನ್ನು ಕಲಿಸುತ್ತಾನೆ ಎಂದು ವರ್ಣಿಸುತ್ತಾ ಕೃತಯುಗದಲ್ಲಿ ಬಡಿದು, ತ್ರೇತಾಯುಗದಲ್ಲಿ ಬೈದು, ದ್ವಾಪರಯುಗದಲ್ಲಿ ಗದರಿಸಿ, ಕಲಿಂಯುಗದಲ್ಲಿ ವಂದಿಸಿ ಬುದ್ದಿಯನ್ನು ಕಲಿಸಬೇಕಾಗಿದೆ ಎಂದು ಹೇಳುವ ಸಂದರ್ಭದಲ್ಲಿ ಅಲ್ಲಮ ಪ್ರಭು ಈ ಮಾತನ್ನು ಹೇಳಿದ್ದಾರೆ.
ಸ್ವಾರಸ್ಯ : ಕಾಲ ಬದಲಾದಂತೆ ಕಲಿಯುವವರು, ಕಲಿಸುವವರು ಬದಲಾಗುತ್ತಾರೆ. ಬದಲಾದ ಕಾಲಮಾನಕ್ಕೆ ಶ್ರೀಗುರು ಬುದ್ದಿ ಕಲಿಸುವ ವಿಧಾನದಲ್ಲಿ ಬದಲಾಣೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂಬ ಅಂಶ ಸ್ವಾರಸ್ಯಕರವಾಗಿದೆ.

30. ಆಯ್ಕೆ : ಅಮುಗೆ ರಾಯಮ್ಮನವರ ಈ ವಚನದ ವಾಕ್ಯವನ್ನು ಎಂ.ಎಂಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರ ವಚನ ಸಂಪುಟ' ಕೃತಿಯಿಂದ ಆಯ್ದ 'ವಚನಾಮೃತ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ

ಸಂದರ್ಭ : ಕಾಗೆ ಕೋಗಿಲೆಯಾಗಲು, ಆಡಿನಮರಿ ಆನೆಯಾಗಲು, ಸೀಳು ನಾಯಿ ಸಿಂಹವಾಗಲು ಸಾಧ್ಯವಿಲ್ಲ .ಹಾಗೆಯೇ ಅರಿವು, ಆಚಾರ, ಸಮ್ಯಜ್ಞಾನವನರಿಯದೆದೆ ಕೇವಲಜ್ಞಾನಿಗಳು ಎಂಬ ನಾಮ ಹೊತ್ತುಕೊಂಡು ತಿರುಗು ದಡ್ಡರ ಮುಖ ನೋಡಲು ಸಾಧ್ಯವಿಲ್ಲ ಎಂದು ಹೇಳುವ ಸಂದರ್ಭದಲ್ಲಿ ಅಮುಗೆರಾಯಮ್ಮ ಈ ಮಾತನ್ನು ಹೇಳುತ್ತಾರೆ.

ಸ್ವಾರಸ್ಯ : ಭಗವಂತನ ಸಾಕ್ಷಾತ್ಕಾರಕ್ಕಾಗಿ ಜ್ಞಾನ ಸಂಪಾದನೆ ಮಾಡಲೇಬೇಕು. ಬರೀಜ್ಞಾನಿ ಎಂಬ ಹೆಸರು ಸಾಲದು ಎಂಬ ಮಾತು ಸ್ವಾರಸ್ಯಕರವಾಗಿದೆ.

31. ಆಯ್ಕೆ : ಆಯ್ದಕ್ಕಿ ಮಾರಯ್ಯನವರ ಈ ವಚನದ ವಾಕ್ಯವನ್ನು ಎಂ.ಎಂ ಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರವಚನ ಸಂಪುಟ' ಕೃತಿಯಿಂದ ಆಯ್ದ 'ವಚನಾಮೃತ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ನಾವು ಕೆಲಸ, ಕಾಯಕದಲ್ಲಿ ನಿರತನಾದರೆ ಗುರು ದರ್ಶನ, ಲಿಂಗಪೂಜೆ, ಜಂಗಮನ ದರ್ಶನವನ್ನು ಮರೆತು ಕಾಯಕದಲ್ಲಿ ತೊಡಬೇಕು ಎಂದು ಕಾಯಕದ ಮಹತ್ವವನ್ನು ತಿಳಿಸು ಸಂದರ್ಭದಲ್ಲಿ ಈ ಮಾತನ್ನು ಆಯ್ದಕ್ಕಿಮಾರಯ್ಯ ಹೇಳಿದ್ದಾರೆ.

ಸ್ವಾರಸ್ಯ : ಕಾಯಕವೇಕೈ ಲಾಸ, ಕಾಯಕವೇ ದೇವರು. ಎಂದು ಪ್ರತಿಪಾದಿಸಿರುವುದು ಸ್ವಾರಸ್ಯಕರವಾಗಿದೆ.

32. ಆಯ್ಕೆ : ಶಿವಶರಣೆ ಲಿಂಗಮ್ಮ ಅವರ ವಚನದ ಈ ವಾಕ್ಯವನ್ನು ಎಂ.ಎಂಕಲಬುರ್ಗಿಅವರು ಸಂಪಾದಿಸಿರುವ 'ಸಮಗ್ರವಚನ ಸಂಪುಟ' ಕೃತಿಯಿಂದ ಆಯ್ದ 'ವಚನಾಮೃತ' ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ಬುದ್ಧಿಹೀನರು ಮತ್ತು ಶಿವಶರಣೆಯ ನಡುವಿನ ವ್ಯತ್ಯಾಸವನ್ನು ತಿಳಿಸುತ್ತಾ ಬುದ್ಧಹೀನರು ಕಾಯಕ ಮಾಡದೆ ದೇಹಕ್ಕೆ ಹಿಂಸೆಯನ್ನು ಮಾಡಿ ವಿದ್ಯೆ ಕಲಿಯುತ್ತಾರೆ. ಆದರೆ ಶಿವಶರಣೆಯರು ಕಾಯಕವನ್ನೇ ಪ್ರಸಾದವೆಂದು ತಿಳಿದು ಬದುಕಿದರು ಎಂದು ಹೇಳುವ ಸಂದರ್ಭದಲ್ಲಿಈ ಮಾತು ಬಂದಿದೆ.

ಸ್ವಾರಸ್ಯ : ಬುದ್ಧಿಹೀನರು ಸುಮ್ಮನೆ ಕಾಯವನ್ನು ಕರಗಿಸುತ್ತಾರೆ, ಶಿವಶರಣೆಯರು ತಮ್ಮ ಕಾಯವನ್ನು ಕಾಯಕದಲ್ಲಿ ತೊಡಗಿಸಿ ಪ್ರಸಾದ ಕಾಯವಾಗಿ ಮಾಡುತ್ತಾರೆ ಎಂಬ ಅಂಶ ಸ್ವಾರಸ್ಯಕರವಾಗಿದೆ

33. ಆಯ್ಕೆ : ಆಯ್ದಕ್ಕಿ ಮಾರಯ್ಯನವರ ಈ ವಚನದ ವಾಕ್ಯವನ್ನು ಎಂ.ಎಂ ಕಲಬುರ್ಗಿ ಅವರು ಸಂಪಾದಿಸಿರುವ 'ಸಮಗ್ರ ವಚನಸಂಪುಟ' ಕೃತಿಯಿಂದ ಆಯ್ದ 'ವಚನಾಮೃತ'ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ಸಂದರ್ಭ : ನಾವು ಕೆಲಸ, ಕಾಯಕದಲ್ಲಿ ನಿರತನಾದರೆ ಗುರುದರ್ಶನ, ಲಿಂಗ ಪೂಜೆ, ಜಂಗಮನ ದರ್ಶನವನ್ನು ಮರೆತು ಕಾಯಕದಲ್ಲಿ ತೊಡಬೇಕು ಎಂದು ಕಾಯಕದ ಮಹತ್ವವನ್ನು ತಿಳಿಸುವ ಸಂದರ್ಭದಲ್ಲಿ ಈ ಮಾತನ್ನು ಆಯ್ದಕ್ಕಿಮಾರಯ್ಯ ಹೇಳಿದ್ದಾರೆ.

ಸ್ವಾರಸ್ಯ : ಕಾಯಕವೇ ಕೈಲಾಸ, ಕಾಯಕವೇ ದೇವರು. ಎಂದು ಪ್ರತಿಪಾದಿಸಿರುವುದು ಸ್ವಾರಸ್ಯಕರವಾಗಿದೆ

**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

34. ಕಾಯಕದಲ್ಲಿ ನಿರತನಾಡೆ
ಗುರುದರ್ಶನವಾದಡೂ ಮರೆಯಬೇಕು;
ಲಿಂಗ ಪೂಜೆಯಾದಡೂ ಮರೆಯಬೇಕು
ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು
ಕಾಯಕವೆ ಕೈಲಾಸವಾದ ಕಾರಣ
ಅಮರೇಶ್ವರ ಲಿಂಗವಾಯಿತ್ತಾದಡೂ ಕಾಯಕದೊಳಗು – **ಆಯ್ದಕ್ಕಿ ಮಾರಯ್ಯ**

**ಅಥವಾ**

ಕಾಗೆಯ ಮರಿಕೋಗಿಲೆಯಾಗಬಲ್ಲುದೆ ?
ಆಡಿನ ಮರಿ ಆನೆಯಾಗಬಲ್ಲದೆ ?
ಸೀಳ (ಳು) ನಾಯಿ ಸಿಂಹದ ಮರಿಯಾಗಬಲ್ಲುದೆ ?
ಅರಿವು ಆಚಾರ ಸಮ್ಯಜ್ಞಾನವನರಿಯದೆ
ನಾಮವ ಹೊತ್ತುಕೊಂಡು ತಿರುಗುವ ಗಾವಿಲರ
ಮುಖವ ನೋಡಲಾಗದು ಅಮುಗೇಶ್ವರಾ. – ಅಮುಗೆ ರಾಯಮ್ಮ

**ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನಾಧರಿಸಿ ಸಾರಾಂಶ ಬರೆಯುವುದು :**

ವಿಷಯಾಂಶಕ್ಕೆ 3 ಅಂಕಗಳು

ಅಡಕವಾಗಿರುವ ಮೌಲ್ಯ ಗುರುತಿಸುವುದು, ಪದಬಂಧ- ಭಾಷಾಶೈಲಿಗೆ 1 ಅಂಕ

**ಒಟ್ಟು 4 ಅಂಕಗಳು**

35. ಅಲ್ಲಮಪ್ರಭುವಿನ ಈ ವಚನದಲ್ಲಿ ಗುರುಶಿಷ್ಯರ ಸಂಬಂಧದ ವರ್ಣನೆ ಇದೆ. ವಿವಿಧ ಕಾಲಘಟ್ಟದಲ್ಲಿ ಗುರು – ಶಿಷ್ಯರ ಶೈಕ್ಷಣಿಕ ಸಂಬಂಧ , ಗೌರವದ ಭಾವನೆಯನ್ನು ವರ್ಣಿಸಿದ್ದಾರೆ. "ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ" ಕೃತಯುಗದ ಶಿಷ್ಯನು ಸುಖ, ಭೋಗ, ವೈಭವಗಳಲ್ಲಿ ಮುಳುಗಿ ಮೋಹ ಪರವಶನಾಗಿರುವ ಶಿಷ್ಯನನ್ನು ಇದರಿಂದ ಹೊರ ಬರುವಂತೆ ಮಾಡುವುದು ಸುಲಭದ ಮಾತಲ್ಲ, ಆದ್ದರಿಂದ ಇವನ ಹಿತ ಭಯಸುವ ಶ್ರಿಗುರು ತನ್ನ ಶಿಷ್ಯನನ್ನು ಬಡಿದಾದರೂ ಸರಿಯೇ ಬುದ್ಧಿ ಕಲಿಸಬೇಕು. "ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದುಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ" ಈ ಯುಗದ ಶಿಷ್ಯನಿಗೆ ಶಕ್ತಿ, ಸಿದ್ದಿಗಳ ಮೇಲೆ ಅಪಾರವಾದ ವ್ಯಾಮೋಹ. ಇದಕ್ಕಾಗಿ ಅವನು ಎಂತಹ ಘೋರ ತಪಸ್ಸಿಗೂಸಿದ್ದ. ಈ ರೀತಿಯ ಮೋಹ, ವ್ಯಾಮೋಹ, ಅನುರಾಗದಿಂದ ತನ್ನ ಶಿಷ್ಯನನ್ನು ಹೊರತರಲು ಶ್ರೀಗುರು ಬೈದು ಬುದ್ಧಿಯಕ ಲಿಸಿದರೆ ಅದು ಮಹಾ ಪ್ರಸಾದವಾಗುತ್ತದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ರಾಂಶಕ್ಕೆ 3 ಅಂಕಗಳು

ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ

**ಒಟ್ಟು 4 ಅಂಕಗಳು**

36. ಆಯ್ದಕ್ಕಿ ಮಾರಯ್ಯ ಅವರು ತಮ್ಮ ಈ ವಚನದಲ್ಲಿ ಕಾಯಕದ ಮಹತ್ವವನ್ನು ತಿಳಿಸಿದ್ದಾರೆ. ಕಾಯಕವೆಂದರೆ ಮನುಷ್ಯನು ಯಾವುದಾದರೊಂದು ದೇಹಿಕ ಶ್ರಮದಲ್ಲಿ ತೊಡಗಿರುವುದು. ಮನುಷ್ಯನು ಇಂತಹ ಕಾಯಕದಲ್ಲಿಯೇ ದೇವರನ್ನು ಕಾಣಬೇಕು. ಅವವರ ಕಾಯಕವೇ ಅವರವರ ದೇವರು. ಈ ಕಾಯಕವನ್ನು ನಿಷ್ಠೆ, ಭಕ್ತಿಯಿಂದ ಮಾಡಬೇಕು. ನಾವು ಕಾಯಕದಲ್ಲಿ ತೊಡಗಿದ್ದಾಗ ಗುರುದರ್ಶನವಾದರೂ, ಲಿಂಗ ಪೂಜೆಯಾದರೂ ಮರೆಯಬೇಕು. ನಡೆದಾಡುವ ದೇವರು ಜಂಗಮರೇ ಮುಂದೆ ಬಂದು ನಿಂತಿದ್ದರೂ ಮೊದಲು ಕಾಯಕ ಮಾಡಿ ನಂತರ ಅವರನ್ನು ನೋಡಿ, ಮಾತನಾಡಿಸಬೇಕು. ಏಕೆಂದರೆ ಕಾಯಕಗುರು, ಲಿಂಗಪೂಜೆ, ಜಂಗಮರನ್ನು ಮೀರಿದ್ದೂ 'ಕಾಯಕವೇಕೈಲಾಸ' ಎಂದು ಭಾವಿಸಬೇಕು. ದೇವರಿಗಿಂತ ಕೆಲಸಕ್ಕೆ ಮೊದಲ ಸ್ಥಾನಕೊಡಬೇಕು ಎಂಬುದೇ ಈ ವಚನದ ಆಶಯ.

37. ಅಲ್ಲಮ ಪ್ರಭುವಿನ ಈ ವಚನದಲ್ಲಿ ಗುರುಶಿಷ್ಯರ ಸಂಬಂಧದ ವರ್ಣನೆ ಇದೆ. ವಿವಿಧ ಕಾಲಘಟ್ಟದಲ್ಲಿ ಗುರು – ಶಿಷ್ಯರ ಶೈಕ್ಷಣಿಕ ಸಂಬಂಧ , ಗೌರವದ ಭಾವನೆಯನ್ನು ವರ್ಣಿಸಿದ್ದಾರೆ. "ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ" ಕೃತಯುಗದ ಶಿಷ್ಯನುಸುಖ, ಭೋಗ, ವೈಭವಗಳಲ್ಲಿ ಮುಳುಗಿ ಮೋಹಪರವಶನಾಗಿರುವ ಶಿಷ್ಯನನ್ನು ಇದರಿಂದ ಹೊರಬರುವಂತೆ ಮಾಡುವುದು ಸುಲಭದ ಮಾತಲ್ಲ, ಆದ್ದರಿಂದ ಇವನ ಹಿತಭಯಸುವ ಶ್ರಿಗುರುತನ್ನಶಿಷ್ಯನನ್ನು ಬಡಿದಾದರೂ ಸರಿಯೇ ಬುದ್ಧಿಕಲಿಸಬೇಕು. "ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದರೆ, ಆಗಲಿ ಮಹಾ ಪ್ರಸಾದವೆಂದೆನಯ್ಯ" ಈ ಯುಗದ ಶಿಷ್ಯನಿಗೆ ಶಕ್ತಿ, ಸಿದ್ಧಿಗಳ ಮೇಲೆ ಅಪಾರವಾದ ವ್ಯಾಮೋಹ. ಇದಕ್ಕಾಗಿ ಅವನು ಎಂತಹ ಘೋರ ತಪಸ್ಸಿಗೂಸಿದ್ದ. ಈ ರೀತಿಯ ಮೋಹ, ವ್ಯಾಮೋಹ, ಅನುರಾಗದಿಂದ ತನ್ನ ಶಿಷ್ಯನನ್ನು ಹೊರತರಲು ಶ್ರೀಗುರು ಬೈದು ಬುದ್ಧಿಯ ಕಲಿಸಿದರೆ ಅದು ಮಹಾಪ್ರಸಾದವಾಗುತ್ತದೆ."ದ್ವಾಪರ ಯುಗದಲ್ಲಿ ಶ್ರೀಗುರುವು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ" ಈ ಕಾಲದ ಶಿಷ್ಯನಿಗೆ ಯಶ, ಕೀರ್ತಿ ಎಂದರೆ ಪಂಚಪ್ರಾಣ. ಇದರ ಬೆನ್ನು ಹತ್ತಿ ಒಡುವ ಕುದುರೆಗೆ ಲಾಗಾಮು ಹಾಕಿ ಹಿಡಿದು ಸತ್ಯದದಾರಿಗೆ ತರಲು ಶ್ರೀಗುರು ಬೆದರಿಸಿ, ಗದರಿಸಿ ಬುದ್ಧಿ ಕಲಿಸುವನು."ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದರೆ, ಆಗಲಿ ಮಹಾಪ್ರಸಾದವೆಂದೆನಯ್ಯ"ಈ ಕಾಲದ ಶಿಷ್ಯನು ಗುರುವನ್ನು ಮೀರಿಸುವಷ್ಟು ಜ್ಞಾನದ ಪಿಶಾಚಿಯಾಗಿರುತ್ತಾನೆ. ಅದರಿಂದ ಶ್ರೀಗುರು ಇಂತಹ ಶಿಷ್ಯರನ್ನ ಗೌರವಿಸುತ್ತಾನೆ, ಆದರಿಸುತ್ತಾನೆ. ಶ್ರೀಗುರು ಕಾಲದಿಂದ ಕಾಲಕ್ಕೆ ಕರುಣಿಸುವ ಸಕಲವಿ ದ್ಯೆಗಳನ್ನು ಶಿಷ್ಯಯಂದಿರು 'ಮಹಾಪ್ರಸಾದ' ವೆಂದು ಸ್ವೀಕರಿಸುವರು.

**ಪ್ರಬಂಧ ಬರೆವಣಿಗೆ :**

| | |
|---|---|
| ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ | 1 ಅಂಕ |
| ಒಡಲು, ಸಮರ್ಥ ವಿವರಣೆಯೊಂದಿಗೆ ವಿಷಯಕ್ಕೆ | 2 ಅಂಕಗಳು |
| ಉಪಸಂಹಾರ / ಮುಕ್ತಾಯ / ವಿಷಯ ಸಮಾಪ್ತಿ | 1 ಅಂಕ |
| ಭಾಷಾಶೈಲಿಗೆ, ಪದಬಂಧ | 1 ಅಂಕ |
| **ಒಟ್ಟು** | **5 ಅಂಕಗಳು** |

38. ರಾಷ್ಟ್ರೀಯ ಹಬ್ಬಗಳು
39. ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ

# 8. ರಾಮಧಾನ್ಯ ಚರಿತೆ

**ಬಹು - ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. (ಡಿ) ಲಗು
2. (ಎ) ಗುರು
3. (ಸಿ) ಷಟ್ಪದಿ
4. (ಎ) 102
5. (ಸಿ) ನಾಲ್ಕು
6. (ಬಿ) 64

**ಸಂಬಂಧೀಪದ ಬರೆಯುವುದು (ಪ್ರತಿ ಸರಿಯುತ್ತರಕ್ಕೆ 1 ಅಂಕ ) :**

7. ಲೋಪಸಂಧಿ
8. ರಾಗಿ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

9. ರಾಗಿಯು ದೇಶಕ್ಕೆ ಅತಿಶಯವಾದ ಧಾನ್ಯವಾಗಿದೆ.
10. ವ್ರಿಹಿ ಹೆಣದ ಬಾಯಿಗೆ ತುತ್ತು ಎಂದು ಹೇಳಲಾಗಿದೆ.
11. ಶ್ರೀರಾಮನನ್ನು ದಾಶರಥಿ ಎನ್ನುತ್ತಾರೆ.
12. ನರೆದಲಗ ಕ್ಷಾಮಕಾಲದಲ್ಲಿ ಅನ್ನವಿಲ್ಲದೆ ಅಳಿವ ಪ್ರಾಣಿಗಳನ್ನು ಆಧರಿಸಿ ಸಲಹುತ್ತದೆ.
13. ಭತ್ತ ಹಾಗೂ ರಾಗಿಗಳಲ್ಲಿ ಶ್ರೇಷ್ಠರಾರು ಎಂಬುದನ್ನು ತೀರ್ಮಾನಿಸಲು ಹರಿಹರ ವಿರಂಚಿಗಳನ್ನು ಅಯೋಧ್ಯೆಗೆ ಕರೆಸಲಾಗುತ್ತದೆ.
14. ಭತ್ತ ಹಾಗೂ ರಾಗಿಯನ್ನು ಸೆರೆಗೆ ಹಾಕಲಾಯಿತು.
15. ಎಲ್ಲ ಧರ್ಮದ ಸಾರವನ್ನು ತಿಳಿದವರು ಎಲ್ಲರನ್ನೂ ಸಮಾನವಾಗಿ ಕಾಣುತ್ತಾರೆ.
16. ವಿಭೀಷಣನನ್ನು ಕುಲಹೀನನೆಂದು ಬೈದರು.
17. ದೇವರಿಗೆ ಪ್ರತಿದಿನ ನೈವೇದ್ಯವಾಗಿದ್ದ ಧಾನ್ಯ ಅಕ್ಕಿಯಾಗಿತ್ತು.
18. ಸತ್ಯಹೀನನು ಧನಾಢ್ಯರನ್ನು ಬೆಂಬತ್ತಿ ನಡೆಯುತ್ತಾನೆ.
19. ಕ್ಷಾಮದ ಕಾಲದಲ್ಲಿ ಧಾನ್ಯಗಳು ಪ್ರಾಣಿಗಳನ್ನು ರಕ್ಷಿಸಿ ಸಲಹುತ್ತವೆ.
20. ಗೌತಮ ಮುನಿಯ ಬಳಿಗೆ ವಿವಾದವನ್ನು ಪರಿಹರಿಸಲು ಕರೆಸಲಾಯಿತು.
21. ರಾಮನು ಹರಿಹರ ವಿರಂಚಾದಿಗಳನ್ನು ಕರೆಸುವುದಾಗಿ ಹೇಳಿದನು.
22. ವಿಭೀಷಣನಿಗೆ ಅಯೋಧ್ಯೆಗೆ ಹೋಗಲು ರಾಮನು ಹೇಳಿದನು.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

23. ಶ್ರೇಷ್ಠವೆಂದು ಹೇಳಲಾದ ಧಾನ್ಯಗಳೆಂದರೆ -ಗೋಧಿ, ಸಾಮೆ ನವಣೆ, ಜೋಳ, ಹಾರಕ, ಭತ್ತ, ರಾಗಿ.

24. ಎಲ್ಲ ಧರ್ಮದ ಸಾರವನ್ನು ತಿಳಿದಿರುವ ನೀವು ಈ ರೀತಿಯ ತಿರಸ್ಕಾರದ ಮಾತುಗಳನ್ನಾಡುವುದೇ ? ಎಲ್ಲಾ ಧಾನ್ಯಗಳಿಗಿಂತ ಶ್ರೇಷ್ಠವಾದುದುನೆಲ್ಲು ಅಂದರೆ ನಾನು, ಅದಲ್ಲದೆ ಗೋಧಿ ಮೊದಲಾದ ಧಾನ್ಯಗಳಿರಲು ಶ್ರೀಮಂತ ಧಾನ್ಯ ರಾಗಿ ಎಂದು ಹೇಳುವುದು ಸರಿಯೇ ? ಎಂದು ಕೇಳಿತು.
25. ಬ್ರಾಹ್ಮಣರ ಉಪನಯನದಲ್ಲಿ ವ್ರತ-ನಿಯಮಗಳನ್ನು ಪಾಲಿಸುವವರ ಸುಭೋಜನಕ್ಕೆ ,ಮದುವೆ ಸಮಾರಂಭಗಳಲ್ಲಿ, ಆರತಿಯ ಮಂತ್ರಾಕ್ಷತೆಗಾಗಿ, ಯಜ್ಞಯಾಗಾದಿಗಳಲಿ ಎಡೆಗಾಗಿ, ಅರಮನೆಯಲ್ಲಿ ಪ್ರತಿಷ್ಠಿತ ಭೋಜನಕ್ಕೆ ಹಾಗೂ ದೇವರ ನೈವೇದ್ಯಕ್ಕಾಗಿ ತನ್ನನ್ನು ಬಳಸುವರೆಂದು ಗರ್ವದಿಂದ ಹೇಳಿಕೊಂಡಿತು.

26. ನರೆದಲಗನು ವ್ರಿಹಿಯನ್ನು "ನೀನು ಸತ್ಯಹೀನನು ,ಬಡವರನ್ನು ಕಣ್ಣೆತ್ತಿ ನೋಡದವನು .ಧನಾಢ್ಯರನ್ನೂ ಬೆಂಬತ್ತುವವನು, ಆದರೆ ತಾನು ಬಾಣಂತಿಯರಿಗೆ, ರೋಗಿಗೆ ಪಥ್ಯ ನೀಡುವೆನು ಹೆಣದ ಬಾಯಿಗೆ ತುತ್ತು ನೀನು ನಿನ್ನ ಜನ್ಮ ನಿರರ್ಥಕ ಎಂದು ಹೀಯಾಳಿಸಿತು.

27. ನರೆದಲಗನು ವ್ರಿಹಿಯನ್ನು "ನೀನು ಸತ್ಯಹೀನನು ,ಬಡವರನ್ನು ಕಣ್ಣೆತ್ತಿ ನೋಡದವನು .ಧನಾಢ್ಯರನ್ನೂ ಬೆಂಬತ್ತುವವನು, ಆದರೆ ತಾನು ಬಾಣಂತಿಯರಿಗೆ, ರೋಗಿಗೆ ಪಥ್ಯ ನೀಡುವೆನು ಹೆಣದ ಬಾಯಿಗೆ ತುತ್ತು ನೀನು ನಿನ್ನ ಜನ್ಮ ನಿರರ್ಥಕ ಎಂದು ಹೇಳಿತು.

28. ಶ್ರೀ ರಾಮನು ಅಲ್ಲಿ ನೆರೆದಿದ್ದ ಧಾನ್ಯಗಳ ವಾದ ವಿವಾದಗಳನ್ನು ಗಮನಿಸಿದ ಮೇಲೆ ಶ್ರೇಷ್ಠವಾದ ಧಾನ್ಯಗಳಲ್ಲಿ ವ್ರಿಹಿ ಹಾಗೂ ನರೆದಲಗ ಇವೆರಡನ್ನು ಆರು ತಿಂಗಳುಗಳು ಸೆರೆಯಲ್ಲಿ ಹಾಕಿದರೆ ; ಹಿರಿದು ಕಿರಿದೆಂದು ವಾದಿಸುವ ಇವರ ಪೌರುಷವನ್ನು ತಿಳಿಯಬಹುದು ಇನ್ನು ನಾವು ಅಯೋಧ್ಯಾ ಪಟ್ಟಣಕ್ಕೆ ಹೋಗುತ್ತೇವೆ. ಆನಂತರ ನಿಮ್ಮ ಸ್ಥಿತಿಯನ್ನು ಗಮನಿಸಿಕರೆಸಿಕೊಳ್ಳುತ್ತೇವೆ ಎಂದು ತೀರ್ಮಾನಿಸಿ ಅಯೋಧ್ಯಾ ಪಟ್ಟಣಕ್ಕೆ ಹೊರಟನು.

29. ಎಲ್ಲಾ ಧರ್ಮಗಳ ಸಾರವನ್ನು ತಿಳಿದವನು ಎಲ್ಲರನ್ನೂ ಸಮಾನವಾಗಿ ಕಾಣಬೇಕು. ಧಾನ್ಯಗಳಲ್ಲಿ ಒಂದನ್ನು ಶ್ರೇಷ್ಠವೆಂದು ಭಾವಿಸಿ ಉಳಿದವುಗಳನ್ನು ತಿರಸ್ಕರಿಸುವುದು ಸರಿಯಲ್ಲ ಎಂದು ಹೇಳಲಾಗಿದೆ.
30. ಶ್ರೀರಾಮನು ವಿಭೀಷಣನಿಗೆ ಇಬ್ಬರ ಶಕ್ತಿ ಮತ್ತು ಸಾಮರ್ಥ್ಯವನ್ನು ಪರೀಕ್ಷಿಸಲು ಅವರನ್ನು ಆರು ತಿಂಗಳು ಸೆರೆಮನೆಯಲ್ಲಿ ಇರಿಸುವಂತೆ ಸಲಹೆ ನೀಡಿದನು.
31. ಮತ್ಸರಿಗಳು ಇತರರ ಏಳಿಗೆಯನ್ನು ಸಹಿಸಲಾರರು ಎಂದು ಹೇಳಲಾಗಿದೆ. ಅಸೂಯೆ ಮತ್ತು ದ್ವೇಷವನ್ನು ತ್ಯಜಿಸಬೇಕು ಎಂಬ ಸಂದೇಶವನ್ನು ನೀಡಲಾಗಿದೆ.
32. ರಾಮನು ವಿಭೀಷಣನಿಗೆ ಅಯೋಧ್ಯೆಗೆ ಹೋಗಿ ಹರಿಹರ ಬ್ರಹ್ಮಾದಿಗಳನ್ನು ಕರೆಸುವಂತೆ ಹೇಳಿದನು. ಅವರ ಗುಣಗಳನ್ನು ವಿವರಿಸಿ ನ್ಯಾಯವನ್ನು ಪರಿಹರಿಸುವಂತೆ ತಿಳಿಸಿದನು.

**ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :**

| | |
|---|---|
| ಜನ್ಮಸ್ಥಳ, ಕಾಲ | 1 ಅಂಕ |
| ಕೃತಿ, ಬಿರುದು / ಪ್ರಶಸ್ತಿ | 1 ಅಂಕ |
| ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **3 ಅಂಕಗಳು** |

33. ಕನಕದಾಸ

ಕನಕದಾಸರು ಸಾ.ಶ.೧೫೦೮ರಲ್ಲಿ ಹಾವೇರಿ ಜಿಲ್ಲೆಯ ಬಾಡ ಗ್ರಾಮದಲ್ಲಿ ಜನಿಸಿದರು. ತಂದೆ-ಬೀರಪ್ಪ,ತಾಯಿ-ಬಚ್ಚಮ್ಮ.ಇವರ ಆರಾಧ್ಯದೈವ ಹಾಗೂ ಅಂಕಿತನಾಮ ಕಾಗಿನೆಲೆ ಆದಿಕೇಶವ. ಇವರ ಮೊದಲ ಹೆಸರು ತಿಮ್ಮಪ್ಪನಾಯಕ. ಇವರು ಬರೆದಿರುವ ಕೃತಿಗಳೆಂದರೆ-ಹರಿಭಕ್ತಸಾರ, ರಾಮಧಾನ್ಯಚರಿತೆ, ಮೋಹನತರಂಗಿಣಿ, ಮತ್ತು ನಳಚರಿತ್ರೆ.

**ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸನು ಹೆಸರಿಸುವುದು :**

| | |
|---|---|
| ಪ್ರಸ್ತಾರ ಹಾಕುವುದು | 1 ಅಂಕ |
| ಗಣ ವಿಭಾಗಿಸುವುದು | 1 ಅಂಕ |
| ಛಂದಸ್ಸಿನ ಹೆಸರು ಬರೆಯುವುದು | 1 ಅಂಕ |
| **ಒಟ್ಟು** | **3 ಅಂಕಗಳು** |

34. UUU UUUU UUU UU -

ಕ್ಷಿತಿಯ|ಮರರುಪ|ನಯನ| ದಲಿಸು|

UUU -UU UUU - -

ವ್ರತಸು|ಭೋಜನ|ಪರಮ|ಮಂತ್ರಾ|

UUU UU UU - U UU - UUU UUU U -

ಕ್ಷತೆಗ|ಳಲಿಶುಭ|ಶೋಭ|ನದಲಾ|ರತಿಗೆ|ಹಿರಿಯರ| ಲಿ

ಛಂದಸ್ಸಿನ ಹೆಸರು - ಭಾಮಿನಿಷಟ್ಪದಿ

**ಸಂದರ್ಭವನ್ನು ಸ್ವಾರಸ್ಯದೊಂದಿಗೆ ಬರೆಯುವುದು :**

| | |
|---|---|
| ಕರ್ತೃ, ಆಕರ ಮತ್ತು ಪದ್ಯದ ಹೆಸರು | 1 ಅಂಕ |
| ಸಂದರ್ಭದ ವಿವರಣೆ | 1 ಅಂಕ |
| ಸ್ವಾರಸ್ಯ ಮತ್ತು ಶೈಲಿ | 1 ಅಂಕ |
| **ಒಟ್ಟು** | **3 ಅಂಕಗಳು** |

35. ಆಯ್ಕೆ-ಈ ಮೇಲಿನ ವಾಕ್ಯವನ್ನು ಕನಕದಾಸರು ಬರೆದಿರುವ ರಾಮಧಾನ್ಯಚರಿತೆ ಕೃತಿಯಿಂದ ಆರಿಸಿದ ರಾಮಧಾನ್ಯಚರಿತೆ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ- ಧಾನ್ಯಗಳಲ್ಲೆಲ್ಲ ಸರ್ವಶ್ರೇಷ್ಠ ಧಾನ್ಯವೆಂದರೆ ನರೆದಲಗ ಎಂದು ಹೇಳುವ ಸಂದರ್ಭದಲ್ಲಿ ಗೌತಮ ಋಷಿಗಳು ಶ್ರೀರಾಮನಿಗೆ ಹೇಳುತ್ತಾನೆ.

ಸ್ವಾರಸ್ಯ-ನರೆದಲಗವು ಬಡವರೆಲ್ಲರಿಗೂ ಕೈಗೆಟುಕುವಂತಹುದಾಗಿದೆ. ಆರೋಗ್ಯಕರವೂ, ಪೌಷ್ಠಿಕಾಂಶದಿಂದ ಕೂಡಿದ್ದು ಶಕ್ತಿಶಾಲಿಯೂ ಆಗಿದೆ ಎಂದು ಸ್ವಾರಸ್ಯಪೂರ್ಣವಾಗಿ ವರ್ಣಿಸಲಾಗಿದೆ.

36. ಆಯ್ಕೆ-ಈ ಮೇಲಿನ ವಾಕ್ಯವನ್ನು ಕನಕದಾಸರು ಬರೆದಿರುವ ರಾಮಧಾನ್ಯಚರಿತೆ ಕೃತಿಯಿಂದ ಆರಿಸಿದ ರಾಮಧಾನ್ಯಚರಿತೆ ಪದ್ಯದಿಂದ ಆರಿಸಲಾಗಿದೆ.

ಸಂದರ್ಭ- ಗೌತಮ ಮುನಿಗಳು ಶ್ರೀರಾಮನಿಗೆ ನರೆದಲಗದ ಮಹತ್ವವನ್ನು ತಿಳಿಸಿದಾಗ ವ್ರಿಹಿಯು ನರೆದಲಗನನ್ನು ಹೀಯಾಳಿಸಿದ ಸಂದರ್ಭದಲ್ಲಿ ಈ ಮಾತು ಬಂದಿದೆ.

ಸ್ವಾರಸ್ಯ-ನರೆದಲಗ ಹಾಗೂ ವ್ರಿಹಿಗಳ ಜಗಳವನ್ನು ಬಹಳ ಸ್ವಾರಸ್ಯಕರವಾಗಿ ತಿಳಿಸಲಾಗಿದೆ.

37. ಆಯ್ಕೆ-ಈ ಮೇಲಿನ ವಾಕ್ಯವನ್ನು ಕನಕದಾಸರು ಬರೆದಿರುವ ರಾಮಧಾನ್ಯಚರಿತೆ ಕೃತಿಯಿಂದ ಆರಿಸಿದ ರಾಮಧಾನ್ಯಚರಿತೆ ಪದ್ಯದಿಂದ ಆರಿಸಲಾಗಿದೆ.
ಸಂದರ್ಭ-ಭತ್ತವು ತನ್ನ ಪ್ರತಿಷ್ಠೆಯನ್ನು ಹೇಳಿಕೊಂಡಾಗ ನರೆದಲಗವು ಮಳೆ ಬೆಳೆ ಇಲ್ಲದ ಕ್ಷಾಮ ಕಾಲದಲ್ಲಿ ಅನ್ನ ಇಲ್ಲದೆ ಕಷ್ಟ ಪಡುತ್ತಿರುವ ಪ್ರಾಣಿಗಳನ್ನು ನಾನು ಆದರಿಸಿ ಸಲಹುವೆನು ಎಂದು ಈ ಹೇಳಿದ ಸಂದರ್ಭದಲ್ಲಿ ಈ ಮಾತು ಬಂದಿದೆ.
ಸ್ವಾರಸ್ಯ-ರಾಗಿಯ ಮಹತ್ವವನ್ನು ವ್ಯಕ್ತಪಡಿಸಿರುವುದು ಇಲ್ಲಿನ ಸ್ವಾರಸ್ಯವಾಗಿದೆ.

38. ಆಯ್ಕೆ-ಈ ಮೇಲಿನ ವಾಕ್ಯವನ್ನು ಕನಕದಾಸರು ಬರೆದಿರುವ ರಾಮಧಾನ್ಯಚರಿತೆ ಕೃತಿಯಿಂದ ಆರಿಸಿದ ರಾಮಧಾನ್ಯಚರಿತೆ ಪದ್ಯದಿಂದ ಆರಿಸಲಾಗಿದೆ.
ಸಂದರ್ಭ-ನರೆದಲಗ ಹಾಗೂ ವ್ರಿಹಿ ಇವರಿಬ್ಬರ ಕರ್ತವ್ಯ ಕೇಳಿ ಅದು ವಿಪರೀತಕ್ಕೆ ಹೋಗುವುದನ್ನು ತಡೆದು ಈ ಮಾತನ್ನು ಶ್ರೀರಾಮನು ಹೇಳುತ್ತಾನೆ.
ಸ್ವಾರಸ್ಯ-ವ್ರಿಹಿ ಹಾಗೂ ನರೆದಲಗ ಇವರಿಬ್ಬರಿಲ್ಲಿ ಶ್ರೇಷ್ಠರಾರೆಂಬುದನ್ನು ತಿಳಿಯುವುದೇ ಇಲ್ಲಿನ ಸ್ವಾರಸ್ಯವಾಗಿದೆ.

39. ಆಯ್ಕೆ-ಈ ಮೇಲಿನ ವಾಕ್ಯವನ್ನು ಕನಕದಾಸರು ಬರೆದಿರುವ ರಾಮಧಾನ್ಯಚರಿತೆ ಕೃತಿಯಿಂದ ಆರಿಸಿದ ರಾಮಧಾನ್ಯಚರಿತೆ ಪದ್ಯದಿಂದ ಆರಿಸಲಾಗಿದೆ.
ಸಂದರ್ಭ- ವ್ರಿಹಿ ಮತ್ತು ನರೆದಲಗ ಇವರಿಬ್ಬರ ನ್ಯಾಯವನ್ನು ನಾವು ಮಾಡಲಾಗುತ್ತಿಲ್ಲ. ನ್ಯಾಯ ತೀರ್ಮಾನ ಮಾಡಲು ಹರಿಹರ ವಿರಂಚಿಯರನ್ನು ಕರೆಸಲಾಗುವುದು ಅಲ್ಲಿಯವರೆಗೂ ಆರು ತಿಂಗಳು ಸೆರೆಮನೆಯಲ್ಲಿರಲಿ ಎಂದು ಶ್ರೀರಾಮನು ಈ ಸಂದರ್ಭದಲ್ಲಿ ಮೇಲಿನ ಮಾತನ್ನು ಹೇಳುತ್ತಾನೆ.
ಸ್ವಾರಸ್ಯ-ವ್ರಿಹಿ ಮತ್ತು ನರೆದಲಗ ಇವರಿಬ್ಬರಲ್ಲಿ ಯಾರು ಶ್ರೇಷ್ಠರೆಂಬುದನ್ನು ತಿಳಿಸುವುದೇ ಇಲ್ಲಿನ ಸ್ವಾರಸ್ಯವಾಗಿದೆ.

40. ನೀತಿ: ಸಣ್ಣವರ ಸಹಾಯವನ್ನೂ ತಿರಸ್ಕರಿಸಬಾರದು. ನೀತಿ: ಬುದ್ಧಿವಂತಿಕೆ ಮತ್ತು ಪ್ರಯತ್ನದಿಂದ ಯಾವುದೇ ಸಮಸ್ಯೆಯನ್ನು ಪರಿಹರಿಸಬಹುದು.

**ಪದ್ಯಭಾಗ ಪೂರ್ಣ ಮಾಡುವುದು (ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣಸಾಲಿಗೆ 1 ಅಂಕ)**

41. ಮಳೆದೆಗೆದು ಬೆಳೆಯಡಗಿ ಕ್ಷಾಮದ
ವಿಲಯಕಾಲದೊಳನ್ನವಿಲ್ಲದೆ
ಅಳಿವ ಪ್ರಾಣಿಗಳಾದರಿಸಿ ಸಲಹುವೆನು ಜಗವರಿಯೆ
ಎಲವೊ ನೀನೆಲ್ಲಿಹೆಯೊ ನಿನ್ನಯ
ಬಲಗವದು ತಾನೆಲ್ಲಿಹುದು ಈ
ಹಲವು ಹುಲು ಧಾನ್ಯಗಳೆನಗೆ ಸರಿದೊರೆಯೆ ಕೇಳೆಂದ

**ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಮೌಲ್ಯವನಾಧರಿಸಿ ಸಾರಾಂಶ ಬರೆಯುವುದು :**

| | |
|---|---|
| ವಿಷಯಾಂಶಕ್ಕೆ | 3 ಅಂಕಗಳು |
| ಅಡಕವಾಗಿರುವ ಮೌಲ್ಯ ಗುರುತಿಸುವುದು, ಪದಬಂಧ- ಭಾಷಾಶೈಲಿಗೆ | 1 ಅಂಕ |
| **ಒಟ್ಟು** | **4 ಅಂಕಗಳು** |

42. ಈ ಮೇಲಿನ ಪದ್ಯವನ್ನು ಕನಕದಾಸರು ಬರೆದಿರುವ ರಾಮಧಾನ್ಯ ಚರಿತೆ ಕೃತಿಯಿಂದ ಆರಿಸಿದ ರಾಮಧಾನ್ಯ ಚರಿತೆ ಪದ್ಯ ಭಾಗದಿಂದ ಆರಿಸಲಾಗಿದೆ. ರಾಮನು ಅಕ್ಕಿ ಮತ್ತು ರಾಗಿಯ

ಗುಣವನ್ನು ಪರೀಕ್ಷಿಸಲು ಅವುಗಳನ್ನು ಆರು ತಿಂಗಳು ಸೆರೆಮನೆಗೆ ಹಾಕಲು ಹೇಳಿದನು. ಆರು ತಿಂಗಳಲ್ಲಿ ಹಿರಿದು ಕಿರಿದು ಎಂಬುದರ ಪೌರುಷವನ್ನು ಅರಿಯಬಹುದೆಂದು ರಾಮನ ಉದ್ದೇಶ. ಆರು ತಿಂಗಳ ನಂತರ ರಾಗಿ ಮತ್ತು ಭತ್ತವನ್ನು ಅಯೋಧ್ಯೆಗೆ ಕರೆಸಿಕೊಳ್ಳುವುದಾಗಿ ಹೇಳಿ ತನ್ನ ಪ್ರಯಾಣವನ್ನು ಮುಂದುವರೆಸಿದನು. ಆರು ತಿಂಗಳಲ್ಲಿ ಅಕ್ಕಿ ತನ್ನ ಕಳೆಯನ್ನು ಕಳೆದುಕೊಂಡಿತು. ರಾಗಿ ಅದೇ ಗುಣವನ್ನು ಇಟ್ಟುಕೊಂಡಿತು. ಆದ್ದರಿಂದಲೇ ರಾಗಿ ರಾಮ ಧಾನ್ಯ ಎಂದು ಹೆಸರನ್ನು ಪಡೆಯಿತು. ಇಲ್ಲಿ ರಾಮನು ಅಕ್ಕಿ ಮತ್ತು ರಾಗಿಯ ಗುಣವನ್ನು ಪರೀಕ್ಷಿಸಲು ಅವುಗಳನ್ನು ಆರು ತಿಂಗಳು ಸೆರೆಮನೆಗೆ ಹಾಕಲು ಹೇಳಿದನು. ಅವು ಹಿರಿದು ಕಿರಿದು ಎಂಬುದರ ಪೌರುಷವನ್ನು ಅರಿಯಬಹುದೆಂಬುದೇ ಇಲ್ಲಿ ಅಡಕವಾಗಿರುವ ಮೌಲ್ಯವಾಗಿದೆ.

**ಎಂಟು - ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :**

ಅಂಶಗಳನ್ನಾಧರಿಸಿ ಪತ್ತಾಂಶಕ್ಕೆ 3 ಅಂಕಗಳು
ಭಾಷಾಶೈಲಿಗೆ.ಪದಬಂಧಗಳಿಗೆ 1 ಅಂಕ
**ಒಟ್ಟು 4 ಅಂಕಗಳು**

43. ನರೆದಲಗ ಹಾಗೂ ವ್ರಿಹಿ ತಮ್ಮನ್ನು ತಾವೇ ಶ್ರೇಷ್ಠ ಎಂದು ಹೇಳುತ್ತಾ ಒಬ್ಬರು ಇನ್ನೊಬ್ಬರ ದೋಷಗಳನ್ನು ಆಡಿತೋರಿಸಿ, ಕೋಪಗೊಂಡು ಬೈಯ್ಯತೊಡಗಿದರು.ವ್ರಿಹಿಯು ತಾನೇ ಶ್ರೇಷ್ಠನೆಂದು ದೇವರಪೂಜೆಗೆ,ಆರತಿಗೆ, ಮೃಷ್ಟಾನ್ನ ಭೋಜನಕ್ಕೆ, ಉಪನಯನ, ಮುಂತಾದ ಕಾರ್ಯಗಳಿಗೆ ದೇವರ ನೈವೇದ್ಯೆಗೆ ತಾನೇ ಶ್ರೇಷ್ಠ ಎಂದು ಹೇಳಿದಾಗ ನರೆದಲಗನಿಗೂ ಇರಲಾಗಲಿಲ್ಲ. ಆ ಗನರೆದಲಗನು ಭತ್ತವನ್ನು ಕುರಿತು ನೀನು ಸತ್ಯಹೀನನು, ಪಕ್ಷಪಾತಿಯು ಧನಾಡ್ಯರನ್ನು ಬೆಂಬತ್ತಿ ಹೋಗುವವನು, ಹೆಣದ ಬಾಯಿಗೆ ತುತ್ತು. ಮಳೆ ಇಲ್ಲದೆ ಬೆಳೆ ಇಲ್ಲದ ಅನ್ನ ಕಾಣದೆ ಇರುವ ಜೀವಿಗಳಿಗೆ ತಾನು ನೆರವಾಗಿದ್ದೇನೆ ಎಂದು ಹೇಳಿತು. ಇಬ್ಬರ ವಾಗ್ವಾದವು ತಾರಕಕ್ಕೆ ಏರಿದ್ದನ್ನು ಕಂಡು ಶ್ರೀರಾಮನು ಇಬ್ಬರನ್ನೂ ತಡೆದು ಇಬ್ಬರಿಗೂ ಆರು ತಿಂಗಳು ಸೆರೆಮನೆಯಲ್ಲಿಡಲು ತೀರ್ಮಾನಿಸಿ ವಿಭೀಷಣನಿಗೆ ಅಪ್ಪಣೆ ಮಾಡಿಸಿದನು.

44. ಭತ್ತ ಮತ್ತು ರಾಗಿ ತಾನು ಶ್ರೇಷ್ಠ ತಾನು ಶ್ರೇಷ್ಠ ಎಂದು ಜಗಳವಾಡುತ್ತಾವಾದವನ್ನು ಪ್ರಾರಂಭಿಸಿದವು. ಭತ್ತವು ರಾಗಿಯನ್ನು ಉದ್ದೇಶಿಸಿ ಎಲವೋ ನರೆದಲಗ ನೀನು ನನಗೆ ಸಮಾನನೇ ? ನನ್ನನ್ನು ಎಲ್ಲರೂ ಬಲ್ಲರು. ಕುಲ ಹೀನನಾದ ನೀನು ಜಾನಕೀ ಪತಿಯ ಸನಿಹದಲ್ಲಿ ನಿನ್ನ ಪ್ರತಿಷ್ಠೆಯನ್ನು ಸುಡುಮತಿ ಹೀನ ನೀನು, ಎಂದು ಕೋಪದಿಂದ ರಾಗಿಯನ್ನು ಬೈದು ಖಂಡಿಸಿತು. ಭತ್ತವು ತನ್ನ ಪ್ರತಿಷ್ಠೆಯ ಬಗ್ಗೆ ತಿಳಿಸುತ್ತಾ ಬ್ರಾಹ್ಮಣರ ಉಪನಯನದಲ್ಲಿ, ವ್ರತ-ನಿಯಮಗಳನ್ನು ಪಾಲುಸುವವರ ಸುಭೋಜನಕ್ಕೆ ,ಮದುವೆ ಸಮಾರಂಭಗಳಲ್ಲಿ, ಆರತಿಯ ಮಂತ್ರಾಕ್ಷತೆಗಾಗಿ, ಯಜ್ಞಯಾಗಾದಿಗಳಲಿ ಎಡೆಗಾಗಿ, ಅರಮನೆಯಲ್ಲಿ ಪ್ರತಿಷ್ಠಿತ ಭೋಜನಕ್ಕೆ ಹಾಗೂ ದೇವರ ನೈವೇದ್ಯಕ್ಕಾಗಿ ತನ್ನನ್ನು ಬಳಸುವರೆಂದು ಗರ್ವದಿಂದ ಹೇಳಿಕೊಂಡಿತು.
ಭತ್ತವು ತನ್ನ ಪ್ರತಿಷ್ಠೆಯ ಬಗ್ಗೆ ಹೇಳಿಕೊಂಡಾಗ ರಾಗಿಯು ಭತ್ತವನ್ನು ಉದ್ದೇಶಿಸಿ ಸತ್ಯಹೀನನು ನೀನು ಬಡವರನ್ನು ಕಣ್ಣೆತ್ತಿಯೂ ನೋಡದೆ ಧನವಂತರ ಬೆನ್ನ ಹಿಂದೆ ಹೋಗುವ ಅಪೇಕ್ಷೆ ನಿನ್ನದು. ಏನಾದರೇನು ಬಾಣಂತಿಯರಾಗಲಿ, ರೋಗಿಗಳಾಗಲಿನಿನ್ನನ್ನುಉಪಯೋಗಿಸಲು ಸಾಧ್ಯವಿಲ್ಲ.ಅವರಿಗೆ ಪಥ್ಯ ನೀನು. ಅಲ್ಲದೆ ಹೆಣದ ಬಾಯಿಗೆ ತುತ್ತಾಗುವ ನಿನ್ನ ಜನ್ಮ ನಿರರ್ಥಕ ಎಂದಿತು. ರಾಗಿಯು ಮುಂದುವರೆದು ಮಳೆ ಬೆಳೆ ಇಲ್ಲದ ಕ್ಷಾಮ ಕಾಲದಲ್ಲಿ ಅನ್ನ ಇಲ್ಲದೆ ಅಳಿವ ಪ್ರಾಣಿಗಳನ್ನು ನಾನು ಆದರಿಸಿ ಸಲಹುವೆನು ,ನನ್ನ ಮುಂದೆ ಇತರ ಧಾನ್ಯಗಳು ತೃಣ ಸಮಾನ ಎಂದಿತು.

# ಪಠ್ಯ ಪೂರಕ ಅಧ್ಯಯನ

## 4. ಕಟ್ಟುವೆವು  ನಾವು

### ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು

1. ಕ್ಷಬ್ಧ ಸಾಗರವು ಬತ್ತಿ ಹೋಗುವ ಮುನ್ನ ಹೊಸ ನಾಡನ್ನು ಕಟ್ಟಬೇಕು.
2. ನಮ್ಮೆದೆಯ ಕನಸುಗಳೇ ಕಾಮಧೇನು.
3. ಜಾತಿ ಮತ ಬೇಧಗಳು ನಮ್ಮ ಸುತ್ತಲೂ ಇರುವ ಕಂದಕಗಳು.
4. ನಮ್ಮ ಹೆಣಗಳೇ ಕೋಟೆ ಗೋಡೆಗೆ ಮೆಟ್ಟಿಲುಗಳು.
5. ಕೆಟ್ಟದ್ದನ್ನು ನುಡಿಯುವ, ಕೆಟ್ಟದ್ದನ್ನು ಬಗೆಯುವ, ಕೆಡುಕು ಜನರಿಗೆ ರಣವೀಳ್ಯವನ್ನು ಕೊಡುವೆವು ಎಂದು ಕವಿ ಹೇಳುತ್ತಾರೆ.
6. ಹೊಸ ನೆತ್ತರುಕ್ಕಿ ಆರಿ ಹೋಗುವ ಮುನ್ನ ಹೊಸ ನಾಡೊಂದನು ಕಟ್ಟಬೇಕು ಎಂದು ಕವಿ ಹೇಳುತ್ತಾರೆ.
7. ನಮ್ಮ ಸಾವು ನೋವುಗಳೆ ಹೊಸ ನಾಡು ಕಟ್ಟಲು ತೊಟ್ಟಿಲುಗಳಾಗುತ್ತವೆ.
8. “ಕಟ್ಟುವೆವು ನಾವು ಹೊಸ ನಾಡೊಂದನು”  ಎಂಬ ಕವನದ ಕವಿ ಎಂ. ಗೋಪಾಲಕೃಷ್ಣ ಅಡಿಗರು.
9. ಕವಿಯು ಸುಖದ ಬೀಡಾದ ಹೊಸ ನಾಡನ್ನು ಕಟ್ಟಲು ಬಯಸುತ್ತಾನೆ.
10. ಜಾತಿ-ಮತ ಭೇದಗಳು ಮತ್ತು ಹಳೆಯ ರೂಢಿಗಳು ಹೊಸ ನಾಡಿನ ನಿರ್ಮಾಣಕ್ಕೆ ಅಡ್ಡಿಯಾಗಿವೆ.
11. ನಮ್ಮೆದೆಯ ಕನಸುಗಳು ಕಾಮಧೇನುವಾಗಿ ಬಯಸಿದುದನ್ನು ನೀಡುವಂತಿವೆ.
12. ವೀರನಿಗೆ ಸೋಲು ಮತ್ತು ಅಂಜುವ ಮನಸ್ಸು ಸಲ್ಲದು.
13. ಹೊಸ ನಾಡಿನ ಗುಡಿಯು ಉತ್ಸಾಹ, ಉದ್ವೇಗ ಮತ್ತು ಉದ್ರೇಕಗಳ ವೀರ ಯುವಜನರಿಂದ ನಿರ್ಮಾಣವಾಗುತ್ತದೆ.
14. ಕವಿಯು ಧೈರ್ಯ, ಏಕತೆ ಮತ್ತು ಸಾಹಸದಿಂದ ಹೊಸ ಸಮಾಜವನ್ನು ನಿರ್ಮಿಸಬೇಕು ಎಂಬ ಸಂದೇಶವನ್ನು ನೀಡಿದ್ದಾನೆ.

### ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು   (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು)  :

15. ನಾವು ಹೊಸ ನಾಡನ್ನು ಕಟ್ಟುವುದನ್ನು ತಡೆಯುವವರು ,ಹೊಡೆಯುವವರು ಯಾರಾದರೂ ಇದ್ದರೆ ಬನ್ನಿ ಕೆಡುಕು ನುಡಿಯುವ, ಕೆಡಕು ಬಗೆವಾ, ಕೆಡುಕು ಜನರೇ ಬನ್ನಿ. ನಿಮ್ಮೆಲ್ಲರನ್ನು ತೊಡೆದು ನಿಮ್ಮ ಮಸಣದ ಮೇಲೆ ಹೊಸ ನಾಡನ್ನು ಕಟ್ಟುತ್ತೇವೆ ಎಂದು ಕವಿ ಹೇಳುತ್ತಾರೆ.

16. ಹೊಸ ನೆತ್ತರುಕ್ಕಿ ಆರಿ ಹೋಗುವ ಮುನ್ನ, ಹರೆಯವೆಂಬ ಮಾಂತ್ರಿಕನ ಮಾಟ ಮಸುಳುವ ಮುನ್ನ ಉತ್ಸಾಹ ಸಾಹಸದ ಉತ್ತುಂಗದ ವೀಚಿಗಳ ಕ್ಷಬ್ಧ ಸಾಗರವು ಬತ್ತಿ ಹೋಗುವ ಮುನ್ನ ಹೊಸ ನಾಡನ್ನು ಕಟ್ಟಬೇಕು ಎಂದು ಕವಿ ಬಯಸುತ್ತಾರೆ.
17. ಹೊಸ ನಾಡಿನ ನಿರ್ಮಾಣಕ್ಕೆ ಉತ್ಸಾಹ, ಸಾಹಸ, ಧೈರ್ಯ ಮತ್ತು ಗುರಿಯ ಮೇಲಿನ ದೃಢವಾದ ಬಯಕೆಗಳು ಬೇಕಾಗಿವೆ. ಇವುಗಳಿಂದ ಅಡೆತಡೆಗಳನ್ನು ಎದುರಿಸಿ ಜಯ ಸಾಧಿಸಬಹುದು.
18. ಜಾತಿ-ಮತ ಭೇದಗಳು ಸಮಾಜವನ್ನು ವಿಭಜಿಸುವ ಕಂದಕಗಳಾಗಿವೆ ಎಂದು ಕವಿ ಹೇಳಿದ್ದಾರೆ. ಇಂತಹ ಭೇದಗಳನ್ನು ನಿವಾರಿಸಿ ಏಕತೆಯ ಸಮಾಜವನ್ನು ಕಟ್ಟಬೇಕು ಎಂಬುದು ಅವರ ಆಶಯವಾಗಿದೆ.

19. ವೀರ ಯುವಜನರು ಉತ್ಸಾಹ ಮತ್ತು ಸಾಹಸದಿಂದ ಕೂಡಿದ ಶಕ್ತಿಯಾಗಿದ್ದಾರೆ ಎಂದು ಕವಿ ಹೇಳಿದ್ದಾರೆ. ಅವರಿಂದಲೇ ಹೊಸ ನಾಡಿನ ನಿರ್ಮಾಣ ಸಾಧ್ಯವೆಂದು ನಂಬಿದ್ದಾರೆ.
20. ಯಾವುದೇ ತೊಂದರೆಗಳು ಬಂದರೂ ಧೈರ್ಯದಿಂದ ಎದುರಿಸಿ ಮುನ್ನಡೆಯಬೇಕು ಎಂದು ಕವಿ ಹೇಳುತ್ತಾರೆ. ಸೋಲಿಗೆ ಹೆದರದೆ ಅಡೆತಡೆಗಳನ್ನು ನಿವಾರಿಸಿ ಗುರಿ ಸಾಧಿಸಬೇಕು ಎಂದು ತಿಳಿಸುತ್ತಾರೆ.
21. ನಮ್ಮ ಹೃದಯದ ಕನಸುಗಳು ಕಾಮಧೇನುವಿನಂತೆ ಬಯಸಿದುದನ್ನು ನೀಡುವ ಶಕ್ತಿಯನ್ನು ಹೊಂದಿವೆ ಎಂದು ಕವಿ ಹೇಳಿದ್ದಾರೆ. ಗುರಿ ತಪ್ಪದ ಬಯಕೆ ಮತ್ತು ಪ್ರಯತ್ನದಿಂದ ಕನಸುಗಳನ್ನು ನನಸಾಗಿಸಬಹುದು.
22. ಹೊಸ ನಾಡಿನ ಗುಡಿಯು ವೀರ ಯುವಜನರ ಉತ್ಸಾಹ, ಉದ್ವೇಗ ಮತ್ತು ಉದ್ರೇಕಗಳಿಂದ ನಿರ್ಮಾಣವಾಗುತ್ತದೆ. ಅವರ ಶಕ್ತಿ ಮತ್ತು ಪರಿಶ್ರಮವೇ ನಾಡಿನ ಬೆಳವಣಿಗೆಗೆ ಆಧಾರವಾಗುತ್ತದೆ.
23. ಧೈರ್ಯ, ಏಕತೆ ಮತ್ತು ಪರಿಶ್ರಮದಿಂದ ಉತ್ತಮ ಸಮಾಜವನ್ನು ನಿರ್ಮಿಸಬೇಕು ಎಂಬುದು ಕವನದ ಮುಖ್ಯ ಸಂದೇಶವಾಗಿದೆ. ಹಳೆಯ ಕೆಟ್ಟ ಪದ್ಧತಿಗಳನ್ನು ದೂರ ಮಾಡಿ ಹೊಸ ಸುಂದರ ನಾಡನ್ನು ಕಟ್ಟಬೇಕೆಂದು ಕವಿ ಕರೆ ನೀಡಿದ್ದಾರೆ.
24. ವಿದ್ಯಾರ್ಥಿಯ ಕಲ್ಪನೆಯ ನವಭಾರತವೇ ಉತ್ತರವಾಗಿರಲಿ

---

## 5. ಆಟೋರಿಕ್ಷಾದ ರಸಪ್ರಸಂಗಗಳು

### ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು

1. ಪ್ರಾರ್ಥನೆಯಿಂದ ಮಳೆ ಬರಿಸುವುದಾಗಿ ಹೇಳಿದರು ಸಾಯಿಬಾಬಾ.
2. ಜಯನಗರದಲ್ಲಿರುವ ನ್ಯಾಷನಲ್ ಕಾಲೇಜಿನಲ್ಲಿ ಕಾರ್ಯಕ್ರಮ ಮುಗಿಯುವುದು ರಾತ್ರಿ **10** ಘಂಟೆಯಾಯಿತು
3. ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದು ಲೇಖಕರಿಗೆ ಪ್ರಯಾಸದ ಕೆಲಸವಾಗಿತ್ತು.
4. ಲೇಖಕರು ಸಮೀಪದ ಸ್ಥಳಗಳಿಗೆ ಸಾಮಾನ್ಯವಾಗಿ ನಡೆದುಕೊಂಡು ಹೋಗುತ್ತಿದ್ದರು.
5. ಆಟೋರಿಕ್ಷಾಗಳು ಲಂಗುಲಗಾಮಿಲ್ಲದಂತೆ ವೇಗವಾಗಿ ಚಲಿಸುವುದರಿಂದ ಲೇಖಕರಿಗೆ ಭಯವಾಗುತ್ತಿತ್ತು.
6. ಆಟೋರಿಕ್ಷಾ ಪ್ರಯಾಣದಿಂದ ಕೈಕಾಲು ಮುರಿಯಬಹುದು ಅಥವಾ ಜೀವಕ್ಕೆ ಅಪಾಯವಾಗಬಹುದು ಎಂದು ಹೇಳಿದ್ದಾರೆ.
7. ಮೊದಲ ಆಟೋ ಚಾಲಕನು ಸುಮ್ಮನೆ ಕುಳಿತುಕೊಳ್ಳಿ ಎಂದು ಹೇಳಿ ಲೇಖಕರ ಮಾತಿಗೆ ಸಿಡುಕಿದನು.
8. ವಿಮಾನಕ್ಕೆ ಎಮ್ಮೆ, ಹಸು, ಜನ ಅಡ್ಡ ಬರುವುದಿಲ್ಲ ಮತ್ತು ಓವರ್‌ಟೇಕ್ ಮಾಡುವ ಪ್ರಸಂಗವೂ ಇಲ್ಲ ಎಂದು ಹೇಳಿದರು.
9. ವಿಧಾನಸೌಧದ ಬಳಿ ಬಂದ ಆಟೋ ಚಾಲಕನು ಲೇಖಕರನ್ನು ನರಸಿಂಹಯ್ಯನವರಲ್ಲವೆ ಎಂದು ಗುರುತಿಸಿದನು.
10. ವಯಸ್ಸಾದ ಆಟೋ ಚಾಲಕನು ಲೇಖಕರು ಇಡ್ಲಿ ತಿನ್ನುವವರೆಗೆ ಕಾಯುತ್ತೇನೆ ಎಂದು ಆತ್ಮೀಯವಾಗಿ ಸಹಾಯ ಮಾಡಲು ಮುಂದಾದನು.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

11. ಬೆಂಗಳೂರಿನಲ್ಲಿ ಒಂದು ಕಡೆಯಿಂದ ಇನ್ನೊಂದು ಕಡೆ ಹೋಗುವುದೇ ಒಂದು ಪ್ರಯಾಸದ ಕೆಲಸ. ಎಂದು ಬೆಂಗಳೂರಿನ ಸಂಚಾರದ ಬಗ್ಗೆ ಲೇಖಕರು ಅಭಿಪ್ರಾಯ ಪಟ್ಟಿದ್ದಾರೆ.

12. ಕೈಕಾಲು ಮುರಿದುಕೊಂಡು ಮೂಳೆ ವೈದ್ಯರ ಕೈಗೆ ಸಿಕ್ಕಿ ದೇಹದಲ್ಲಿನಟ್ಟೂ, ಬೋಲ್ಟೂ ಹಾಕಿಸಿಕೊಂಡು ಬದುಕುವುದಕ್ಕಿಂತ ಅಲ್ಲಿಯೇ ಭಗವಂತನ ಪಾದಾರವಿಂದವನ್ನು ಸೇರುವುದೇಲೇಸು ಎಂದು ನನ್ನ ಅಭಿಪ್ರಾಯ.

13. "ರೀಸ್ವಾಮಿ, ಸುಮ್ಮನೆ ಕುಳಿತುಕೊಳ್ಳಿ. ನಿಮ್ಮಂತವರಿಂದಲೇ ಆಕ್ಸಿಡೆಂಟ್ ಆಗುವುದು. ಹತ್ತುವುದಕ್ಕಿಂತ ಮುಂಚೇನೆ ಅಪಶಕುನ" ಎಂದು ಸಿಡುಕಿ ಗಾಡಿ ಸ್ಟಾ ಸ್ಟಾರ್ಟ್ ಮಾಡಿದ ಚಾಲಕ.

14. "ಇಲ್ಲಪ್ಪ, ನನಗೇನೂ ಅಲ್ಲಿ ಭಯವಾಗುವುದಿಲ್ಲ. ಯಾಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರಲಿಲ್ಲ. ಜೊತೆಗೆ ವಿಮಾನವನ್ನು ಓವರ್‌ಟೇಕ್ ಮಾಡಿದ ಪ್ರಸಂಗವೂಇಲ್ಲ" ಅದಕ್ಕಾಗಿ ಲೇಖಕರಿಗೆ ವಿಮಾನಯಾನದ ಬಗ್ಗೆ ಭಯವಿರಲಿಲ್ಲ
15. ಆಟೋರಿಕ್ಷಾಗಳು ತಗ್ಗು-ಉಬ್ಬುಗಳನ್ನು ಲೆಕ್ಕಿಸದೆ ವೇಗವಾಗಿ ಚಲಿಸುತ್ತವೆ ಎಂಬ ಕಾರಣದಿಂದ ಲೇಖಕರಿಗೆ ಭಯವಿತ್ತು. ಪ್ರಯಾಣದಲ್ಲಿ ಅಪಘಾತ ಸಂಭವಿಸಬಹುದು ಎಂಬ ಆತಂಕ ಅವರಿಗಿತ್ತು.
16. ಆಟೋರಿಕ್ಷಾ ಪ್ರಯಾಣದಿಂದ ಕೈಕಾಲು ಮುರಿಯಬಹುದು ಅಥವಾ ಜೀವಕ್ಕೆ ಅಪಾಯವಾಗಬಹುದು ಎಂದು ಲೇಖಕರು ಹೇಳಿದ್ದಾರೆ. ಆದ್ದರಿಂದ ಅವರು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದರು.
17. ಅಪಘಾತಗಳು ವಿಧಿಲಿಖಿತವಾಗಿವೆ, ಯಾರೂ ಅವುಗಳನ್ನು ತಪ್ಪಿಸಲು ಸಾಧ್ಯವಿಲ್ಲ ಎಂದು ಚಾಲಕನು ಹೇಳಿದನು. ಅವನು ಕರ್ಮಸಿದ್ಧಾಂತವನ್ನು ವಿವರಿಸಲು ಪ್ರಯತ್ನಿಸಿದನು.
18. ವಿಮಾನಕ್ಕೆ ಎಮ್ಮೆ, ಹಸು ಅಥವಾ ಜನ ಅಡ್ಡ ಬರುವುದಿಲ್ಲ ಮತ್ತು ವಿಮಾನವನ್ನು ಓವರ್‌ಟೇಕ್ ಮಾಡುವ ಸಂದರ್ಭವೂ ಇಲ್ಲ ಎಂದು ಲೇಖಕರು ಹೇಳಿದರು. ಆದ್ದರಿಂದ ವಿಮಾನ ಪ್ರಯಾಣದಲ್ಲಿ ಭಯವಾಗುವುದಿಲ್ಲ ಎಂದು ತಿಳಿಸಿದರು.
19. ಆ ಆಟೋ ಚಾಲಕನು ಲೇಖಕರನ್ನು ಗುರುತಿಸಿ ವಿಶ್ವಾಸದಿಂದ ಮಾತನಾಡಿದನು. ಅವರ ಬಗ್ಗೆ ಕಾಳಜಿ ಮತ್ತು ಅನುಕಂಪವನ್ನು ವ್ಯಕ್ತಪಡಿಸಿದನು.
20. ಊಟವಿಲ್ಲದೆ ಮಲಗಬಾರದೆಂದು ಹೇಳಿ ವಿಶ್ವೇಶ್ವರಪುರದ ಸಜ್ಜನರಾವ್ ಸರ್ಕಲ್‌ಗೆ ಕರೆದುಕೊಂಡು ಹೋಗಲು ಮುಂದಾದನು. ಲೇಖಕರು ಇಡ್ಲಿ ತಿನ್ನುವವರೆಗೆ ಕಾಯುತ್ತೇನೆ ಎಂದು ಆತ್ಮೀಯತೆ ತೋರಿದನು.
21. ಎಲ್ಲಾ ಆಟೋ ಚಾಲಕರಲ್ಲೂ ಒಂದೇ ರೀತಿಯ ವರ್ತನೆ ಇರುವುದಿಲ್ಲ ಎಂಬುದು ತಿಳಿಯುತ್ತದೆ. ಕೆಲವರು ಅಸಡ್ಡೆಯಿಂದ ವರ್ತಿಸಿದರೆ, ಕೆಲವರು ಮಾನವೀಯತೆ ಮತ್ತು ಸಹಾನುಭೂತಿಯನ್ನು ತೋರಿಸುತ್ತಾರೆ.
22. ವಿದ್ಯಾರ್ಥಿಯ ವಿವೇಚನೆಯ ವಿವರಣೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುವುದು.

# 6. ಸೀಮೆ

**ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯುವುದು (ವಾಕ್ಯರೂಪದಲ್ಲಿರುವ ಪ್ರತಿ ಸರಿ ಉತ್ತರಕ್ಕೆ 1 ಅಂಕ ) :**

1. ಮುದುಕಿಯನ್ನು ಭೇಟಿಯಾದ ವ್ಯಕ್ತಿ ತಿಮ್ಮರಾಯ.
2. ತಿಮ್ಮರಾಯ ಮರಕ್ಕೆ ನೂರೆಂಟು ಹಾಕಿದಾಗ ಹಾಲಿನ ಬದಲು ರಕ್ತ ಚಿಮ್ಮತೊಡಗಿತು
3. ಮುದುಕನು ಯಾವಾಗಲೂ ತಲೆಯ ಮೇಲೆ ಕೈಹೊತ್ತುಕೊಂಡು ಭಯದಿಂದ ಕೂತಿರುತ್ತಿದ್ದನು.
4. ಹಳ್ಳಿಯಲ್ಲಿ ಮಳೆ ಇಲ್ಲದ ಕಾರಣ ದುಡಿಯಲು ತಿಮ್ಮರಾಯನು ಪಟ್ಟಣಕ್ಕೆ ಹೊರಟನು.
5. ಮುದುಕಿಯು ತಿಮ್ಮರಾಯನಿಗೆ ಹಣ್ಣಿನ ಮರವನ್ನು ತೋರಿಸಿದಳು.
6. ನೀರಿನ ಮರಕ್ಕೆ ಕೊಡಲಿಯಿಂದ ಒಂದೇಟು ಹಾಕಬೇಕಾಗಿತ್ತು.
7. ಮರಗಳನ್ನು ಮಿತವಾಗಿ ಬಳಸಬೇಕು ಮತ್ತು ಹಾಲಿನ ಮರಕ್ಕೆ ಒಂದಕ್ಕಿಂತ ಹೆಚ್ಚು ಏಟು ಹಾಕಬಾರದು ಎಂದು ಎಚ್ಚರಿಸಿದಳು.
8. ಪ್ರಕೃತಿಯ ಸಂಪತ್ತನ್ನು ದುರುಪಯೋಗಪಡಿಸಿಕೊಳ್ಳಬಾರದು ಎಂಬ ಸಂದೇಶವನ್ನು ಮುದುಕನು ನೀಡಿದ್ದಾನೆ.
9. ಭೂಮಿಯ ಸಂಪನ್ಮೂಲಗಳನ್ನು ಅತಿಯಾಗಿ ಬಳಸುವುದನ್ನು ನಿಲ್ಲಿಸಬೇಕು ಎಂಬುದಾಗಿದೆ.

**ಮೂರು - ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು (ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 2 ಅಂಕಗಳು) :**

10. ತಿಮ್ಮರಾಯಾನಿಗೆ ಮುದುಕಿಯು ಹಣ್ಣಿನ ಮರ,ನೀರಿನ ಮರ ಮತ್ತುಹಾಲಿನ ಮರಗಳನ್ನು ತೋರಿಸಿ ,ಆ ಸೀಮೆಗಳನ್ನು ನೀನು ಮೀರಬಾರದು ಎನ್ನುತ್ತಾಳೆ

11. ಶಿವಪುರದ ಮುದುಕ ಯಾವಾಗಲೂ ತಲೆಯ ಮೇಲೆ ಕೈ ಹೊತ್ತುಕೊಂಡು ಇನ್ನೇನೋ ಆಕಾಶ ತಲೆಯ ಮೇಲೆ ಹರಿದು ಬೀಳುತ್ತದೆ ಎಂಬ ಭೀತಿಯಿಂದ ಕೂತಿರುತ್ತಿದದನು

12. ಮುದುಕನು ಹೇಳುವಂತೆ ಕಥೇಯ ನಿಜಸಂಗತಿ ಏನೆಂದರೆ ಮುದುಕನ ಕಥೆಯಲ್ಲಿ ಬರುವ ತಿಮ್ಮ ಇನ್ನೂ ಜೀವಂತವಾಗಿದ್ದಾನೆ . ಭೂಮಿಯನ್ನು ಮತ್ತು ಅವರನ್ನು ಉಳಿಸಿಕೊಳ್ಳಬಹುದು.

13. ತಿಮ್ಮರಾಯನ ಆಸೆ ಮಿತಿಮೀರಿ ಹಾಲಿನ ಮರಕ್ಕೆ ಮತ್ತೆ ಮತ್ತೆ ಏಟು ಹಾಕಿ ಪಟ್ಟಣಕ್ಕೆ ಹೋಗಿ ಹಾಲು ಹಣ್ಣು ಮಾರ ತೊಡಗಿದ. ಮುದುಕಿ ಕೋಪ ಮಾಡಿಕೊಂಡರೆ ಮತ್ತೆ ಏಟು ಹಾಕುತ್ತಿದ್ದ. ಒಂದು ದಿನ ಹಾಲಿನ ಮರಕ್ಕೆ ನೂರೇಟು ಹ�ಕಿದ . ಮರ ಕೆಳಗೆ ಬಿದ್ದು ಹಾಲಿನ ಬದಲು ರಕ್ತ ಚಿಮ್ಮ ತೊಡಗಿತು. ರಕ್ತ ಮಡುಗಟ್ಟಿ ಕೆರೆಯಾಗಿ ಹಳ್ಳ ಕೊಳ್ಳ ತೊರೆ ನದಿಯಾಗಿ ಕೊನೆಗೆ ಸಮುದ್ರವಾಗಿ ರಕ್ತದ ಕಡಲಾಗಿ ಮುಳುಗಿ ಹೋಯಿತಿ. ಆಸೆ ಮಿತಿಮೀರಿದಾಗ ಸರ್ವನಾಶ ಶತಸಿದ್ಧ.

14. ಮುದುಕನು ಯಾವಾಗಲೂ ತಲೆಯ ಮೇಲೆ ಕೈಹೊತ್ತುಕೊಂಡು ಆಕಾಶವೇ ತನ್ನ ತಲೆಯ ಮೇಲೆ ಬೀಳುತ್ತದೆ ಎಂಬಂತೆ ಭಯದಿಂದ ಕೂತಿರುತ್ತಿದ್ದನು. ಅವನ ವರ್ತನೆ ಊರಿನವರಿಗೆ ವಿಚಿತ್ರವಾಗಿ ಕಾಣುತ್ತಿತ್ತು.

15. ಹಳ್ಳಿಯಲ್ಲಿ ಮಳೆ ಇಲ್ಲದೆ ಬರಗಾಲ ಉಂಟಾಗಿದ್ದರಿಂದ ದುಡಿಯಲು ಪಟ್ಟಣಕ್ಕೆ ಹೋಗಲು ತಿಮ್ಮರಾಯನು ನಿರ್ಧರಿಸಿದನು. ಅವನು ಕುಟುಂಬದ ಜೀವನಕ್ಕಾಗಿ ಈ ಪ್ರಯಾಣ ಕೈಗೊಂಡನು.

16. ಮುದುಕಿಯು ಅವನಿಗೆ ಹಸಿವು ನೀಗಿಸಲು ಹಣ್ಣಿನ ಮರವನ್ನು ಮತ್ತು ಬಾಯಾರಿಕೆ ತಣಿಸಲು ನೀರಿನ ಮರವನ್ನು ತೋರಿಸಿದಳು. ಅವನಿಗೆ ನೆಮ್ಮದಿಯಿಂದ ಬದುಕಲು ಅವಕಾಶ ನೀಡಿದಳು.

17. ನೀರಿನ ಮರಕ್ಕೆ ಒಂದಕ್ಕಿಂತ ಹೆಚ್ಚು ಏಟು ಹಾಕಬಾರದು, ಹಣ್ಣಿನ ಮರವನ್ನು ಕಡಿಯಬಾರದು ಎಂದು ತಿಳಿಸಿದಳು. ಹಾಲಿನ ಮರಕ್ಕೂ ಮಿತಿಯಾಗಿ ಬಳಸಬೇಕು ಎಂದು ಎಚ್ಚರಿಸಿದಳು.

18. ಮಕ್ಕಳು ಹೆಚ್ಚಾಗಿ ಆಸೆಗಳು ಹೆಚ್ಚಾದ ಕಾರಣ ತಿಮ್ಮರಾಯನು ಮುದುಕಿಯ ಮಾತನ್ನು ಮರೆತನು. ಅವನು ಲೋಭದಿಂದ ಹಾಲಿನ ಮರಕ್ಕೆ ಪದೇಪದೇ ಏಟು ಹಾಕತೊಡಗಿದನು.

19. ಹಾಲಿನ ಬದಲು ಮರದಿಂದ ರಕ್ತ ಚಿಮ್ಮಲು ಪ್ರಾರಂಭವಾಯಿತು. ಆ ರಕ್ತವು ಹರಿದು ಭೂಮಿಯೆಲ್ಲಾ ರಕ್ತದ ಕಡಲಿನಲ್ಲಿ ಮುಳುಗಿದಂತೆ ಕಥೆಯಲ್ಲಿ ವಿವರಿಸಲಾಗಿದೆ.

20. ಪ್ರಕೃತಿಯ ಸಂಪನ್ಮೂಲಗಳನ್ನು ಮಿತವಾಗಿ ಬಳಸಬೇಕು ಎಂಬ ಎಚ್ಚರಿಕೆಯನ್ನು ಮುದುಕನು ನೀಡಿದ್ದಾನೆ. ಅತಿಯಾದ ಆಸೆ ಮತ್ತು ದುರಾಸೆಯಿಂದ ಭೂಮಿಗೆ ಅಪಾಯ ಉಂಟಾಗುತ್ತದೆ ಎಂದು ತಿಳಿಸಿದ್ದಾನೆ.

21. ಪ್ರಕೃತಿಯ ಸಂಪತ್ತನ್ನು ಅತಿಯಾಗಿ ಬಳಸುವುದನ್ನು ನಿಲ್ಲಿಸಬೇಕು ಎಂಬುದು ಇದರ ಅರ್ಥವಾಗಿದೆ. ಭೂಮಿ ಮತ್ತು ಮಾನವ ಜೀವನವನ್ನು ಉಳಿಸಲು ಪರಿಸರವನ್ನು ಕಾಪಾಡಬೇಕು ಎಂಬ ಸಂದೇಶವನ್ನು ನೀಡುತ್ತದೆ.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಬನಶಂಕರಿ 3 ನೇ ಹಂತ, ಬೆಂಗಳೂರು-560085

ಮತ್ತು

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ದಕ್ಷಿಣ ಜಿಲ್ಲೆ

ರಾಮನಗರ